
# ಅಪರಂಜಿ

ತಿಳಿನಗೆಯ ಕಾರಂಜಿ
ಡಿಸೆಂಬರ್ 2016



**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 34

ಸಂಚಿಕೆ – 3

ಡಿಸೆಂಬರ್ – 2016

## ಈ ಸಂಚಿಕೆಯಲ್ಲಿ .....


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 3 |
| ದ ಲೇಡಿ ಆನ್ ದ.... | **ಶಿವಕುಮಾರ್** | 5 |
| ಪತ್ರಿಕೆಗೆ ಪುನರ್ಜೀವ | **ಚಿತ್ರಾ ರಾಮಚಂದ್ರನ್** | 9 |
| ಖರ್ಚಾಗಲೇ ಇಲ್ಲ! | **ಕೆ.ಕೆ. ಗಂಗಾಧರನ್** | 13 |
| ಪ್ರಶಸ್ತಿ ಎಂಬ ಶಕ್ತಿ | **ಡಿ.ಎನ್. ಶ್ರೀನಾಥ್** | 18 |
| ತುಂತುರು | **ದಂನಾಳ** | 22 |
| ಜೇಬುಗಳ್ಳನೊಡನೆ... | **ಡಿ.ಎನ್. ಶ್ರೀನಾಥ್** | 23 |
| ಮಕ್ಕಳಿಂದ ಪಾಠ | **ಬೇಲೂರು ರಾಮಮೂರ್ತಿ** | 26 |
| ಮರೋ ಹಿರೋಶಿಮಾ | **ಯತಿರಾಜ್ ವೀರಾಂಬುಧಿ** | 29 |
| ಅಮ್ಮಾ, ನಾಳೆ ನಾನು... | **ಹ.ಶಿ. ಭೈರನಟ್ಟಿ** | 31 |
| ನನ್ನ ಬ್ಯಾಂಕ್ ಖಾತೆ | **ಎಚ್.ಆರ್. ಹನುಮಂತ ರಾವ್** | 33 |
| ಏನಮ್ಮಾ ಕಾವೇರಮ್ಮಾ... | **ನುಗ್ಗೆಹಳ್ಳಿ ಪಂಕಜ** | 37 |
| ''ವಿಗ್''ನೇಶ್ವರನೂ..... | **ಎಂ.ಕೆ. ಭಾಸ್ಕರ ರಾವ್** | 39 |


**ಮುಖಪುಟ ವ್ಯಂಗ್ಯಚಿತ್ರ – ಕೃಪೆ – ಅಂತರ್ಜಾಲ**

**ಒಳಪುಟಗಳ ವ್ಯಂಗ್ಯಚಿತ್ರಗಳು – ರಘುಪತಿ ಶೃಂಗೇರಿ**

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಮಲ್ಯ ಹಸ್ತಾಂತರಕ್ಕೆ ಮನವಿ – ಸುದ್ದಿ

***● ಬ್ರಿಟಿಷ್ ಪ್ರಧಾನಿ 'ಮೇ'! ಅಂದರಂತೆ !!***

★★★

ದೇಶದ ಶೇ. 14 ರಷ್ಟು ಜನರಲ್ಲಿ ಮಾನಸಿಕ ಅನಾರೋಗ್ಯ – ನಿಮ್ಹಾನ್ಸ್ ಸುದ್ದಿ

***● ಅವರಿಗೆ ಅಪರಂಜಿ ಕಡ್ಡಾಯವಾಗಿ ಕಳಿಸಿ ನೋಡಬಹುದು !!***

★★★

ಉಕ್ಕಿನ ಸೇತುವೆ ಬಗ್ಗೆ ತೀವ್ರ ಕೋಪ ಉಕ್ಕುತ್ತಿರುವಂತಿದೆ !!

★★★

ಪಾಸ್ – ಫೇಲ್ ನಿರ್ಧಾರ ರಾಜ್ಯಗಳ ವಿವೇಚನೆಗೆ – ಸ್ಕೂಲ್ ಸುದ್ದಿ

***● ಯಾವ ರಾಜ್ಯಗಳು ಪಾಸಾಗುತ್ತವೆ ಎಂದು ನೋಡಬೇಕು !!***

★★★

ಉತ್ತರ ಪ್ರದೇಶದ ಯಾದಲೀ ಕಲಹಕ್ಕೆ ಉತ್ತರ ಇನ್ನೂ ಸಿಕ್ಕಿಲ್ಲ !!

★★★

ಪುರುಷರ ಮೇಲಿನ ಹಿಂಸೆ ತಡೆಗೆ ಒತ್ತಾಯ – ಪತ್ರಿಕೆ

***● ಅಪರಂಜಿ ನಸುನಕ್ಕಳಂತೆ !!***

★★★

''ಸರ್ಕಾರಕ್ಕೆ ರಾಜಕೀಯ ಹಿತಾಸಕ್ತಿಯೇ ಮುಖ್ಯ'' – ಹೇಳಿಕೆ

***● ಕಠೋರ – ಸತ್ಯ ಎಂದರೆ ಇದೇ !!***

★★★

ನಿಗಮ – ಮಂಡಳಿ ಅಧ್ಯಕ್ಷರ ನೇಮಕ ಪಟ್ಟಿ ಕಗ್ಗಂಟು – ಪತ್ರಿಕೆ

***● ಜನಸೇವೆ ಮಾಡಲು ಕಾರ್ಯಕರ್ತರು ಮುನ್ನುಗ್ಗುತ್ತಿರುವುದನ್ನು ನೋಡಿ ಅಪರಂಜಿ ಸಂತೋಷ ಪಟ್ಟಳಂತೆ !!***

★★★

# ನಮ್ಮ ನಿಮ್ಮಲ್ಲಿ

**ಈ** ತಿಂಗಳ ಸಂಚಿಕೆಯನ್ನು ವಿವಿಧ ಭಾಷೆಗಳ ನಗೆಬರಹಗಳ ಪರಿಚಯಕ್ಕಾಗಿ ಮೀಸಲಿಟ್ಟಿದೆ. ಭಾಷೆ, ಸಂಸ್ಕೃತಿಗಳಿಗನುಗುಣವಾಗಿ ಹಾಸ್ಯಪ್ರಜ್ಞೆಯೂ ಬದಲಾಗುತ್ತದೆಯೇ? ಎಂಬ ಪ್ರಶ್ನೆ ನನ್ನನ್ನು ಬಹುದಿನಗಳಿಂದ ಕಾಡುತ್ತಿತ್ತು. ಹಿಂದೊಮ್ಮೆ (ಬಹು ಹಿಂದೆ, ಅರುವತ್ತರ ದಶಕದಲ್ಲಿ!) ನಾನು ಇಂಗ್ಲೆಂಡಿನಲ್ಲಿ ತಾಂತ್ರಿಕ ತರಬೇತಿ ಪಡೆಯುತ್ತಿದ್ದೆ.. ರಜೆಯ ಪ್ರಯುಕ್ತ ನಾನು ಸ್ವಿಟ್ಜರ್ಲೆಂಡಿನ ಡವೋಸ್ ಪಟ್ಟಣಕ್ಕೆ ಹೋಗಿ ಹಿಂತಿರುಗಿ ಇಂಗ್ಲೆಂಡಿಗೆ ಬಂದಿದ್ದೆ. ಆ ಊರಿನ ಸ್ವಚ್ಛತೆ, ಆಲ್ಪ್ಸ್ ಬೆಟ್ಟಗಳ ರಮಣೀಯ ಸೌಂದರ್ಯ, ಜನಗಳ ಸೌಹಾರ್ದತೆ ಇವನೆಲ್ಲಾ ನನ್ನ ಗೆಳೆಯ ಬ್ರಯಾನ್ ಗೆ ವಿವರಿಸುತ್ತಿದ್ದಾಗ, ಆತ ಮಧ್ಯೆ ಬಾಯಿಹಾಕಿ, ''ಅದೆಲ್ಲಾ, ಸರಿ, ನೀನು ಆ ಊರಿನಲ್ಲಿ ಒಂದು ವಾರ ಇದ್ದೆ ಅಂದೆಯಲ್ಲಾ, ಆ ಅವಧಿಯಲ್ಲಿ ಯಾರಾದರೂ ನಕ್ಕಿದ್ದು ನೋಡಿದೆಯಾ?'' ಅಂತ ಕೇಳಿದ. ಅರೆ, ಎಷ್ಟು ನಿಜ ಅನಿಸಿತು. ನನಗೆ ಜರ್ಮನ್ ಭಾಷೆ ಬರುತ್ತಿದ್ದುದರಿಂದ ನಾನು ಸರಾಗವಾಗಿ ಅನೇಕ ಸ್ವಿಸ್ ಜನರೊಂದಿಗೆ ಬೇಕಾದಷ್ಟು ಹರಟೆಹೊಡೆದು ಬಂದಿದ್ದರೂ, ಅವರೊಂದಿಗೆ ಯಾವ ಜೋಕನ್ನೂ ಹಂಚಿಕೊಂಡಿದ್ದು ನೆನಪಿಗೆ ಬರಲಿಲ್ಲ. ಜರ್ಮನಿಯಲ್ಲಿಯೂ ಹಾಗೆ ಅಂತ ಇರಾನೀ ಮೂಲದ ಬ್ರಿಟಿಷ್ ಕಮೇಡಿಯನ್ ಓಮಿಡ್ ಡ್ಜಲೀಲಿ ಹೇಳುತ್ತಾನೆ. ''ನಾನು ಇರಾನ್ ದೇಶದ ಒಬ್ಬನೇ ಒಬ್ಬ ನಗೆಗಾರ. ಆದರೆ ಇದು ಜರ್ಮನಿಗಿಂತ ಮೂರು ಪಟ್ಟು ಹೆಚ್ಚು'' ಅಂತ ನಗಾಡುತ್ತಾನೆ ಆತ. ಇಂಗ್ಲೀಷರು ಹಾಸ್ಯಪ್ರಿಯರು. ಐರನಿ, ತಮ್ಮನ್ನು ತಾವೇ ಹೀಗಳೆದುಕೊಳ್ಳುವುದು ಇವೆಲ್ಲಾ ಆ ದೇಶದಲ್ಲಿ ಬಹು ಸಾಮಾನ್ಯ. ನಾನೊಮ್ಮೆ ಯೂಸ್ಟನ್ ರೈಲು ನಿಲ್ದಾಣದಲ್ಲಿ ಟಿಕೆಟ್ ಕೊಳ್ಳಲು ಹೋಗಿದ್ದೆ. ರೈಲು ಹೊರಡುಕ್ಕೆ ಇನ್ನೂ ಒಂದೂವರೆ ಗಂಟೆ ಇತ್ತು. ಬೂತಿನಲ್ಲಿ ಟಿಕೆಟ್ ಮಾರುವಾತ ನನನು ನೋಡಿ ''ಅರೆ, ಯಾಕಿಷ್ಟು ಲೇಟು?'' ಅಂತ ಕೇಳಿದ. ನಾನು ಮುಗ್ಧತೆಯಿಂದ ''ಮುಂಚೇನೇ ಬಂದಿದೀನಲ್ಲಾ?'' ಅಂತ ಮರು ಪ್ರಶ್ನೆ ಹಾಕಿದೆ. ನನ್ನಂತಹ ಹುಂಬನೊಡನೆ ಏನು ಮಾತು ಅಂತ ಆತ ಮಾತಿಲ್ಲದೇ ಟಿಕೆಟ್ ಕೊಟ್ಟು ನನ್ನನ್ನು ಸಾಗಹಾಕಿದ.

ತಮಿಳರ ಹಾಸ್ಯಪ್ರಜ್ಞೆ ಬಹು ಹರಿತ. ಅದರಲ್ಲೂ ಅವರ ಟಿ.ವಿ. ಸೀರಿಯಲ್‌ಗಳ ಹಾಸ್ಯ ಕಚಗುಳಿ ಇಡುವಂತಹದು. ನಮ್ಮ ಕನ್ನಡದ ಟಿ.ವಿ ಜನರು ಯಾವಾಗ ಆ ಮಟ್ಟಕ್ಕೆ ಏರುತ್ತಾರೋ ನನಗೆ ತಿಳಿಯದು. ಒಂದು ಉದಾಹರಣೆ. ಒಬ್ಬ ಡಾಕ್ಟರ ಹತ್ತಿರ ಹೋಗಿ ಮನೆಗೆ ಹಿಂತಿರುಗಿರುತ್ತಾನೆ. ಮನೆಯಲ್ಲಿ ಹೆಂಡತಿಗೆ ಗಂಡನ ಆರೋಗ್ಯದ ಬಗ್ಗೆ ಕಾತರ. ''ಏನಂದ್ರೂ ಡಾಕ್ಟರ್?'' ಅಂತ ಆಕೆ ಕೇಳುತ್ತಾಳೆ. ''ನನಗೆ ಸಕ್ಕರೆ ಖಾಯಿತೆ ಇದೆ ಅಂತ ಹೇಳಿದ್ರು'' ಎನುತ್ತಾನೆ ಮನೆ ಯಜಮಾನ. ''ಹಾಗಾದ್ರೆ ಇನ್ನು ಮೇಲೆ ಸಕ್ಕರೆ ತಿನ್ನೋ ಹಾಗಿಲ್ಲ'' ಅಂತಾಳೆ ಹೆಂಡತಿ. ಅದಕ್ಕೆ ಅವ, ''ಹೌದು, ಸಕ್ಕರೆ ತಿನ್ನೋ ಹಾಗಿಲ್ಲ, ಆದರೆ ಸಕ್ಕರೆ ಕ್ಯೂನಲ್ಲಿ ನಿಲ್ಲಬಹುದು!'' ಅಂತ ಉತ್ತರಿಸುತ್ತಾನೆ!

ಮರಾಠಿ ಹಾಸ್ಯಪ್ರಜ್ಞೆ ಬಹು ಪ್ರೌಢ ಅಂತ ಗೆಳೆಯ ವೈದ್ಯ ಯಾವಾಗಲೂ ಹೇಳುತ್ತಿರುತ್ತಾನೆ. ಪು.ಲ.ದೇಶಪಾಂಡೆ ಅವರು ಒಮ್ಮೆ ಫ್ರಾನ್ಸ್ ದೇಶದ ಪ್ರವಾಸ ಮುಗಿಸಿ

ಮುಂಬೈಗೆ ಹಿಂತಿರುಗುವ ಪರಿಸ್ಥಿತಿಯನ್ನು ಬಣ್ಣಿಸುತ್ತಾ, ''ದ್ರಾಕ್ಷಾ ಸಂಸ್ಕೃತಿಯಿಂದ ರುದ್ರಾಕ್ಷಾ ಸಂಸ್ಕೃತಿಗೆ ಬಂದಂತಾಯಿತು'' ಎನುತ್ತಾರೆ. ಪುಣೆಯಲ್ಲಿ ಅವರ ಭಾಷಣ ಇದೆ ಎಂದರೆ ಸಾಕು ಜನರು ಮನೆಯಿಂದ ಹೊರಡುವಾಗಲೇ ನಗುತ್ತಾ, ಸಂಜೆಯೆಲ್ಲಾ ನಗಲು ಸಿದ್ಧರಾಗಿ ಹೊರಡುತ್ತಾರಂತೆ!

ತಮಿಳು ಸಾಹಿತ್ಯದಿಂದ ಹೆಕ್ಕಿ ತೆಗೆದ ಕಿ. ಶಂಕರನಾರಾಯಣನ್ ಅವರ ಪತ್ರಿಕೆಗೆ ಪುನರ್ಜೀವ ಎಂಬ ಲೇಖನವನ್ನು ನಮ್ಮ ಅಪರಂಜಿ ಬಳಗದ ಚಿತ್ರಾ ರಾಮಚಂದ್ರನ್ ಅವರು ಬಹು ಸಮರ್ಥವಾಗಿ ಭಾಷಾಂತರಿಸಿದ್ದಾರೆ. ಯುದ್ಧಕಾಲದಲ್ಲಿ ತಮಿಳುನಾಡಿನಲ್ಲಿ ಇದ್ದ ಪತ್ರಿಕೋದ್ಯಮದ ಒಂದು ಪಕ್ಷಿನೋಟವನ್ನು ಇಲ್ಲಿ ಕಾಣಬಹುದು. ಮಲೆಯಾಳಂ ಸಾಹಿತ್ಯದ ಎಂ.ರಾಮಕೃಷ್ಣನ್ ಅವರ ''ಖರ್ಚಾಗಲೇ ಇಲ್ಲ'' ಎಂಬ ಬಹು ತಮಾಷೆ ಬರಹವನ್ನು ಕೆ.ಕೆ.ಗಂಗಾಧರನ್ ಕನ್ನಡಿಸಿದ್ದಾರೆ. ಹಿಂದಿ ಸಾಹಿತ್ಯದ ಸೂರ್ಯಬಾಲಾ ಅವರು ಬರೆದಿರುವ ಪ್ರಶಸ್ತಿಗಳ ಬಗ್ಗೆ ಹಪಹಪಿಸುವ ಲೇಖನವನ್ನು ಡಿ.ಎನ್ ಶ್ರೀನಾಥ ಅವರು ಕನ್ನಡೀಕರಿಸಿದ್ದಾರೆ. ಗುಜರಾತಿ ಸಾಹಿತ್ಯದಿಂದ ನಮಗೆ ಜೇಬುಗಳ್ಳರ ಲೋಕದ ಒಂದು ದೃಶ್ಯ ಕಾಣಸಿಗುತ್ತದೆ. ವಿನೋದ್ ಭಟ್ಟ ಅವರ ಈ ಬರಹವನ್ನು ಕನ್ನಡಿಸಿರುವವರು ಡಿ.ಎನ್ ಶ್ರೀನಾಥ್. ಇಂಗ್ಲೀಷ್ ಹಾಸ್ಯಸಾಹಿತ್ಯದಲ್ಲಿ ಅಮೆರಿಕೆಯ ಜೇಮ್ಸ್ ಥರ್ಬರ್ ಬಹು ಖ್ಯಾತಿವಂತ ಸಾಹಿತಿ. ಈತನ ಲೇಖನವೊಂದನ್ನು ಅದರೊಂದಿಗಿನ ವ್ಯಂಗ್ಯ ಚಿತ್ರಗಳ ಸಹಿತ ನಾನು ಭಾಷಾಂತರಿಸಿರುವೆ. ಒಟ್ಟಿನಲ್ಲಿ ಈ ಸಂಚಿಕೆ ವಿವಿಧ ಭಾಷೆಗಳ ಸಂಸ್ಕೃತಿಯನ್ನು ನಮ್ಮ ಓದುಗರಿಗೆ ಪರಿಚಯಿಸುತ್ತೆಂಬ ನಂಬಿಕೆ ನಮ್ಮದು.

**ಶಿವಕುಮಾರ್**

---

### ಎಟಿಎಂ ಭಾಷೆಯಲ್ಲಿ

ಬ್ಯಾಂಕ್ ಮೇನೇಜರ್ ಒಬ್ಬರು ಹೊಟೇಲಿಗೆ ಹೋದರು.

ಮೇನೇಜರ್ : ಏನಿದೆ ತಿಂಡಿ?

ಮಾಣಿ : ದೋಸೆ, ಖಾರಾ ಬಾತ್, ಕೇಸರಿ ಬಾತ್, ಇಡ್ಲಿ ವಡೆ, ರವೆ ಇಡ್ಲಿ, ಪೊಂಗಲ್, ಬಿಸಿ ಬೇಳೆ ಬಾತ್, ಉತ್ತಪ್ಪ , ರವೆ ದೋಸೆ, ಚಿತ್ರಾನ್ನ, ಪುಳಿಯೋಗರೆ...

ಮೇನೇಜರ್ : ಸರಿ, ಇಡ್ಲಿ ಸಾಂಬಾರ್ ರವೆ ದೋಸೆ ತಾ. ಎರಡು ಪುಳಿಯೋಗರೆ ಪಾರ್ಸಲ್.

ಮಾಣಿ : ಸಾರಿ ಎಲ್ಲಾ ಖಾಲಿ.

ಮೇನೇಜರ್ : ಮತ್ತೆ ಯಾಕೆ ಅಷ್ಟು ದೊಡ್ಡ ತಿಂಡಿ ಪಟ್ಟಿ ಕೊಟ್ಟೆ?

ಮಾಣಿ : ಸರ್ ನಾನು ಪ್ರತಿ ದಿನ ಎಟಿಎಂಗೆ ಹೋಗ್ತೀನಿ ಅದು ಪಿನ್ ನಂಬರ್, ಅಕೌಂಟ್ ಡಿಟೇಲ್ಸ್, ರಶೀದಿ ಬೇಕಾ ಎಂದು ಎಲ್ಲ ಕೇಳಿದ ಮೇಲೆ 'ನೊ ಕ್ಯಾಶ್' ಎನ್ನೊಲ್ಲವೆ ಹಾಗೇನೆ ಸಾರ್ ಇದು.

ಮೇನೇಜರ್ ಹಸಿದುಕೊಂಡೇ ಎದ್ದು ಹೋದರು.

# ದ ಲೇಡಿ ಆನ್ ದ ಬುಕ್ ಕೇಸ್

**ಮೂಲ : ಜೇಮ್ಸ್ ಥರ್ಬರ್**

**ಕನ್ನಡಕ್ಕೆ : ಶಿವಕುಮಾರ್**

*(ಜೇಮ್ಸ್ ಥರ್ಬರ್ ಅಮೆರಿಕೆಯ ಖ್ಯಾತ ಹ್ಯೂಮರಿಸ್ಟ್. ಸಟೈರ್‌ಗೆ ಹೆಸರಾಗಿರುವ ನ್ಯೂಯಾರ್ಕರ್ ಪತ್ರಿಕೆಯ ಸ್ಟಾಫ್ ಬರಹಗಾರನಾಗಿದ್ದ ಥರ್ಬರ್ ತನ್ನ ವಿಶಿಷ್ಟ ಶೈಲಿಯ ವ್ಯಂಗ್ಯ ಚಿತ್ರಗಳಿಗೂ ಹೆಸರುವಾಸಿ. ಈ ಲೇಖನದ ಭಾಗವನ್ನು ಅವನ ''ದ ಬೀಸ್ಟ್ ಇನ್ ಮಿ'' ಪುಸ್ತಕದಿಂದ ಆರಿಸಿದೆ.)*

ಹನ್ನೆರಡು ವರ್ಷಗಳ ಹಿಂದೆ ನ್ಯೂಯಾರ್ಕರ್ ಪತ್ರಿಕೆಯ ಸಂಪಾದಕರಾಗಿದ್ದ ಹೆರಾಲ್ಡ್ ರಾಸ್‌ರ ಆಫೀಸಿಗೆ ಒಬ್ಬ ವ್ಯಂಗ್ಯಚಿತ್ರಕಾರ ಕೋಪದಿಂದ ನುಗ್ಗಿದನಂತೆ. ಆಗಷ್ಟೇ ಅವನ ನಾಲ್ಕು ವ್ಯಂಗ್ಯಚಿತ್ರಗಳನ್ನು ರಾಸ್ ಸಾರಾಸಗಟಾಗಿ ಕಸದ ಬುಟ್ಟಿಗೆ ಎಸೆದಿದ್ದೇ ಈ ನುಗ್ಗುವಿಕೆಗೆ ಕಾರಣ. ''ನನ್ನ ಚಿತ್ರಗಳನ್ನು ಕಸದ ಬುಟ್ಟಿಗೆ ಕಳಿಸಿ, ಐದನೆಯ ದರ್ಜೆಯ ಥರ್ಬರನ ಚಿತ್ರಗಳನ್ನು ಅಚ್ಚು ಮಾಡುತ್ತೀರಲ್ಲಾ, ಏನಿದರ ಅರ್ಥ?'' ಅಂತ ಆತ ಘರ್ಜಿಸಿದನಂತೆ. ನಿಜವಾಗಿ ತನ್ನ ಕೈಕೆಳಗಿನ ನೌಕರ ಹಾಗೂ ಗೆಳೆಯನಾಗಿದ್ದ ನನ್ನನ್ನು ಬೆಂಬಲಿಸುವ ಉದ್ದೇಶದಿಂದ ರಾಸ್, ಅವನನ್ನು ಕುರಿತು ಮುಗುಮ್ಮಾಗಿ, ''ಮೂರನೆಯ ದರ್ಜೆ!'' ಎಂದು ಅವನನು ತಿದ್ದಿ, ತನ್ನ ತೀಕ್ಷ್ಣದೃಷ್ಟಿಯನ್ನು ಆತನತ್ತ ಹಾಯಿಸಿದ್ದಕ್ಕೆ ಆತ ಹೆದರಿ ಪಲಾಯನ ಗೈದನಂತೆ.


ರಾಸ್‌ನನ್ನು ಹೊರತುಪಡಿಸಿದರೆ, ಪತ್ರಿಕೆಯ ಮಿಕ್ಕ ಸಂಪಾದಕರಿಗೆ ನನ್ನ ಚಿತ್ರಗಳ ಬಗ್ಗೆ ಅಂತಹದೇನೂ ಕುತೂಹಲವಿರಲಿಲ್ಲ. ಒಮ್ಮೆ ಒಬ್ಬ ಸಂಪಾದಕ, ''ಚಿತ್ರಗಳನ್ನು ನೀನು ಬೆಳದಿಂಗಳಿನಲ್ಲಿ ಬರೀತೀಯಾ ಅಥವಾ ನೀರಿನಲ್ಲಿ ಮುಳುಗಿ ಕೂತು ಬರೀತೀಯಾ?'' ಅಂತ ಕೇಳಿದ್ದು ನೆನಪಿದೆ. ನಾನು 'ಇಲ್ಲ' ಅಂದಮೇಲೆ ಆತ ಸುಮ್ಮನಾಗಿದ್ದ.

ಮೊನ್ನೆತಾನೆ ನಾನು ನನ್ನ ಹಳೆಯ ಚಿತ್ರಗಳನ್ನ ನೆಲದ ಮೇಲೆ ಹರಡಿ ನೋಡುತ್ತಿದ್ದಾಗ (ನಾನು ಅವನ ನೆಲದ ಮೇಲೆ ಹರಡಿ ಬರೆಯುವುದಿಲ್ಲಾರೀ, ಸುಮ್ಮನೆ ನೋಡಕ್ಕೋಸ್ಕರ ಹಾಗೆ ಹರಡಿದ್ದೆ ಅಷ್ಟೇ) ಅವು ತಾವೇ ತಾವಾಗಿ ಮೂರು ವಿವಿಧ ಗುಂಪುಗಳಲ್ಲಿ ಬಿದ್ದವು. ಈಗ ಸಮಯ ಇರೋದ್ರಿಂದ ಆ ಗುಂಪುಗಳ ಬಗ್ಗೆ ನಿಮಗೆ ಹೇಳ್ತಿದೀನಿ.

ಮೊದಲನೆಯ ಗುಂಪನ್ನು ಸುಪ್ತ ಚೇತನದ ಹೊನಲು ಅಂತ ಕರೀಬಹುದು. ಈ ಗುಂಪಿಗೆ ''ನಿನ್ನೊಂದಿಗೆ ನಾನು ಶಾಂತಿ ಕಂಡುಕೊಂಡಿದೀನಿ, ಲಿಂಡಾ, ಈಗ ನೀನು ನನ್ನ ಮುಖ ಕಂಡ್ರೆ ಮೈಪರಚಿಕೊಳ್ಳೋಹಾಗಾಗುತ್ತೇ ಅಂತೀಯಲ್ಲ!'' ಅನ್ನೋ ಚಿತ್ರ ಮತ್ತು 'ಮನೆ' ಅಂತ ತೀರ ಸಂಕ್ಷಿಪ್ತವಾಗಿರೊ ಕ್ಯಾಪ್ಷನ್ ಇರೋ ಚಿತ್ರಾನ ಉದಾಹರಿಸಬಹುದು. ಈ ಚಿತ್ರಗಳನ್ನು ರಚಿಸಿದಾಗ ಚಿತ್ರಕಾರ ಮತ್ತೇನನ್ನೋ ಯೋಚಿಸುತ್ತಿದ್ದು, ಅವನ ಕೈಗಳನ್ನು ಯಾವುದೋ ಸುಪ್ತ ಚೇತನ ಗೈಡ್ ಮಾಡಿತ್ತು ಅಂತ ತಜ್ಞರ ಅಭಿಪ್ರಾಯ.

ಖ್ಯಾತ ಮನಃಶಾಸ್ತ್ರಜ್ಞ ಯುಂಗ್ ನ ಶಿಷ್ಯರ ಪ್ರಕಾರ, ಲಿಂಡಾ ಮತ್ತು ಮನೆಯೊಡತಿ ಇವರಿಬ್ಬರೂ ಎನಿಮಾ ಅಥವಾ ಸ್ತ್ರೀತತ್ವವನ್ನು ಪ್ರತಿನಿಧಿಸ್ತಾರಂತೆ. ಇನ್ನು ಕೆಲವರು, ''ಅದೆಲ್ಲಾ ಬೊಗಳೆ, ನಿನಗೆ ಗೊತ್ತಿರೋ ಹೆಂಗಸರು ಯಾರೋ ಇರಬೇಕು'' ಅಂತ ಲೇವಡಿ ಮಾಡಿದರು.

ಈ 'ಮನೆ' ಚಿತ್ರದ ಮಾತು ಬಂದಾಗಲೆಲ್ಲಾ ನನಗೆ ಮಿಸ್ಟರ್ ಜೋನ್ಸ್ ನೆನಪಿಗೆ ಬರ್ತಾನೆ. ಹಲವು ವರ್ಷಗಳ ಹಿಂದೆ ಆತ ನನ್ನ ಆಫೀಸಿಗೆ ಬಂದು, ಯಾವುದೋ ಆರ್ಟ್ ಪತ್ರಿಕೆಯಲ್ಲಿ ಬಳಸೋಕ್ಕೆ ಅಂತ ಆ ಚಿತ್ರಾನ್ನ ಎರವಲು ಪಡೆದು ಹೋಗಿದ್ದ. ಆಮೇಲಿಂದ ನಾನು ಈ ಚಿತ್ರಾ ಸಂಪೂರ್ಣವಾಗಿ ನನ್ನ ಬಾಳಿನಿಂದ ಮರೆಯಾಯಿತು. ಎತ್ತರದ ವ್ಯಕ್ತಿ, ಸಂಭಾವಿತನಂತೆ ಕಾಣುತ್ತಿದ್ದ ಆತನ ಮುಖದಲ್ಲಿ ಸ್ವಲ್ಪ ದುಗುಡದ ಛಾಯೆ ಇತ್ತೇನೋ ಅನಿಸಿತ್ತು ಆಗ.






" ಮನೆ "


ಎರಡನೆಯ ಗುಂಪಿನ ಚಿತ್ರಗಳ ರಚನೆ, ಫ್ರಾಯ್ಡ್ ಹೇಳಿದ್ದ ಆಕಸ್ಮಿಕ ಘಟನೆಗಳು ಮತ್ತು ಅಡ್ಡಾದಿಡ್ಡಿ ಘಟನೆಗಳ ನಡುವೆ ಎಲ್ಲೋ ಬೀಳ್ತವೆ ಅನಬಹುದು. ಆಕಸ್ಮಿಕವೇ ವಿಚಿತ್ರವೋ ಅಥವಾ ನಾವೆಲ್ಲಾ ಒಂದು ಜಡ್ಡು ಹಿಡಿದ ಜಾಡಿನ ಬಂಧಿಗಳೋ ಎಂಬ ಚರ್ಚೆ ಈಗ ಬೇಡ. ಈ ಗುಂಪಿನ ಚಿತ್ರಗಳನ್ನು ರಚಿಸುವಾಗ ಯಾವ ರೀತಿಯಲ್ಲಿ ವಿವಿಧ ಶಕ್ತಿಗಳು ಅವುಗಳು ಸಾಗುವ ಹಾದಿಯನ್ನು ನಿರ್ಧರಿಸಿದವು ಎಂಬ ಊಹೆಯನ್ನು ನಿಮಗೇ ಬಿಡುವೆ. ಮಂಚದ ತಲೆಭಾಗದಲ್ಲಿನ ಸೀಲ್ ಚಿತ್ರವನ್ನ (ಆಗ್ಲಿ, ನೀ ಹೇಳ್ದ್ಹಾಗೇ ಆಗ್ಲಿ, ಸೀಲ್ ಬೊಗಳಿದ್ದು ನಿಂಗೆ ಕೇಳಿಸ್ತು) ಬರೆಯಲು ಪ್ರಾರಂಭಿಸ್ದಾಗ ಒಂದು ಬಂಡೆಯ ಮೇಲೆ ಸೀಲ್ ಕುಳಿತಿರುವ ಚಿತ್ರ ಬರೆಯಲು ಉದ್ದೇಶಿಸಿದ್ದೆ. ಬಂಡೇನ ಬರೀತಾ ಬರೀತಾ ಅದು ಮಂಚದ ತಲೆಭಾಗದ ತರ ಕಾಣಕ್ಕೆ ಶುರು ಆಯ್ತು. ಸರಿ, ಅದನ್ನೇ ಒಂದು ಮಂಚ ಮಾಡಿ ಅದರ ಮೇಲೆ ಗಂಡ ಹೆಂಡತೀರ್ನ ಮಲಗಿಸಿದ್ಮೇಲೆ ಕ್ಯಾಪ್ಷನ್, ತಾನೇ ತಾನಾಗಿ, ಸೀಲ್ ಬೆಡ್ರೂಮಿಗೆ ಬಂದಷ್ಟೇ ಸುಲಭವಾಗಿ ಹೊಳೀತು.

ಬುಕ್‌ಕೇಸಿನ ಮೇಲಿರೋ ಹೆಂಗಸಿನ ಚಿತ್ರ (ಅದು ನನ್ನ ಮೊದಲ ಹೆಂಡತಿ, ಇದು ನನ್ನ ಈಗಿನ ಮಿಸೆಸ್ ಹ್ಯಾರಿಸ್) ಬರೆಯಲು ಪ್ರಾರಂಭಿಸಿದಾಗ ಮಹಡಿ ಮೆಟ್ಟಲಿನ ಮೇಲಿನ ತುದಿಯಲ್ಲಿ ಒಬ್ಬ ಹೆಂಗಸು ಕೂತಿರೋ ತರಹ ಬರೆಯುವ ಉದ್ದೇಶ ಇತ್ತು. ಪರ್ಸ್ಪೆಕ್ಟಿವ್ ಚಿತ್ರ ಬರೆಯೋದು ನನ್ನ ಶಕ್ತಿಗೆ ಮೀರಿದ್ದರಿಂದ ಮಹಡಿ ಮೆಟ್ಟಲು ಒಂದು ಬುಕ್‌ಕೇಸ್ ತರ ಕಾಣಕ್ಕೆ ಶುರು ಆಯ್ತು. ಮೊದಲ ಹೆಂಡ್ತಿಗೆ, ಈಗಿನ ಮಿಸೆಸ್ ಹ್ಯಾರಿಸ್‌ಗೆ, ಮಿಸ್ಟರ್ ಹ್ಯಾರಿಸ್‌ಗೆ ಹಾಗೂ ಬಂದ ಅತಿಥಿಗೆ ಆಶ್ಚರ್ಯ, ನಾಚಿಕೆ ಆಗ್ತಾ ಇದ್ದಾಗಲೇ ನಾನೂ ಚಿತ್ರಾನ ಮುಗಿಸ್ದೆ.


ನ್ಯೂಯಾರ್ಕರ್‌ನೋರು ಅದನ್ನ ಪ್ರಿಂಟ್ ಮಾಡಕ್ಕೆ ಮುಂಚೆ, ನನಗೆ ಲಾಂಗ್ ಡಿಸ್ಟನ್ಸ್ ಫೋನ್ ಮಾಡಿ, ಮೊದಲ ಹೆಂಡ್ತಿ, ಬದುಕಿದ್ದಾಳೋ, ಸತ್ತಿದ್ದಾಳೋ, ಸತ್ತಿದ್ದರೆ, ಮ್ಯೂಸಿಯಮ್‌ಗಳಲ್ಲಿ ಪ್ರಾಣಿಗಳಿಗೆ ಮಾಡುವಂತೆ ಹುಲ್ಲು ತುಂಬಿಸಿ ಇಟ್ಟಿದ್ದಾರೋ ಅಂತ ಕೇಳಿದರು. ನಾನು ''ನನ್ನ ಟ್ಯಾಕ್ಸಿ ಡೆರ್ಮಿಸ್ಟ್ ಪ್ರಕಾರ ಹೆಂಗಸರನ್ನ ಸ್ಟಫ್ ಮಾಡಕ್ಕೆ ಆಗಲ್ಲ. ನಮ್ಮ ಡಾಕ್ಟರ್ ಪ್ರಕಾರ ಸತ್ತಿರೋರು ಆ ರೀತಿ ಮಂಡಿ ಮತ್ತು ಕೈಗಳ ಮೇಲೆ ಬ್ಯಾಲೆನ್ಸ್ ಮಾಡಕ್ಕೆ ಆಗಲ್ಲ. ಹಾಗಾಗಿ ಅವಳು ಖಂಡಿತ ಬದುಕಿರಬೇಕು'' ಅಂತ ಹೇಳಿದೆ ಅನ್ನಿ.



" ಆಗ್ಲಿ, ನೀ ಹೇಳ್ದ್ಹಾಗೇ ಆಗ್ಲಿ, ಸೀಲ್ ಬೊಗಳಿದ್ದು ನಿಂಗೆ ಕೇಳಿಸ್ತು "



ಮೂರನೆಯ ಗುಂಪಿನ ಚಿತ್ರಗಳನ್ನ ಎರವಲು ಪಡೆದ ಐಡಿಯಾ ಗುಂಪು ಅಂತ ಕರೀಬಹುದು. ಇದರಲ್ಲಿನ ಚಿತ್ರ(‘ಟೂಷೇ’)ವನ್ನ ಮೊದಲು ಬರೆದದ್ದು ನನ್ನ ಗೆಳೆಯ ಕಾರ್ಲ್ ರೋಸ್. ರೋಸ್ ಒಬ್ಬ ನೈಜ ಚಿತ್ರ ರಚಿಸೋ ಕಲೆಗಾರ. ಅವನು ಬರೆದ ಕತ್ತರಿಸಿದ ತಲೆಯಿರುವ ಚಿತ್ರ ಬಹು ಘೋರವಾಗಿ ಕಾಣುತ್ತಿತ್ತು. ಸಂಪಾದಕರಿಗೆ ಈ ಕ್ರೌರ್ಯ ಸಹಿಸಲಾಗದೇ, ಅವನ ಐಡಿಯಾವನ್ನು ನನಗೆ ಕೊಡಲು ತಾಕೀತು ಮಾಡಿದರು. ಹೇಗೂ ನನ್ನ ಚಿತ್ರಗಳ ಮನುಷ್ಯರು ನೈಜತೆಗೆ ಬಹುದೂರ ತಾನೆ. ನನ್ನ ಚಿತ್ರ ನೋಡಿದವರು ಯಾರೂ ತಲೆ ಹಾರಿಸಿಕೊಂಡಿರುವ ಮನುಷ್ಯ ಸತ್ತಿರುವನೆಂದು ಭಾವಿಸರು. ನನ್ನ ಚಿತ್ರದಲ್ಲಿ, ಕತ್ತಿ ಹೋರಾಟ ಮುಗಿದ ಮೇಲೆ ಅವನ ಎದುರಾಳಿ, ಕ್ಷಮೆ ಕೇಳುತ್ತಾ ಅವನ ತಲೆಯನ್ನು ಅವನಿಗೆ ವಾಪಸ್ ಮಾಡುವುದೂ, ಇವನು ತನ್ನ ತಲೆಯನ್ನು ಸರಿಮಾಡಿಕೊಂಡು ‘‘ಪರವಾಗಿಲ್ಲ ಬಿಡ್ರೀ’’ ಅಂತ ಹೇಳೋದೂ ಸಾಮಾನ್ಯ.



ಅಂತೂ ಇದು ನಾನು ಮಾಡಿರುವ ವರ್ಗೀಕರಣ. ನೀವು ಬೇಕಾದರೆ ಬೇರೆ ರೀತಿಯಲ್ಲಿ ಮಾಡಬಹುದು. ನಿಮ್ಮದೇ ಆದ ಮನೋವಿಶ್ಲೇಷಣೆಯ ಸಿದ್ಧಾಂತಗಳನ್ನ ರೂಪಿಸಬಹುದು. ಅಥವಾ ಸುಮ್ಮನೆ ಮಲಗಿ ನಿದ್ದೆ ಮಾಡಿ, ನಂತರ ಎದ್ದು ಸೆಂಟ್ರಲ್ ಪಾರ್ಕಿನಲ್ಲಿ ವಾಕಿಂಗ್ ಹೋಗಿ ಬನ್ನಿ, ಮಜವಾಗಿರುತ್ತೆ. ✤

# ಪತ್ರಿಕೆಗೆ ಪುನರ್ಜೀವ

**ಮೂಲ : ಕಿ. ಶಂಕರ ನಾರಾಯಣನ್**

**ಕನಡಕ್ಕೆ : ಚಿತ್ರಾ ರಾಮಚಂದ್ರನ್**

(ಶ್ರೀ ಕಿ. ಶಂಕರನಾರಾಯಣನ್ ಅವರು (1901–1996) ವೃತ್ತಿಯಲ್ಲಿ ವಕೀಲರಾಗಿದ್ದರೂ ಪ್ರವೃತ್ತಿಯಲ್ಲಿ ಹಾಸ್ಯ ಸಾಹಿತಿ. ಕಲೈಮಗಳ್ ಪತ್ರಿಕೆಯಲ್ಲಿ ಪ್ರಕಟವಾದ ''ಪತ್ರಿಗೈಕು ಪುತ್ತುಯಿರ್'' ಎಂಬ ನಗೆಬರಹ ಇವರ ಕೃತಿ. ಸಮಾಜವು ಎಲ್ಲ ಕ್ಷೇತ್ರಗಳಲ್ಲೂ ಬದಲಾಗುತ್ತಿದ್ದ ಒಂದು ಕಾಲಘಟ್ಟವನ್ನು ಈ ಕಥೆ ಪ್ರತಿಬಿಂಬಿಸುತ್ತದೆ.)

**ಕ**ಟ್ಟಿದ ಜುಟ್ಟು, ಇಳಿಬಿದ್ದ ಗಲ್ಲದ ಸಂಪಾದಕರು ಉಬ್ಬೆಯನ್ನೇ ಕಾಣದ ಕಂದುಬಣ್ಣದ ಖದ್ದರ್ ವಸ್ತ್ರದಿಂದ ಅಲಂಕೃತರಾಗಿ ತಮ್ಮ ಕುರ್ಚಿ ಎಂಬ ಸಿಂಹಾಸನದಲ್ಲಿ ಆಸೀನರಾಗಿ, ಕೈಯ್ಯಲ್ಲಿ ಬೀಗದಕೈ ಗೊಂಚಲನ್ನು ಹಿಡಿದು, ಛಾವಣಿಯನ್ನೇ ದಿಟ್ಟಿಸುತ್ತಾ, ಅದರ ಹೆಂಚುಗಳನ್ನು ಎಣಿಸುತ್ತಿದ್ದರು.

ಬಿಳಿಹಾಳೆಗಳ ಒಂದೇ ಮಗ್ಗುಲಲ್ಲಿ ಸ್ಪಷ್ಟವಾಗಿ ಬರೆದಿದ್ದ ಹಸ್ತಪ್ರತಿಗಳ ರಾಶಿಯೊಂದು ಮೇಜನ್ನು ಆವರಿಸಿತ್ತು. ಎದುರಿನಲ್ಲಿ ಕುಳಿತ ಸಹಾಯಕ ಸಂಪಾದಕರು, ಅಂಚೆ ಚೀಟಿ ಅಂಟಿಸಿದ್ದ ಪ್ರತಿಯೊಂದು ಹಸ್ತಪ್ರತಿಯನ್ನೂ ಲಕೋಟೆಗೆ ಸೇರಿಸಿ ಅಂಟಿಸಿ ಮೇಜಿನ ಮೇಲಿದ್ದ ಬೆತ್ತದ ತಟ್ಟೆಗೆ ತುಂಬು ತ್ತಿದ್ದರು. ಅಂಚೆ ಚೀಟಿಗಳಿಲ್ಲದ ಕೆಲವು ಹಸ್ತಪ್ರತಿಗಳು ಮೇಜಿನ ಕೆಳಗಿದ್ದ ಬೆತ್ತದ ಬುಟ್ಟಿಯ ಶೂನ್ಯವನ್ನು ನಿವಾರಿಸಲು ಸಹಕಾರಿಯಾಗಿದ್ದವು. ಸಂಪಾದಕರೂ, ಸಹಾಯಕ ಸಂಪಾದಕರೂ ನಿಟ್ಟುಸಿರೆಳೆದರು. ಸಂಪಾದಕರು ದೊಡ್ಡದಾಗಿ ಆಕಳಿಸಿಯೂ ಬಿಟ್ಟರು.

''ಪ್ರಕಟಿಸಲು ಯೋಗ್ಯವಲ್ಲದ ಈ ಬರಹಗಳು ಬಂದು ಬೆಟ್ಟದಂತೆ ರಾಶಿ ಬೀಳುತ್ತವಲ್ಲ! ಪ್ರತಿಯೊಬ್ಬರೂ ನಿಸ್ಸಾರವಾದ ವಿಷಯಗಳನ್ನೇ ಬರೆದು ಕಳಿಸಿ ಯಾಕೆ ನಮ್ಮ ಪ್ರಾಣ ಹಿಂಡುವರೋ!'' ಎಂದು ಸಂಪಾದಕರು ಪ್ರಲಾಪಿಸಿದರು.

''ಹೌದಣ್ಣ, ಹಿಂದಿ ಇಲ್ಲವೇ ಆಂಗ್ಲ ಭಾಷೆಯಲ್ಲಿ ಪ್ರಕಟವಾದ ಯಾವುದೋ ಒಂದು ಬರಹವನ್ನು, ಪಾತ್ರಗಳ ಹೆಸರು ಮಾತ್ರಾ ಬದಲಾಯಿಸಿ, ಕಚಡಾ ತಮಿಳಿನಲ್ಲಿ, ಶಾಲಾಮಕ್ಕಳಿಗಿಂತ ಕಡೆಯಾಗಿ ತರ್ಜುಮೆಮಾಡಿ, ಸ್ವಂತ ಕಲ್ಪನೆಗಳೆಂದು ಕಳುಹಿಸುತ್ತಿರುವರು. ವಿಳಾಸಗಳನ್ನ ಬರೆದೂ ಬರೆದೂ ನನ್ನ ಕೈ ಸೋತುಹೋಗಿದೆ, ಎಲ್ಲಾ ನನ್ನ ಹಣೇಬರಹ!'' ಎಂದು ಗೋಳಾಡಿದರು ಸ. ಸಂಪಾದಕರು.

ಅದೇ ಸಮಯಕ್ಕೆ ಸರಿಯಾಗಿ ''ಚಂಚಲ್, ಎಂ.ಎ.'' ಎಂದು ಅಚ್ಚಿಸಿದ್ದ ಭೇಟಿ ಚೀಟಿಯೊಂದನ್ನು ಕಪಾಲಿ ಎಂಬ ಆಫೀಸ್ ಹುಡುಗ ಸಂಪಾದಕರ ಸನ್ನಿಧಾನಕ್ಕೆ ಅರ್ಪಿಸಿ, ಅವರ ಒಪ್ಪಿಗೆ ಪಡೆದು ಈ ವ್ಯಕ್ತಿಯನ್ನು ಕರೆತಂದನು. ಚಂಚಲ್, ಎಂ.ಎ. ಆ ವರ್ಷ ತಾನೇ ಎಂ.ಎ. ಪದವಿಯನ್ನು ಪಡೆದು ತನ್ನ ಹೆಸರಿನಿಂದ ಆ ಪದವಿಯನ್ನು ಅಗಲಿಸಲು

ಮನಸ್ಸಿಲ್ಲದವನಾಗಿದ್ದನು. ನಾವು ತಾನೇ ಏಕೆ ಅದನ್ನು ಅಗಲಿಸುವ ಪಾಪಕ್ಕೆ ಒಳಗಾಗಬೇಕು? ಇಪ್ಪತ್ತರ ಪ್ರಾಯದ ಚಂಚಲ್ ಎಂ.ಎ. ಕ್ರಿಸ್ತನ ಮಹಿಳೆಯರ ಬಾಬ್ ಶಿಖಾಲಂಕಾರವನ್ನು ಧರಿಸಿ ಕೇಶರಾಶಿ ಗಾಳಿಯಲ್ಲಿ ಹಾರಾಡದಿರುವಂತೆ ಹೇರ್ ನೆಟ್ಟಿನಿಂದ ಅವನ್ನು ಬಂಧಿಸಿದ್ದನು. ಒಂದೇ ಕಣ್ಣಿಗೆ ಧರಿಸುವ ಮೋನೋಕಲ್ ಕನ್ನಡಕದ ಕಪ್ಪುದಾರ, ಹಾರದಂತೆ ಅವನ ಕತ್ತಿನಲ್ಲಿ ನೇತಾಡುತ್ತಿತ್ತು. ಆತನ ಪ್ರವೇಶದ ನಂತರ ಸ. ಸಂಪಾದಕರು ತಮ್ಮ ಬೆತ್ತದ ತಟ್ಟೆಯೊಂದಿಗೆ ನಿರ್ಗಮಿಸಿದರು. ಸಂಪಾದಕರು (ಸಂ) ಮತ್ತು ಚಂಚಲ್, ಎಂ.ಎ. (ಚಂ) ಇವರ ನಡುವಣ ಸಂಭಾಷಣೆಯನ್ನು ಕದ್ದಾಲಿಸಿದ ಕಪಾಲಿ ದಾಖಲಿಸಿರುವ ವರದಿ ಇದು.

ಸಂ : ಅಪ್ಪಾ ನಿನಗೇನಾಗಬೇಕಾಗಿದೆ?

ಚಂ : ಅಯ್ಯಾ, ಪ್ರಖ್ಯಾತವಾದ ನಿಮ್ಮ ಪತ್ರಿಕೆಗೆ ವಿಷಯ ದಾನಮಾಡಿ ಲೋಕೋದ್ಧಾರ ಮಾಡಲು ಬಂದಿರುವೆ. ಇಲ್ಲಿ ಶಾಶ್ವತವಾಗಿದ್ದು ಕಲಾ ಸೇವೆ ಮಾಡಲು ಆತುರದಿಂದಿರುವೆ.

ಸಂ : ತುಂಬಾ ಸಂತೋಷ! ಬಹಳ ಉನ್ನತ ಆಕಾಂಕ್ಷೆ! ಇದಕ್ಕೆ ನಿನ್ನ ಯೋಗ್ಯತೆಗಳೇನು?

ಚಂ : ಯಾವ ಯೋಗ್ಯತೆಗಳ ಬಗ್ಗೆ ಕೇಳುತ್ತಿರುವಿರಿ?

ಸಂ : ನೀನು ಕೇಳುತ್ತಿರುವ ಈ ಉದ್ಯೋಗಕ್ಕೆ ಅಗತ್ಯವಾದ ಯೋಗ್ಯತೆಗಳ ಬಗ್ಗೆಯೇ ನನ್ನ ಪ್ರಶ್ನೆ.

ಚಂ : ಅದು ನೀವು ಕೊಡುವ ಕೆಲಸಕ್ಕೆ ತಕ್ಕುದಾಗಿಯೇ ಇರುತ್ತದೆ.

ಸಂ : ಸಂಪಾದಕನಾಗುವೆಯಾ?

ಚಂ : ಸಂಪಾದಕತ್ವವೇ? ಅದಕ್ಕೆ, ಸತ್ಯದ ಕಲಬೆರಕೆ ಇಲ್ಲದೆ, ಅಷ್ಟು ಚೆನ್ನಾಗಿ ಬರೆಯಲು ಆಗುತ್ತದೆಯೋ ಇಲ್ಲವೋ?

ಸಂ : ವಿಮರ್ಶಕನಾಗಿರುತ್ತೀಯಾ?

ಚಂ : ಅಷ್ಟು ತ್ವರಿತವಾಗಿ ಪುಸ್ತಕಗಳನ್ನು ಓದುವುದು ನನಗೆ ಸಾಧ್ಯವಿಲ್ಲವಲ್ಲಾ!

ಸಂ : ಲಲಿತ ಕಲೆಗಳ ಬಗ್ಗೆ?

ಚಂ : ಅಯ್ಯೋ ಬೇಡಪ್ಪ. ನಾಟ್ಯವೂ ಆಯಿತು, ಗಾಯನವೂ ಆಯಿತು. ನನ್ನ ಸ್ವಂತ ಅಭಿಪ್ರಾಯದ ಪ್ರಕಾರ ''ಕರಡಿ'' ಗರುಡಾಚಾರ್ ಸಹ ಅಂತಹ ಶ್ರೇಷ್ಠ ಗಾಯಕರಲ್ಲ!

ಸಂ : ಅಯ್ಯೋ ಪಾಪವೇ!

ಚಂ : ಇವೆಲ್ಲವೂ ನನ್ನ ಕುಂದುಕೊರತೆಗಳಲ್ಲ. ಕೇವಲ ನನ್ನ ದುರಾದೃಷ್ಟ ಮಾತ್ರ!

ಸಂ : ಮತ್ತೆ, ನೀನು ಏನುತಾನೇ ಮಾಡಬಲ್ಲೆ?

ಚಂ : ಇಸ್ಪೀಟು, ಚದುರಂಗ ಚೆನ್ನಾಗಿ ಆಡಬಲ್ಲೆ!

ಸಂ : ನಿನಗೆ ಇಷ್ಟವಾದ ಕೆಲಸ ಯಾವುದು?

ಚಂ : ತೋಟ ಮಾಡುವುದು ಅಯ್ಯ, ಹೂದೋಟ ಮಾಡುವುದು.

ಸಂ : ಪ್ರಪಂಚದ ಯಾವ ವಿಷಯದ ಬಗ್ಗೆಯಾದರೂ ಆಸಕ್ತಿ ಇದೆಯೇ ನಿನಗೆ?

ಚಂ : ಏಕೆ? ನನ್ನ ಮೇಲೂ, ನನ್ನ ಪ್ರೀತಿಯ ನಾಯಿಯ ಮೇಲೂ ಅಪಾರ ಪ್ರೇಮ ಉಂಟಲ್ಲಾ!

ಸಂ : ಹೀಗೆ ಹೇಳಲು ನಿನಗೆ ನಾಚಿಕೆಯಾಗುವುದಿಲ್ಲವೇನಯ್ಯಾ?

ಚಂ : ಸತ್ಯವನ್ನು ನುಡಿಯಲು ನಾಚಿಕೆ ಏಕೆ ಅಯ್ಯಾ? ಅದರ ಹಿರಿಮೆಯನ್ನು ಪುರಾತನ ಕವಿಗಳ ಕಾವ್ಯಗಳಿಂದ ಆಯ್ದು ತೆಗೆದು ಸಂದೇಹಗಳನ್ನು ನಿವಾರಿಸಬಲ್ಲೆ.

ಸಂ : ಓ ನೀನು ಬಲೇ ಕಿಲಾಡಿ ಆಸಾಮಿ ಅನಿಸುತ್ತದೆ!

ಚಂ : ಓ! ಇಷ್ಟೇ ಏಕೆ? ನಾನು ಹೇರಳವಾದ ಛಾಯಾ ಚಿತ್ರಗಳನ್ನು ತೆಗೆದು ಸಂಗ್ರಹಿಸಿಟ್ಟಿದ್ದೇನೆ. ಇಗೋ ನೋಡಿ, ನನ್ನ ನಾಯಿ. ಎಂತಹ ವೈರಾಗ್ಯದ ಚಿಂತನೆಯಲ್ಲಿ ಮುಳುಗಿದೆ! ಅದರ ಕಣ್ಣುಗಳು ಎಷ್ಟು ದಯಾಪೂರ್ಣವಾಗಿವೆ. ಇಗೋ ನನ್ನ ಹೂದೋಟ. ಕಪ್ಪು ಉಮ್ಮತ್ತಿ ಹೂವು ಅದೆಷ್ಟು ಗಂಭೀರವಾಗಿದೆ. ಇದು ನನ್ನ ವಿದ್ಯಾಭ್ಯಾಸದ ಸಮಯ. ವಿಜಯದಶಮಿಯಂದು ಕೋಚುಗಾಡಿಯಲ್ಲಿ ಮೆರವಣಿಗೆ ಮಾಡಿಸಿ ಶಾಲೆಗೆ ಕರೆದೊಯ್ದ ವೈಭವ. ಕೋಚು ಮತ್ತು ಕುದುರೆಗಳು, ಈಗಿನ ಕಾರುಗಳ ಹಾವಳಿಯಿಂದ ಮರೆಯಾಗಿಬಿಟ್ಟಿವೆ.

ಸಂ : ಇವುಗಳಿಂದ ನನ್ನ ಪತ್ರಿಕೆಗೆ ಏನು ಪ್ರಯೋಜನ?

ಚಂ : ತಪ್ಪು ತಿಳಿಯಬಾರದು. ನನ್ನ ಬಾಳು ಅನುಭವಪೂರ್ಣವಾಗಿದೆ. ನಾನು ಹಲವಾರು ಕ್ಷೇತ್ರಗಳಲ್ಲಿ ಹೆಣಗಾಡಿದ್ದೇನೆ. ನಮ್ಮ ಊರಿನ ಭಜನೆ ಗೋಷ್ಠಿಯಲ್ಲಿ ಶ್ರುತಿ ಪೆಟ್ಟಿಗೆ ಹಿಡಿದು ಹಾಡಿದ್ದೂ ಉಂಟು.

ಸಂ : ವಿಷಯ ದಾನ ಎಂದೆಯಲ್ಲಾ, ಯಾವುದರ ಬಗ್ಗೆ ತಾನೆ ನೀನು ಬರೆಯಬಲ್ಲೆ?

ಚಂ : ಯಾವುದು ಬೇಕಾದರೂ. ಅರಿವಿನ ಒಡೆತನ ದುರ್ಮಾರ್ಗವೇ ಎಂದು ತಿಳಿಗೇಡಿಗಳನ್ನು ನಂಬಿಸಿ ಸಂತಸಪಡಿಸಬಲ್ಲೆ, ಕಚಡಾ ತಮಿಳೇ ಕಲೆಯ ಅಭಿವೃದ್ಧಿಗೆ ಅತ್ಯಗತ್ಯವೆಂದು ನಂಬಿಸಬಲ್ಲೆ. ಗೌರವಸ್ಥರು ಒಣಜಂಭದ ಢಂಬಾಚಾರಿಗಳೆಂದು ಬ್ಯಾಂಕುಗಳಲ್ಲಿ ಹಣವಿಲ್ಲದಿರುವವರು ನಂಬುವಂತೆ ಬರೆಯಬಲ್ಲೆ. ಪುರುಷರಿಗಿಂತ ಮಹಿಳೆಯೇ ಪ್ರಧಾನವೆಂದು ನಿರೂಪಿಸಿ ಮಹಿಳೆಯರನ್ನು ತೃಪ್ತಿಪಡಿಸುವೆ. ನನಗೆ ಇಷ್ಟ ಅನಿಷ್ಟಗಳ್ಯಾವುವೂ ಇಲ್ಲ...

ಸಂ : ಇರಲಿ, ನಿನ್ನ ಲೇಖನಗಳು ಯಾವುದಾದರೂ ಈಗಾಗಲೇ ಪ್ರಕಟಗೊಂಡಿವೆಯೇನು?

ಚಂ : ಇದೂ ನಿಮಗೆ ತಿಳಿಯದೇ? ನನ್ನ ''ಗಾಂಧಿಯುಮ್ ವೇರ್ಕಡಲೆಯುಮ್'' (ಗಾಂಧಿಯೂ ಹಸೀ ಕಡಲೆಕಾಯಿಯೂ) ಎಂಬ ಲೇಖನವನ್ನು ನೀವು ಹೇಗೆ ಓದಿಲ್ಲದಿರಲು ಸಾಧ್ಯ? ನನ್ನ ''ವೆಂಗಾಯಮುಮ್ ವೈಷ್ಣವಮುಮ್'' (ಈರುಳ್ಳಿಯೂ ವೈಷ್ಣವರೂ) ಎಂಬ ಲೇಖನದಲ್ಲಿ, ಶಂಕು ಚಕ್ರಗಳ ಬಗ್ಗೆ ಅಮೂಲ್ಯವಾದ ಉನ್ನತ ವಿಷಯಗಳನ್ನು ಕಲೆಹಾಕಿ ವೇದಾಂತ ವಿಷಯಗಳನ್ನು

ಪಾಮರರೂ ಅರಿತುಕೊಳ್ಳುವಂತೆ ಸರಳವಾಗಿ ರಚಿಸಿದ್ದೆ. ಅವುಗಳನ್ನು ವಿಮಾನಗಳ ಮೂಲಕ ಸಾವಿರಗಟ್ಟಲೆ ಉತ್ಸವಾದಿಗಳು ನಡೆಯುವ ಶಿವಸ್ಥಳಗಳಲ್ಲಿ ವರ್ಷಿಸಲು ಉದ್ದೇಶಿಸಿದ್ದೆ. ಈ ಹಾಳು ಯುದ್ಧ ಶುರುವಾದ ಕಾರಣ, ವಿಮಾನಗಳಿಗೆ ಈ ಸತ್ಕಾರ್ಯವನ್ನು ಮಾಡಲು ಬಿಡುವೆಲ್ಲಿ? ನನ್ನ ''ವರ್ಣಾಶ್ರಮುಮುಮ್ ವೈಟಮಿನುಮ್'' (ವರ್ಣಾಶ್ರಮವೂ ವೈಟಮಿನುಗಳೂ) ಎಂಬ ಪುಸ್ತಕದಲ್ಲಿ ಆಹಾರ ವಿಧಾನಗಳ ಬಗ್ಗೆ ಬಹಳ ರುಚಿಕರವಾಗಿ ಬರೆದು ಮುದ್ರಿಸಿದ್ದೇನೆ. ಅದನ್ನು ನಿಮ್ಮ ಚಂದಾದಾರರಿಗೆ ಕಡಿಮೆ ಬೆಲೆಗೆ ಕೊಡಬಹುದು.

ಸಂ : ಸರಿ, ಅದಿರಲಿ, ಪತ್ರಿಕೆಯಲ್ಲಿ ನಿನಗಾಗಿಯೇ ಒಂದು ಅಂಕಣವನ್ನು ಸೃಷ್ಟಿಸಬೇಕಾಗುತ್ತೋ ಏನೋ? ಅದು ಸರಿ, ನಿನ್ನ ಅಂಕಣಕ್ಕೆ ಯಾವ ಹೆಸರಿಡಬಹುದು?

ಚಂ : ''ಚಂಚಲ್, ಎಂ.ಎ. ಬರೆಯುವ ಚಾತುರ್ಯ ಚರ್ಚೆಗಳು'' ಎಂಬ ಶಿರೋನಾಮೆ ಸೂಕ್ತವಾಗಿರುತ್ತದೆ ಅನಿಸುತ್ತದೆ.

ಸಂ : ನನ್ನ ಪತ್ರಿಕೆಗೆ ಪುನಃಶ್ಚೇತನ ನೀಡಬಲ್ಲ ಯೋಗ್ಯತೆ ನಿನಗೊಬ್ಬನಿಗೇ ಇದ್ದ ಹಾಗಿದೆ. ಕೆಲಸವನ್ನು ಕೂಡಲೇ ಒಪ್ಪಿಕೋ.

ಚಂ : ಧನ್ಯವಾದಗಳು. ನಾನು ಮಾನವ ಕುಲದ ಸೇವೆಗೆಂದೇ ಕೆಲಸದಲ್ಲಿ ತೊಡಗಿಸಿಕೊಂಡಿರುವವನು. ನನಗೆ ಹೆಚ್ಚಿನದೇನೂ ಬೇಕಿಲ್ಲ. ನನ್ನ ಭಾವಚಿತ್ರ ಪ್ರತಿ ಸಂಚಿಕೆಯಲ್ಲೂ ಮುಖಪುಟದಲ್ಲಿ ಅಚ್ಚಿಸಬೇಕು. ನಿಮ್ಮ ಸಂಬಳದ ಎರಡರಷ್ಟು ವೇತನ, ತಿರುಗಾಟದ ಖರ್ಚು, ಇವೆಲ್ಲಾ................

ಸಂ : ಆಯಿತು. ಕೆಲಸವನ್ನು ಪ್ರಾರಂಭಿಸು. ಪತ್ರಿಕೆ ಅಭಿವೃದ್ಧಿಗೊಂಡು ವರಮಾನ ಹೆಚ್ಚಾದರೆ ಸಾಕು.

✤

---

## ಮ್ಯಾಚ್ ಆಗದಿದ್ದಾಗ

ಬ್ಯಾಂಕ್ ಆಗತಾನೆ ಮುಚ್ಚುತ್ತಿತ್ತು. ಆಗ ಮೇನೇಜರ್‌ಗೆ ಒಂದು ಫೋನ್ ಬಂದಿತು. 'ಸರ್ ನನಗೆ ಅರ್ಜೆಂಟಾಗಿ 10000 ಬೇಕು. ಸಿಗುವುದೆ ಸಾರ್?' ಎಂದು ಒಂದು ಹೆಣ್ಣು ಕೇಳಿತು. 'ಸರ್ ತುಂಬಾ ಅರ್ಜೆಂಟ್ ಸರ್, ಇನ್ನು 10 ನಿಮಿಷದಲ್ಲಿ ಬ್ಯಾಂಕ್‌ಗೆ ಬರುತ್ತೇನೆ' ಎಂದು ಕೋರಿಕೊಂಡಿತು.

ಆ ಧ್ವನಿ ಎಷ್ಟು ಮಧುರವಾಗಿತ್ತೆಂದರೆ ಮೇನೇಜರ್‌ಗೆ ಇಲ್ಲ ಎಂದು ಹೇಳಲು ಸಾಧ್ಯವಾಗಲೇ ಇಲ್ಲ. ಜೇನಿನಂತಹ ಧ್ವನಿಯುಳ್ಳ ಆ ಹೆಣ್ಣು ಇನ್ನೆಷ್ಟು ಸುಂದರವಾಗಿರಬಹುದು ಎಂದು ಭಾವಿಸಿದ ಮೇನೇಜರ್ 'ಬನ್ನಿ ಅಮ್ಮ, ಬನ್ನಿ ಬ್ಯಾಂಕ್ ತೆರೆದಿರುತ್ತದೆ' ಎಂದರು. ಸುಂದರಿಗಾಗಿ ಕಾದರು. ಕ್ಯಾಷಿಯರ್‌ಗೆ ಹಣ ರೆಡಿ ಮಾಡಲು ಹೇಳಿದರು. ಅವನು ಬೇಜಾರಿನಿಂದಲೇ ದುಡ್ಡು ಎಣಿಸಿದ.

10 ನಿಮಿಷದಲ್ಲಿ ಆಕೆ ಬಂದಳು. ಅರೆ! ಧಡೂತಿ ಮೈ. ಏನೇನೂ ಚೆನ್ನಾಗಿಲ್ಲ ನೋಡಲು. ಮೇನೇಜರ್‌ಗೆ ನಿರಾಶೆ ಆಯಿತು. ಆಕೆ ಚೆಕ್ ನೀಡಿದಳು. 'ಸಾರಿ ಮೇಡಂ, ಕ್ಯಾಶ್ ಕ್ಲೋಸ್ ಆಗಿದೆ' ಎಂದರು ಮೇನೇಜರ್. ಆಕೆ ನಿರಾಸೆಯಿಂದ ಹೋದಳು.

ಕ್ಯಾಷಿಯರ್‌ಗೆ ಕೋಪ ಬಂದಿತು. 'ಮತ್ತೆ ನನ್ನನ್ನು ಯಾಕೆ ಉಳಿಸಿಕೊಂಡಿರಿ?' ಎಂದು ಕೇಳಿದ.

'ನನಗೆ ಸಹಾಯ ಮಾಡಲು ಆಸೆ ಇತ್ತು , ಆದರೆ ಬ್ಯಾಂಕಿಂಗ್ ನಿಯಮದ ಪ್ರಕಾರ ವರ್ಡ್ಸ್ ಅಂಡ್ ಫಿಗರ್ ಶುಡ್ ಮ್ಯಾಚ್. ಇಲ್ಲಿ ಹಾಗಾಗಲಿಲ್ಲ. ಅದಕ್ಕೇ ಕೊಡಲಿಲ್ಲ' ಎಂದರು.

# ಖರ್ಚಾಗಲೇ ಇಲ್ಲ!

**ಮೂಲ : ಎಂ. ರಾಮಕೃಷ್ಣನ್**

**ಕನ್ನಡಕ್ಕೆ : ಕೆ.ಕೆ. ಗಂಗಾಧರನ್**

ಎರ್ನಾಕುಳಂಗೆ ಹೋಗಬೇಕಾಗಿದೆ. ಅಲ್ಲಿ ಸ್ಟುಡಿಯೋದಿಂದ ಫೋಟೋ ಕಾಪಿಗಳನ್ನು ತೆಗೆದುಕೊಳ್ಳಬೇಕು. ಹಳೆಯ ಗೆಳೆಯ ರೈಲ್ವೇ ಸ್ಟೇಷನ್ನಿನಲ್ಲಿ ಕಾಯಲು ಹೇಳಿದ್ದಾನೆ. ಪುಸ್ತಕವೊಂದನ್ನು ತರಿಸಿಕೊಡಲು ಅಂಗಡಿಯವನಿಗೆ ಹೇಳಿದ್ದೇನೆ. ಅದನ್ನು ವಿಚಾರಿಸಬೇಕು. ಜೊತೆಗೆ ಒಂದು ಇಂಗ್ಲೀಷ್ ಸಿನಿಮಾ ನೋಡಬೇಕು, ಪರ್ಸ್ ನೋಡಿದೆ. 500 ರೂ. ನೋಟೊಂದು ತಣ್ಣಗೆ ಕುಳಿತಿತ್ತು. ಪರ್ಸನ್ನು ಕೊಡವಿ ನೋಡಿದೆ. ಮೂರು ರೂಪಾಯಿ ನಾಣ್ಯಗಳು ಉದುರಿದವು. ಅವುಗಳನ್ನೆಲ್ಲಾ ಹೆಕ್ಕಿ ಪರ್ಸಿನಲ್ಲಿ ಮರುಪ್ರತಿಷ್ಠಾಪನೆ ಮಾಡಿದೆ. ಪರ್ಸ್ ಖಾಲಿ ಬಿಡಬಾರದು.

ಸರಿ, ಈ 500 ರೂಪಾಯಿ ನನ್ನ ಎಲ್ಲಾ ಅಗತ್ಯಗಳನ್ನು ಪೂರೈಸಬೇಕು. ಸ್ವಲ್ಪ ಸಂಯಮದಿಂದ ಕಾರ್ಯನಿರ್ವಹಿಸಿದರೆ ಇಷ್ಟು ಸಾಕಾಗುತ್ತದೆ. ಸಾಲದೆ ಬಂದರೆ ಸ್ಟುಡಿಯೋ ಮತ್ತು ಪುಸ್ತಕದ ಅಂಗಡಿಗಳಲ್ಲಿ ಸಾಲ ಹೇಳಬಹುದು. ಪರಿಚಯಸ್ಥರು ಒಗೆದು ಮಡಿ ಮಾಡಿದ ಜುಬ್ಬದಿಂದ ನನ್ನ ದೇಹವನ್ನ ಮರೆಮಾಡಿದೆ. ನನ್ನ ಬಹುತೇಕ ಷರ್ಟುಗಳಿಗೆ ಪಾಕೆಟಿಲ್ಲ. ಎಲ್ಲಾದರೂ ಹೊರಟಾಗ ಪರ್ಸು ತೆಗೆದುಕೊಂಡು ಹೋಗಲು ಮನಸ್ಸು ಮಾಡುವವನಲ್ಲ. ಇರುವ ಹಣವನ್ನು ಷರ್ಟಿನ ಪುಟ್ಟ ಮಡಿಕೆಯಲ್ಲಿ ಜತನದಿಂದ ಇಟ್ಟಿರುತ್ತೇನೆ. ಪಾಕೆಟ್ಟಿಲ್ಲದ ಷರ್ಟುಗಳು ನನಗೆ ನೀಡಿದ ಈ ಅಭ್ಯಾಸಬಲದಿಂದ ಪಾಕೆಟ್ ಇರುವ ಜುಬ್ಬಾ ತೊಟ್ಟಾಗಲೂ ಅದರ ತೋಳಿನಲ್ಲಿಯೇ ನಾನು ನನ್ನ ಅಮೂಲ್ಯ ರೂ. 500 ನೋಟನ್ನು ಮಡಿಚಿಟ್ಟೆ. ಬಸ್‌ಸ್ಟ್ಯಾಂಡಿನತ್ತ ಹೆಜ್ಜೆ ಹಾಕಿದೆ.

ಬಸ್ಸು ಬರಲು ಇನ್ನೂ ಹತ್ತು ನಿಮಿಷಗಳಿದ್ದವು. ಹಾಡು ಗುನುಗುತ್ತಾ ಅದರಲ್ಲೇ ಲೀನವಾಗಿದ್ದಾಗ, ಭಯಂಕರ ಮೊರೆತದೊಂದಿಗೆ ಒಂದು ಕಾರು ಬಂದು ನನ್ನ ಬಳಿ ನಿಂತುಕೊಂಡಿತು. ನೋಡಿದಾಗ ಆ ಸುಂದರವಾದ ಹೊಸ ಕಾರಿನಲ್ಲಿ ನನ್ನ ಹಳೆಯ ಸಹಪಾಠಿ ಮತ್ತು ಅಪರಿಚಿತ ಯುವತಿಯೊಬ್ಬಳನ್ನು ಕಂಡೆ.

ಹಲೋ ರಾಮಕೃಷ್ಣನ್! ಎಷ್ಟು ಕಾಲವಾಯಿತೋ ನಿನ್ನನ್ನು ಕಂಡು? ಈಗ ನೀನು ಇಲ್ಲಿದ್ದೀಯಾ? ಅವನು ಮಾತನಾಡಿದ.

''ಹೌದು'' ನಾನು ಮುಗುಳ್ನಕ್ಕೆ.

''ಎಲ್ಲಿಗೆ ಇಷ್ಟು ಬೆಳಿಗ್ಗೆ?''

''ಎರ್ನಾಕುಳಂಗೆ ಹೋಗಬೇಕಿತ್ತು. ಬಸ್ಸು ಕಾಯ್ತಾ ಇದ್ದೀನಿ.''

''ನಾವು ಅಲ್ಲಿಗೆ ಹೋಗ್ತಿದ್ದೀವಿ ಹತ್ತು ಮತ್ತೆ.''

ಆಹ್ವಾನ ಸಿಕ್ಕಿದ್ದೇ ತಡ ಕಾರಿನ ಒಳ ಸೇರಿದೆ. ಎರ್ನಾಕುಳಂಗೆ ಹೋಗುವ ಬಸ್‌ಚಾರ್ಜ್ ಉಳಿಯಿತು. ಅಂದರೆ ಉಳಿದ ಖರ್ಚುಗಳಿಗೆ ಈ ಹಣವನ್ನು ಬಳಸಲಡ್ಡಿಯಿಲ್ಲ.

''ನನ್ನ ಮದುವೆಯಾಯಿತು, ರಾಮಕೃಷ್ಣ ನಿನ್ನ ಅಡ್ರೆಸ್ಸ್ ಗೊತ್ತಿಲ್ಲದೆ ಇರೋದ್ರಿಂದ ನಿನಗೆ ತಿಳಿಸಲಿಕ್ಕಾಗಲಿಲ್ಲ ಕಣೋ, ಬೇಜಾರು ಮಾಡ್ಕೋಬೇಡ'' ಎಂದ.

ಸುಂದರಿಯಾದ ಯುವತಿ ಅವನ ಹೆಂಡತಿ. ಅದೃಷ್ಟವಂತ ನಾನು ಮೌನ ಪ್ರತಿಕ್ರಿಯೆ ನೀಡಿದೆ.

''ಈ ಕಾರು ನನ್ನ ಇನ್-ಲಾ ಕೊಟ್ಟಿದ್ದು'' ಅವನು ಮಾತು ಮುಂದುವರೆಸಿದ.

''ಚೆನ್ನಾಗಿರುವ ಮಗಳನ್ನು ಕೊಟ್ಟು ಒಂದು ಸುಂದರವಾದ ಕಾರನ್ನು ನೀಡುವ ಎಲ್ಲಾ ಮಾವಂದಿರಿಗೂ, ಜಿಂದಾಬಾದ್'' ಎಂದು ಕೂಗಬಾರದೇಕೆ? ಅಷ್ಟರಲ್ಲಿ ಅವನು ಒಂದು ಸಿಗರೇಟನ್ನು ನೀಡಿ ಘೋಷಣೆ ಕೂಗಲು ತೆರೆದ ನನ್ನ ಬಾಯಿಗೆ ಬೀಗ ಹಾಕಿದ.

ಎರ್ನಾಕುಳಂ ರೈಲ್ವೇ ಸ್ಟೇಷನ್ನಿನ ಬಳಿ ನಾನು ಇಳಿದೆ.

''ನಾವು ಸಾಯಂಕಾಲ ಏಳು ಗಂಟೆಗೆ ಹಿಂತಿರುಗುತ್ತೇವೆ. ಇಲ್ಲೇ ಕಾಯ್ತಾ ನಿಂತರೆ ಒಟ್ಟಿಗೆ ವಾಪಸ್ ಹೋಗಬಹುದು'' ಆತ ಆಹ್ವಾನಿಸಿದ.

''ಆಗಲಿ ನೋಡೋಣ'' ಎಂದು ಹೇಳಿ ಬೀಳ್ಕೊಂಡೆ.

ಹೊಟ್ಟೆ ಹಸಿಯುತ್ತಿತ್ತು. ಕಾಫಿ ಕುಡಿಯೋಣವೆಂದು ಬೆರಳುಗಳು ಜುಬ್ಬಾ ತೋಳಿನ ಸುರುಳಿಯಲ್ಲಿದ್ದ ನೋಟನ್ನು ಸ್ಪರ್ಶಿಸಿತು. ಆಗನ್ನಿಸಿತು, ರೈಲ್ವೇ ಸ್ಟೇಷನ್ನಿಗೆ ಹೋಗಿ ರೈಲಿನ ಸಮಯ ತಿಳಿದ ನಂತರ ಕಾಫಿ ಕುಡಿಯೋಣ, ಮುಂಬೈಗೆ ಹೋಗುವ ಗೆಳೆಯನನ್ನು ಭೇಟಿಯಾಗುವುದು. ನನ್ನ ಪ್ರಯಾಣದ ಮತ್ತೊಂದು ಪ್ರಮುಖ ಉದ್ದೇಶವಲ್ಲವೆ? ಎರಡು ಮೂರು ಹೆಜ್ಜೆಗಳನ್ನಿಟ್ಟಿರಬೇಕು, ಹಿಂದಿನಿಂದ ಯಾರೋ ''ರಾಮಕೃಷ್ಣಾ!'' ಎಂದು ಕರೆಯುವುದು ಕೇಳಿಸಿತು. ನಾನು ತಿರುಗಿ ನೋಡಿದೆ. ನನ್ನ ಗೆಳೆಯನೇ ಇಷ್ಟು ಸುಲಭದಲ್ಲಿ ಅವನ ಭೇಟಿಯಾಗುತ್ತದೆಂದು ತಿಳಿದಿರಲಿಲ್ಲ. ಒಟ್ಟಿನಲ್ಲಿ ಕಾದು ನಿಲ್ಲುವ ಪರಿತಾಪ ತಪ್ಪಿತಲ್ಲ!

''ನೀನು ಇಷ್ಟು ಬೇಗ ಬರ್ತೀಯಾಂತ ಗೊತ್ತಿರಲಿಲ್ಲ'' ನಗುತ್ತಾ ಅವನು ಹೇಳಿದ.

''ಒಂದು ಲಿಫ್ಟ್ ಸಿಕ್ತು... ಅದಕ್ಕೆ ಬೇಗ ಬಂದೆ'' ನಾನು ಕಾರಣ ಹೇಳಿದೆ.

''ಬಾ ಚೂರು ಕಾಫಿ ಕುಡಿಯೋಣ'' ಎಂದ.

ಬಿಸಿ ಆಮ್ಲೆಟ್, ಉಪ್ಪು ಮಿಶ್ರಿತ ಗೋಡಂಬಿ, ಸಿಹಿ ಕೇಕುಗಳು, ಸ್ಟ್ರಾಂಗ್ ಚಹಗಳನ್ನೆಲ್ಲಾ ಗಂಟಲಿನಿಂದ ಕೆಳಗಿಳಿಸುವುದು ಒಂದು ಬೆಚ್ಚನೆಯ ಅನುಭವ. ಆದರೆ ಬಿಲ್ಲು ಬಂದಾಗ, ಒಳಕ್ಕೆ ಹೋದ ವಸ್ತುಗಳೆಲ್ಲಾ ಪ್ರತಿಭಟನಾ ಸೂಚಕವಾಗಿ ಹೊರಕ್ಕೆ ಬರಬಹುದೇ ಎಂದು ನಾನು ಶಂಕಿಸಿದೆ. ನನ್ನ ಮೂಲಧನದ ಸುಮಾರು ಭಾಗ ಕಳೆದುಕೊಳ್ಳುತ್ತಿದ್ದೇನೆಂಬ ದುಃಖದಿಂದ ಜುಬ್ಬಾದ ತೋಳನ್ನು ನೇರಗೊಳಿಸಿ ರೂ. 500 ನೋಟನ್ನು ಹೊರತೆಗೆದೆ.

''ನಾನು ಕೊಡ್ತೀನಿ'' ಎಂದು ನನ್ನ ಗೆಳೆಯ ಹೇಳಿದಾಗ ಪದಬಂಧದಲ್ಲಿ ಮೊದಲ ಸ್ಥಾನಗಳಿಸಿದ ಪ್ರತೀತಿ ನನ್ನಲ್ಲುಂಟಾಯಿತು. ಆದರೂ ಅಭಿಮಾನಕ್ಕೋಸ್ಕರ ''ನೋ! ನೋ!

ನಾನು ಕೊಡ್ತೀನಿ'' ಎನ್ನುತ್ತಿದ್ದಂತೆ ವೆಯಿಟರ್ ಬಂದು ಅವನು ನೀಡಿದ ಹಣವನ್ನು ಎತ್ತಿಕೊಂಡು ಹೋದ. ಜಖಂಗೊಳ್ಳದೆ ರಕ್ಷಿಸಲ್ಪಟ್ಟ ನನ್ನ ಪ್ರೀತಿಯ ರೂ. 500 ನೋಟನ್ನು ಮತ್ತೆ ನನ್ನ ಜುಬ್ಬಾದ ಸುರುಳಿಯಲ್ಲಿ ಪ್ರತಿಷ್ಠಾಪಿಸಿದೆ. ಆದರೆ ಆ ಸಮಯವನ್ನು ನನ್ನ ಮುಖದ ಫೋಟೋ ತೆಗೆದರೆ ಅದರ ಕೆಳಗೆ ಈ ರೀತಿ ಬರೆಯಲು ಯಾರೂ ಹಿಂಜರಿಯುವುದಿಲ್ಲ: ''ಕಾಫಿಯ ಬಿಲ್ಲು ಸ್ನೇಹಿತ ಪಾವತಿಸಿದರಿಂದ ಒಬ್ಬ ಯುವಕನಿಗಾದ ನಿರಾಶೆ.''

ನನ್ನ ಅಭಿನಯ ಚೆನ್ನಾಗಿತ್ತೆಂದು ಅನಿಸುತ್ತದೆ. ನನ್ನ ಸ್ನೇಹಿತ ಹೇಳಿದ. ಏನೋ, ನಾನು ಪೇ ಮಾಡಿದ್ದಕ್ಕೆ ನಿನಗೆ ಇಷ್ಟೊಂದು ಬೇಸರವೇ? ತೊಗೋ ಒಂದು ಸಿಗರೇಟು ಸೇದು.''

ನಾನು ಸಿಗರೇಟು ಹಚ್ಚಿದೆ. ವಿದೇಶಿ ಸಿಗರೇಟಾಗಿತ್ತು ಅದು.

''ಇದು ಎಲ್ಲಿ ಸಿಕ್ತು?''

''ನೇವಿಯಲ್ಲಿರುವ ಬಂಧುವೊಬ್ಬರು ಕೊಟ್ಟಿದ್ದು'' ಎಂದು ಹೇಳುತ್ತಾ ಒಡೆಯದ ಒಂದು ಪ್ಯಾಕೆಟನ್ನ ಹೊರತೆಗೆದು ತೊಗೋ ಒಂದು ಪ್ಯಾಕೆಟ್ ಸ್ಪೇರ್ ಮಾಡಬಹುದು'' ಎಂದ. ಹೆಚ್ಚು ವಾದಿಸದೆ ನಾನದನ್ನು ತೆಗೆದುಕೊಂಡೆ ತುಂಬಾ ಹೊತ್ತು ನಾವು ಮಾತನಾಡಿದೆವು. ಗಾಡಿ ಹೊರಡುವ ಸಮಯವಾಯಿತು. ನಾವು ಫ್ಲಾಟ್‌ಫಾರ್ಮ್‌ಗೆ ಹೋದೆವು ಅರ್ಧಗಂಟೆಯೊಳಗೆ ಅವನನ್ನು ಹೊತ್ತು ಟ್ರೈನು ಎರ್ನಾಕುಳಂ ಬಿಟ್ಟಿತು.

ನಾನು ಸ್ಟುಡಿಯೋದತ್ತ ನಡೆದೆ. ಪರಿಚಯಸ್ಥನಾದ ಸ್ಟುಡಿಯೋ ಮಾಲಿಕ ನನ್ನನ್ನ ಬರಮಾಡಿಕೊಂಡ, ನಾವು ಊರ ಸಮಾಚಾರಗಳನ್ನು ಮಾತನಾಡುತ್ತಾ ತುಂಬಾ ಹೊತ್ತು ಕಳೆದೆವು. ಫೊಟೋಗಳ ಕಾಪಿಗಳು ಸರಿಯಾಗಿ ಬಂದಿಲ್ಲವೆಂದು ಮಾತುಕತೆಯ ಮಧ್ಯೆ ಅವನು ಹೇಳಿದ. ಮಧ್ಯಾಹ್ನವಾಯಿತು. ನಾನು ಎದ್ದುನಿಂತೆ.

''ನಾನಿನ್ನು ಬರಲೆ, ಹೋಟೇಲಿನಲ್ಲಿ ಊಟ ಮುಗಿಯುವುದರೊಳಗಾಗಿ....'' ನನ್ನ ಮಾತುಗಳನ್ನು ಪೂರ್ತೀಕರಿಸಲು ಅವನು ಬಿಡಲಿಲ್ಲ.

''ಇದೊಳ್ಳೆ ಕೆಲಸ! ಇಂದು ನನ್ನ ಹುಟ್ಟುಹಬ್ಬದ ದಿನ ನೀವು ಹೋಟೇಲಿಗೆ ಹೋಗಿ ಊಟಮಾಡುವುದೆ? ಇವತ್ತು ನನ್ನ ಮನೆಯಲ್ಲೇ ನಿಮ್ಮ ಊಟ ನಿಮ್ಮನ್ನು ಇವತ್ತು ಬಿಡೋಲ್ಲ'' ಆತ ಘೋಷಿಸಿದ.

ನಾನು ಅವನ ಮಾತಿಗೆ ಶರಣಾದೆ ಭೂರಿಭೋಜನ ನಮಗಾಗಿ ಕಾದಿತ್ತು. ಊಟದ ನಂತರ ಎಲೆಯಡಿಕೆ ಜಗಿದು, ಹರಟೆ ಹೊಡೆದು ನಾನು ಅವನಿಂದ ಬೀಳ್ಕೊಂಡೆ.

''ಬುಕ್‌ಸ್ಟಾಲ್ ಚಲೋ'' ಎನ್ನುತ್ತಾ ನಾನು ನಡೆದೆ. ಆದರೆ ನಡೆದಿದ್ದು ವ್ಯರ್ಥವಾಯಿತು. ಬುಕ್‌ಸ್ಟಾಲ್ ತೆರೆದೇ ಇರಲಿಲ್ಲ. ನೆರಳಿನಲ್ಲಿ ನಿಂತು ಸಿಗರೇಟು ಹಚ್ಚಿದೆ. ನನ್ನ ಜುಬ್ಬಾದ ಸುರಳಿಯಲ್ಲಿದ್ದ ನೋಟನ್ನು ಪ್ರೀತಿಯಿಂದ ನೇವರಿಸಿದೆ. ಅದೃಷ್ಟವಿರುವ ನೋಟು. ಅನುಮಾನವೇ ಇಲ್ಲ. ಇಲ್ಲವೆಂದಾದರೆ ಇಷ್ಟು ಹೊತ್ತು ಅದು ಖರ್ಚಾಗದೆ ಉಳಿಯುತ್ತಿತ್ತೆ? ಬಸ್ಸು ಕಾಯುತ್ತಾ ನಿಂತಾಗ ಕಾರು ಸಿಕ್ಕಿತು, ಕಾಫಿ ಕುಡಿದ ಬಿಲ್ಲನ್ನು ಗೆಳೆಯ ಕೊಟ್ಟ. ಅಷ್ಟೇ ಅಲ್ಲ ಒಂದು ಪ್ಯಾಕ್ ಸಿಗರೇಟನ್ನೂ ಉಡುಗೊರೆಯಾಗಿ ನೀಡಿದ. ಫೊಟೋ

ಕೊಳ್ಳಲು ಹೋದ ಜಾಗದ್ದು ಅನಿರೀಕ್ಷಿತವಾಗಿ ಮೃಷ್ಟಾನ್ನ ಭೋಜನ ಸಿಕ್ಕಿತು. ಫೋಟೋದ ಕಾಪಿ ತಯಾರಾಗಿರಲಿಲ್ಲ. ಬುಕ್‌ಸ್ಟಾಲ್ ಮುಚ್ಚಿದ್ದುದರಿಂದ ಅಲ್ಲೂ ಖರ್ಚಾಗಲಿಲ್ಲ.

ನನ್ನ ಕಾರ್ಯಕ್ರಮದಲ್ಲಿ ಮತ್ತೊಂದು ಐಟಂ ಇನ್ನು ಉಳಿದುಕೊಂಡಿದೆ. ಸಿನಿಮಾ ಒಂದು ಬಲಿಯನ್ನು ಕಂಡು ಹಿಡಿಯಲು ಹೆಚ್ಚಿಗೆ ಸಮಯವೇನೂ ಬೇಕಾಗಲಿಲ್ಲ. ನನ್ನ ಬಳಿಗೆ ಒಬ್ಬ ಯುವಕ ಬಂದ. ಸಂಭಾಷಣೆಗೆ ಪೀಠಿಕೆಯಾಗಿ ಮುಗುಳ್ನಗು ಮತ್ತು ಕೆಮ್ಮನ್ನು ಹೊರಗೆಡಹಿದ.

''ಯಾರು, ಗೊತ್ತಾಗಲಿಲ್ಲ?'' ನಾನು ಕೇಳಿದೆ.

''ಸರ್ ನಿಮ್ಮ ಪರಿಚಯ ನನಗಿದೆ ಹರಹರ ವಿಲಾಸ ವಾಚನಾಲಯದ ಸೆಕ್ರಟರಿ ನಾನು...'' ಆತ ಹೇಳಿದ.

ತಕ್ಷಣ ನನಗೆ ಅರ್ಥವಾಯಿತು. ಭಾಷಣಕ್ಕೆ ನನ್ನನ್ನು ಬುಕ್ ಮಾಡಲು ಬಂದಿರಬೇಕು.

''ನಮ್ಮ ವಾರ್ಷಿಕೋತ್ಸವಕ್ಕೆ...'' ಅವನು ಪ್ರಾರಂಭಿಸಿದ.

ಅದನ್ನು ಕೇಳದವನಂತೆ ಯಾರೊಂದಿಗೋ ಎಂಬಂತೆ ಹೇಳಿದೆ, ''ಮ್ಯಾಟಿನಿ ನೋಡೋಣಾಂದ್ರೆ ಥಿಯೇಟರಿನತ್ತ ಬಸ್ಸುಗಳೇ ಇಲ್ಲ.'' ವಾಚನಾಲಯದ ಸೆಕ್ರಟರಿ ನನ್ನ ಗಾಳಕ್ಕೆ ಸಿಲುಕಿ ಬಿದ್ದ. ನನ್ನ ಭಾಷಣದ ಅಗತ್ಯವಿದ್ದ ಅವನು ಹೇಳಿದ, ''ಸಿನಿಮಾಗಾ? ನಾನೂ ಬರ್ತೀನಿ ಸರ್'' ಹೆಚ್ಚು ಹೊತ್ತು ಜೊತೆಗೆ ಕಳೆದರೆ ನನ್ನನ್ನು ಭಾಷಣಕ್ಕೆ ಒಪ್ಪಿಸಬಹುದೆಂದು ಕೊಂಡನೋ ಏನೋ. ಅಷ್ಟರಲ್ಲೇ ಥಿಯೇಟರಿನತ್ತ ಹೋಗುವ ಬಸ್ಸು ಬಂತು. ಆತನ ಖರ್ಚಿನಲ್ಲಿ ಕಂಡ ಸಿನಿಮಾ ತುಂಬಾ ಚೆನ್ನಾಗಿಯೇ ಇತ್ತು.

ನಾನು ನನ್ನ ಐದುನೂರು ರೂಪಾಯಿಯನ್ನು ತೋಳ ಸುರುಳಿಯಿಂದ ಹೊರತೆಗೆದು ಜುಬ್ಬಾದ ಕಿಸೆಯ ಅಡಿಗೆ ತಳ್ಳಿ ಭದ್ರಗೊಳಿಸಿದೆ.

ವೇಳೆ ಸಂಜೆ ಆರಷ್ಟೇ ಆಗಿತ್ತು. ಇನ್ನು ಮನೆ ತಲುಪಬೇಕು. ಏಳುಗಂಟೆಯವರೆಗೆ ಕಾದರೆ ಬೆಳಗ್ಗೆ ಬಂದ ಕಾರು ಸಿಗುತ್ತೆ. ಆ ತನಕ ಕಾಯುವುದು ತುಂಬಾ ಬೇಸರದ ಕೆಲಸ. ವಾಚನಾಲಯದ ಸೆಕ್ರಟರಿ ಬೇರೆ ಜೊತೆಗಿದ್ದಾನೆ. ನಾನು ಭಾಷಣದ ಕುರಿತು ಉತ್ತರ ಕೊಟ್ಟಿರಲಿಲ್ಲ. ನಿರ್ದಯವಾದ ಒಂದು ತೀರ್ಮಾನಕ್ಕೆ ಬಂದೆ. ಈ ಮೂರ್ಖನ ಖರ್ಚಿನಲ್ಲಿ ಮನೆ ತಲುಪಬೇಕು.

''ಭಾಷಣದ ವಿಷಯ ಏನು ಮಾಡಿದಿರಿ ಸರ್?'' ಅವನು ಕೇಳಿದ

''ಯಾವಾಗ ನಿಮ್ಮ ಮೀಟಿಂಗು?'' ನಾನು ವಿಚಾರಿಸಿದೆ.

''ಮುಂದಿನ 26ನೆಯ ತಾರೀಖಿನಂದು''

''ಇರಲಿ, ನಾನು ಡೈರಿ ನೋಡಿ ಹೇಳ್ತಿನಿ. ಅವತ್ತು ಬೇರೆ ಯಾವುದೇ ಕಮಿಟ್ಮೆಂಟ್ ಇಲ್ಲಾಂದ್ರೆ, ನಾನು ಬರ್ತೀನಿ'' ಉದಾರ ಮನಸ್ಸಿನ ನಾನು ಹೇಳಿದೆ.

''ಡೈರಿ ಮನೆಯಲ್ಲಿದೆ'' ನಾನು ಪುನಃ ಗಾಳಿ ಹಾಕಿದೆ. ಆತ ಮತ್ತೆ ಸಿಕ್ಕಿ ಬಿದ್ದ.

''ಸರ್ ನಾನು ನಿಂಜೊತೆ ಬರ್ತೀನಿ. ಇವತ್ತೇ ನಿಮ್ಮ ಒಪ್ಪಿಗೆ ಸಿಕ್ಕಿದ್ರೆ ನಾಳೆ ನಮಗೆ ಇನ್ವಿಟೇಷನ್ ಪ್ರಿಂಟ್ ಹಾಕಿಸಬಹುದು.'' ಆತ ಹೇಳಿದ ಅಷ್ಟರಲ್ಲಿ ಒಂದು ಬಸ್ಸು ಬಂತು.

ಅವನು ನನಗೂ ಟಿಕೇಟು ತೆಗೆದುಕೊಂಡ. ಊರು ತಲುಪಿದಾಗ ನನಗನ್ನಿಸಿತು, ಡೈರಿಯ ಕತೆ ಹೇಳಿ ಅವನನ್ನು ಪುನಃ ಅಲೆಸುವುದು ಸರಿಯಲ್ಲ. ತಕ್ಷಣ ಏನೋ ಜ್ಞಾಪಿಸಿಕೊಂಡವನಂತೆ, ''26ಕ್ಕೆ ಅಲ್ವಾ? ಅವತ್ತು ಸಂಡೆ ಅಲ್ವಾ? ಅವತ್ತು ನಾನು ಫ್ರೀಯಾಗಿದ್ದೀನಿ. ಖಂಡಿತವಾಗಿಯೂ ಬರ್ತೀನಿ.''

ಅವನು ಸಂತುಷ್ಟನಾಗಿ ಅಲ್ಲಿಂದ ಹೊರಟುಹೋದ. ಮನೆತಲುಪಿದ ಕೂಡಲೇ ನಾನು ಜುಬ್ಬಾದ ಕಿಸೆಯೊಳಕ್ಕೆ ಕೈ ಹಾಕಿದೆ. ಬೆವೆತು ಹೋದೆ. ತಲೆ ತಿರುಗತೊಡಗಿತು. ಅಲ್ಲಿ ನನ್ನ ಪ್ರೀತಿಯ 500ರ ನೋಟು ಇರಲಿಲ್ಲ. ನಾನು ಬೆರಳುಗಳನ್ನು ತಳ್ಳಿ ನೋಡಿದೆ. ಹುಚ್ಚನಂತೆ ಪರಿಶೀಲಿಸಿದೆ. ನನ್ನ ಬೆರಳುಗಳು ಕಿಸೆಯಿಂದ ಹೊರಕ್ಕೆ ಇಣುಕುತ್ತಿದೆ. ನಾನು ನೋಡಿದೆ ಕಿಸೆಯ ತಳಭಾಗದಲ್ಲಿ ದೊಡ್ಡದೊಂದು ದ್ವಾರಾ!

ತೆಂಗಿನ ಕರಟದಿಂದ ಕೆಂಡ ಮಾಡಿ ನನ್ನ ಡೋಭಿ ಇಸ್ತ್ರಿ ಹಾಕುತ್ತಿದ್ದ. ಆದರೂ ಇಷ್ಟೊಂದು ದೊಡ್ಡ ದ್ವಾರ ಕಿಸೆಯಲ್ಲೇ ನಿರ್ಮಿಸುತ್ತಾನೆಂದು ಯಾರಿಗೆ ಗೊತ್ತಿತ್ತು!

✤



# ಪ್ರಶಸ್ತಿ ಎಂಬ ಶಕ್ತಿ

**ಮೂಲ : ಸೂರ್ಯಬಾಲಾ**

**ಕನ್ನಡಕ್ಕೆ : ಡಿ.ಎನ್. ಶ್ರೀನಾಥ್**

**ನಾ**ವು ಅವರಿಗೆ ಪ್ರಶಸ್ತಿ ಕೊಡಲು ಬಂದಿದ್ದೆವು. ಅವರು ವೃದ್ಧರಾಗಿದ್ದರು. ಅಸ್ಥಿಪಂಜರದಂತಿದ್ದ ಅವರ ಶರೀರ ಆಸ್ಪತ್ರೆಯ ಹಾಸಿಗೆಯ ಮೇಲೆ ಮಲಗಿತ್ತು. ಪ್ರಶಸ್ತಿ ಸಮಿತಿ ಸದಸ್ಯರು ಶಾಲು, ಫಲಪುಷ್ಪ ಹಾಗೂ ಹೂ ಹಾರ ಹಿಡಿದು ಶ್ರದ್ಧಾಭಕ್ತಿಯಿಂದ ಅವರನ್ನು ಸುತ್ತುವರಿದು ನಿಂತಿದ್ದರು.

ಪ್ರಶಸ್ತಿ ಪುರಸ್ಕೃತರಾದ ಸುದ್ದಿಯನ್ನು ವೃದ್ಧರಿಗೆ ತಿಳಿಸುವಂತೆ ನಾನು ಪ್ರಶಸ್ತಿ ಸಮಿತಿ ವರಿಷ್ಠರಲ್ಲಿ ವಿನಂತಿಸಿಕೊಂಡೆ.

**ಪ್ರಶಸ್ತಿಗಳಿಂದ ಕಿವುಡ ಕೇಳುವಂಥವನಾಗುತ್ತಾನೆ. ಮೂಕ ಮಾತನಾಡುವಂತವನಾಗುತ್ತಾನೆ.**

ಅವರು ಗಂಟಲನ್ನು ಸರಿಪಡಿಸಿಕೊಂಡು ವೃದ್ಧರೆದುರು ಅವರಿಗೆ ಬಂದಿರುವ ಪ್ರಶಸ್ತಿ ಕುರಿತು ತಿಳಿಸಿದರು. ಆದರೆ ಅವರಿಂದ ಯಾವುದೇ ವಿಧದ ಪ್ರತಿಕ್ರಿಯೆ ಕಂಡುಬರಲಿಲ್ಲ.

'ಸ್ವಲ್ಪ ಗಟ್ಟಿಯಾಗಿ ಹೇಳಿ, ಕಿವಿ ಹತ್ತಿರ ಹೇಳಿ.'

ವರಿಷ್ಠರು ಹಾಗೇ ಮಾಡಿದರು. ಆದರೆ ಅವರು ಹಾಗೆಯೇ ಮಲಗಿದ್ದರು. 'ನಾವು ನಿಮಗೆ ಪ್ರಶಸ್ತಿ ಕೊಡಲು ಬಂದಿದ್ದೇವೆ ಎಂದು ಹೇಳಿ. ಬಹುಶಃ ಎದ್ದು ಕೂರಬಹುದು.'

ವರಿಷ್ಠರು ಹಾಗೇ ಹೇಳಿದರು. ಆದರೆ ಯಾವ ಪ್ರಯೋಜನವೂ ಆಗಲಿಲ್ಲ.

ವಿಚಿತ್ರ ಪರಿಸ್ಥಿತಿ ಎದುರಾಗಿತ್ತು. ಕೆಲವು ಸದಸ್ಯರಿಗೆ ಭಯವಾಯಿತು. ಒಂದಿಬ್ಬರು ಹಾರಿ ಬಂದು ನಾಡಿ ಮಿಡಿತ ಪರೀಕ್ಷಿಸಿದರು. ಆದರೆ ಅದು ಸರಿಯಾಗಿ ಮಿಡಿಯುತ್ತಿತ್ತು. ಎಲ್ಲರಿಗೂ ಜೀವ ಬಂದಂತಾಯಿತು. ಸಾಕಷ್ಟು ವಯಸ್ಸಾಗಿದೆ ಎಂಬುದು ಎಲ್ಲರಿಗೂ ತಿಳಿದಿತ್ತು. 92 ದಾಟಿದ ವೃದ್ಧರು ಕಳೆದ 15 ದಿನಗಳಿಂದ ಆಸ್ಪತ್ರೆಯಲ್ಲಿದ್ದರು. ರೋಗ ವಾಸಿಯಾಗುತ್ತಿರಲಿಲ್ಲ. ಅವರು ಪ್ರಶಸ್ತಿ ಪಡೆಯಲು ಎಲ್ಲ ವಿಧದಲ್ಲಿಯೂ ಅರ್ಹರಾಗಿದ್ದರು. ವೈದ್ಯರ ಗುಂಪೊಂದು ಮಹತ್ವಪೂರ್ಣ ಆವಿಷ್ಕಾರವೊಂದನ್ನು ಕಂಡುಹಿಡಿಯುವ ಸಲುವಾಗಿ ಅವರನ್ನು ಸುತ್ತುವರಿದಿತ್ತು. ಅವರ ಶರೀರ ಭಾರತದ ಒಂದು ಮಹತ್ವಪೂರ್ಣ ಪ್ರಯೋಗಶಾಲೆಯಾಗಿ ಪರಿವರ್ತನೆಗೊಂಡಿತ್ತು.

ಆದರೆ ಇಂಥ ಪರಿಸ್ಥಿತಿಯ ಕಲ್ಪನೆ ಯಾರಿಗೂ ಇರಲಿಲ್ಲ. ಈಗ ಪ್ರಶ್ನೆ ಅವರ ಆರೋಗ್ಯದ ಬಗ್ಗೆ ಮಾತ್ರವಾಗಿರದೆ ನಮ್ಮ ಪ್ರಶಸ್ತಿಯ ಗೌರವ ಮತ್ತು ಪ್ರತಿಷ್ಠೆಯ ಪ್ರಶ್ನೆಯೂ ಆಗಿತ್ತು. ನಾವು ಫಲಪುಷ್ಪ, ಶಾಲು, ಪ್ರೆಸ್ ರಿಪೋರ್ಟರ್ ಮತ್ತು ಛಾಯಾಗ್ರಾಹಕರೊಂದಿಗೆ ಬಂದಿದ್ದರೆ ಅವರು ಮಾತ್ರ ಮಿಸುಕಾಡುತ್ತಲೇ ಇಲ್ಲವಲ್ಲ!

ಕಳೆದ ವರ್ಷವೂ ಇಂಥದ್ದೇ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಗಿ ಬಂದಿತ್ತು. ಆಗಲೂ ನಾವು ಅತಿವೃದ್ಧರಾದ, ರೋಗಗ್ರಸ್ಥರಾದ ನೂರನ್ನು ದಾಟಿದ ಸಾಹಿತಿಗಳಿಗೆ ಪ್ರಶಸ್ತಿಯನ್ನು ಪ್ರದಾನಿಸುವ ಘೋಷಣೆ ಮಾಡಿದ್ದೆವು. ಆದರೆ ಅವರು ದೂರದ ಊರಿನವರಾಗಿದ್ದರು. ನಮ್ಮೂರಿಗೆ ಬರಲು ಅವರು ಎರಡು ಕಡೆ ರೈಲು ಬದಲಿಸಬೇಕಿತ್ತು. ಅದೆಷ್ಟು ದೂರದಿಂದ, ಅದೆಷ್ಟು ವೃದ್ಧ ಸಾಹಿತಿಗಳು ಬರುವರೋ ಪ್ರಶಸ್ತಿಯ ಗೌರವವೂ ಅಷ್ಟೇ ವೃದ್ಧಿಸುವುದೆಂದು ನಮ್ಮೆಲ್ಲರ ಎಣಿಕೆಯಾಗಿತ್ತು. ಪಾಪ ಅವರೂ ವಿನಮ್ರತೆಯಿಂದ ಬರಲು ಒಪ್ಪಿಕೊಂಡರು. ಟಿಕೆಟ್ ಕೊಂಡು ನಿಶ್ಚಿತ ದಿನದಂದು ಹೊರಟೂ ಬಿಟ್ಟರು. ಆದರೆ ಎರಡನೆಯ ರೈಲು ಹಿಡಿಯುವಾಗ ಶೀತ-ಬಾಧೆಗೆ ಒಳಗಾಗಿ ಅಲ್ಲಿಂದಲೇ ತಮ್ಮೂರಿಗೆ ವಾಪಸಾದರು.

ಹೀಗಾಗಿ ಈ ಬಾರಿ ಸಮಿತಿ ಎಚ್ಚರಿಕೆ ವಹಿಸಿತು. ನಗರದಲ್ಲೇ ಇರುವ ಓರ್ವ ವೃದ್ಧರನ್ನು ಪುರಸ್ಕರಿಸಲು ನಿರ್ಧರಿಸಲಾಯಿತು. ಅದೃಷ್ಟವಶಾತ್ ನಗರದ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಇಂತ ಓರ್ವ ಸಾಹಿತಿಯೂ ಸಿಕ್ಕರು. ಆದರೆ ಈಗ ಎದುರಾದ ಸಮಸ್ಯೆ ಎಂದರೆ ಅವರಿಗೆ ಕಿವಿ ಕೇಳುತ್ತಿರಲಿಲ್ಲ. ಅಲ್ಲದೆ ಅವರು ಕಣ್ಣುಬಿಟ್ಟು ಎದ್ದು ಕೂರುವ ಸ್ಥಿತಿಯಲ್ಲೂ ಇರಲಿಲ್ಲ.

ಸರಿ ಅವರನ್ನು ಎದ್ದು ಕೂರಿಸಲು ಎಲ್ಲರೂ ಶಕ್ತಿಮೀರಿ ಪ್ರಯತ್ನಿಸಿದರು. ಆದರೆ ಅವರು ಶಿವನ ಧನಸ್ಸಿನಂತೆ ಅಲುಗಾಡಲೂ ಇಲ್ಲ. ಕಣ್ಣು ರೆಪ್ಪೆಯನ್ನೂ ಬಡಿಯಲಿಲ್ಲ. ನಮ್ಮ ಹೂಹಾರಗಳು ಒಣಗುತ್ತಿದ್ದವು. ಛಾಯಾಗ್ರಾಹಕ ರೇಗಾಡುತ್ತಿದ್ದ. ಪ್ರೆಸ್ ರಿಪೋರ್ಟರ್ ಕೆಂಡ ಕಾರುತ್ತಿದ್ದ. ಅವರಿಗೆ ಮಾತ್ರ ಇದ್ಯಾವುದರ ಪರಿವೆಯೇ ಇರಲಿಲ್ಲ. ಅಲ್ಲ ಪ್ರಶಸ್ತಿಗಳಿಗೂ ತಮ್ಮದೇ ಆದ ಘನತೆ ಇರುತ್ತದೆಯಲ್ಲ! ಭಿಕ್ಷುಕ ಭಿಕ್ಷೆಯನ್ನೇ ಮರಳಿಸಿದರೆ ಅದು ದಾನ ಮಾಡುವವನಿಗೆ ಮಾಡುವ ಅನ್ಯಾಯವಲ್ಲವೆ?

ನಮ್ಮ ಅಧ್ಯಕ್ಷರ ಮುಖವೂ ಹೀಗೇ ಆಗುತ್ತಿತ್ತು. ಕಡೆಗೆ ಅವರು ಸೋತು ಸದಸ್ಯರೊಂದಿಗೆ ಸಮಾಲೋಚಿಸಿ ವೈದ್ಯರನ್ನು ಕರೆಸಿದರು.

'ಇವರು ಏಳುತ್ತಿಲ್ಲ' ಅಧ್ಯಕ್ಷರು ವೈದ್ಯರನ್ನೇ ಕಾತರದಿಂದ ನೋಡಿದರು.

'ಇವರು ಏಳುವ ಸ್ಥಿತಿಯಲ್ಲಿಲ್ಲ. ಕೋಮಾಗೆ ಹೋಗಿದ್ದಾರೆ' ಎಂದರು ವೈದ್ಯರು.

'ಇವರಿಗೆ ನಾವು ಪ್ರಶಸ್ತಿ ಪ್ರದಾನಿಸಲು ಬಂದಿರುವ ವಿಷಯ ನಿಮಗೆ ಮೊದಲೇ ಗೊತ್ತಿರಬಹುದಲ್ಲ?'

'ನನಗೇನೋ ಗೊತ್ತಿದೆ ಆದರೆ ಇವರಿಗೆ ಗೊತ್ತಿಲ್ಲವಲ್ಲ' ವೈದ್ಯರ ಮಾತಿನಲ್ಲಿ ಸಹಾನುಭೂತಿ ಇತ್ತು.

'ಅದಕ್ಕೆ ಇವರನ್ನು ಎಬ್ಬಿಸಲು ವಿನಂತಿಸಿಕೊಳ್ಳುತ್ತಿದ್ದೇವೆ. ದಯವಿಟ್ಟು ಪ್ರಯತ್ನಿಸಿ. ಕೇವಲ 10 ನಿಮಿಷಗಳಿಗಾಗಿ ಮಾತ್ರ.'

'ನನಗೆ ನಿಮ್ಮ ಕಷ್ಟ ಅರ್ಥವಾಗುತ್ತದೆ. ಆದರೆ ಇನ್ನೂ ಅಂಥ ಚಮತ್ಕಾರದ ಔಷಧಿಯನ್ನು ಕಂಡುಹಿಡಿಯಲಾಗಿಲ್ಲ' ಎಂದ ವೈದ್ಯರು 'ರೌಂಡ್ಸಿಗೆ' ಹೊರಟುಹೋದರು.

ನಾನು ಆಗ ಅಧ್ಯಕ್ಷರಿಗೆ 'ಇವರಿಗೆ ಕೋಮಾ ಸ್ಥಿತಿಯಲ್ಲೇ ಪ್ರಶಸ್ತಿಯನ್ನು ಕೊಟ್ಟು ಕೈ ತೊಳೆದುಕೊಳ್ಳಬಾರದೇಕೆ?' ಅಲ್ಲದೆ ಪ್ರಜ್ಞೆ ಬಂದ ಮೇಲೆ ಅವರು ಪ್ರಶಸ್ತಿಯನ್ನು

ಸ್ವೀಕರಿಸುವರೋ ಇಲ್ಲವೊ..? ಎಂದು ಹೇಳಿದೆ. ಆದರೆ ಯಾವುದೋ ಒಂದು ಭರವಸೆ ಕಟ್ಟಿ ಹಾಕಿತ್ತು. ಪ್ರಶಸ್ತಿಯನ್ನು ಬೇಡ ಎನ್ನಲು ಗಟ್ಟಿ ಹೃದಯವಿರಬೇಕು. ಅಲ್ಲದೆ ಪ್ರಶಸ್ತಿಗಳಿಗೆ ತಮ್ಮದೇ ಆದ 'ಶಕ್ತಿ' ಇರುತ್ತದೆ. ಪ್ರಶಸ್ತಿಗಳಿಂದ ಕಿವುಡ ಕೇಳುವಂಥವನಾಗುತ್ತಾನೆ. ಮೂಕ ಮಾತನಾಡುವಂತವನಾಗುತ್ತಾನೆ. ಪ್ರಶಸ್ತಿ ಲೇಖಕನಿಗೆ ಕಿರೀಟವಿದ್ದಂತೆ. ಪ್ರಶಸ್ತಿಯೇ ಲೇಖಕನನ್ನು ಮಹಾನ್ ವ್ಯಕ್ತಿಯನ್ನಾಗಿಸುತ್ತದೆ. ಅವನ ಪುಸ್ತಕಗಳು ಪಠ್ಯಪುಸ್ತಕಗಳಾಗುತ್ತದೆ. ಮುದ್ರಣ ಕಾಣದ ಅವನ ಹಸ್ತಪ್ರತಿಗಳು ಕೂಡಲೇ ಮುದ್ರಣಗೊಂಡು ಹೊರಬರುತ್ತವೆ. ಅವನು ಗುಡಿಸಿಲಿನಿಂದ ಬಂಗಲೆಗೆ ಶಿಫ್ಟ್ ಆಗುತ್ತಾನೆ. ಹೀಗಿರುವಾಗ ನೀವೇ ಯೋಚಿಸಿ. ನಾವು ಓರ್ವ ಬಡವನಿಗೆ ಇಷ್ಟೊಂದು ಸೌಭಾಗ್ಯವನ್ನು ಕರುಣಿಸುತ್ತಿದ್ದೇವಲ್ಲ ಎನ್ನುವುದು ಅಧ್ಯಕ್ಷರ ಒಳಮನಸ್ಸಿನ ಅನಿಸಿಕೆಯಾಗಿತ್ತು. ಆದರೆ ಇವರು ಕೋಮಾ ಸ್ಥಿತಿಯಿಂದ ಮರಳಿ ಬರಬೇಕಲ್ಲ!

ಆಗಲೇ ವೈದ್ಯರು ಬರುತ್ತಿರುವುದು ಕಂಡುಬಂದಿತು.

'ಅರೇ ನೀವಿನ್ನೂ ಹೋಗಲಿಲ್ವಾ! ರೋಗಿಗಳನ್ನು ಭೇಟಿ ಮಾಡುವ ಸಮಯ ಮುಗಿಯುತ್ತಾ ಬಂದಿತು.'

'ಆದರೆ ನಾವಿನ್ನೂ ಇವರನ್ನು ಭೇಟಿಯಾಗಿಯೇ ಇಲ್ಲವಲ್ಲ! ನಿಮಗೆ ನಮ್ಮ ಸಮಸ್ಯೆ ಅರ್ಥವಾಗುತ್ತಿದೆ ತಾನೆ?'

ವೈದ್ಯರು ಬೇರೊಬ್ಬ ರೋಗಿಯ ಟೆಂಪರೇಚರನ್ನು ಪರೀಕ್ಷಿಸುತ್ತಾ ಹೇಳಿದರು. 'ಅದೇ ಪ್ರಶಸ್ತಿಯವರು ತಾನೆ? ಪ್ರಶಸ್ತಿಯ ಮೊತ್ತ ಎಷ್ಟು?'

ವೈದ್ಯರ ಈ ಪ್ರಶ್ನೆಯಿಂದ ಅಧ್ಯಕ್ಷರು ಕಂಗಾಲಾದರು. 'ನೋಡಿ ಪ್ರಶಸ್ತಿಯ ಮೊತ್ತ ಹೆಣ್ಣಿನ ವಯಸ್ಸು ಕೇಳುವುದು ತಪ್ಪು.'

'ಸಾರಿ, ನಾನೇಕೆ ಕೇಳಿದನೆಂದರೆ ಆ ನರ್ಸ್ ಕೈಗೆ ಕೊಟ್ಟು ಬಿಡಿ. ಅವಳು ಅದನ್ನು ಅವರ ಮನೆಗೆ ತಲುಪಿಸುತ್ತಾಳೆ. ಪಾಪ ಇವರು ತಾನೆ ಆ ಪ್ರಶಸ್ತಿಯನ್ನು ತೊಗೊಂಡು ಏನ್ ಮಾಡ್ತಾರೆ?'

'ಸಾರ್ ನಿಮಗೆ ಅರ್ಥವಾಗುತ್ತಿಲ್ಲ. ನಮ್ಮ ಪ್ರಶಸ್ತಿಯ ಮರ್ಯಾದೆ ಮಣ್ಣು ಪಾಲಾಗುತ್ತದೆ. ನೀವು ಹೇಗಾದರೂ ಮಾಡಿ ಸಂಜೆಯ ವೇಳೆಗೆ 5-10 ನಿಮಿಷ ಪ್ರಶಸ್ತಿ ಸ್ವೀಕರಿಸುವಂತಹ ಸ್ಥಿತಿಗೆ ತನ್ನಿ.' ಅಧ್ಯಕ್ಷರು ಅಳುಮೋರೆ ಮಾಡಿದರು.

ವೈದ್ಯರು ರೇಗಿದರು. ಆಗ ಅಧ್ಯಕ್ಷರ ಮುಖದಲ್ಲಿ ಯುರೇಖಾದಂತೆ ವಿಚಾರವೊಂದು ಹೊಳೆಯಿತು.

'ಇದಕ್ಕಾಗಿ ನಮ್ಮ ಸಮಿತಿಯ ವತಿಯಿಂದ ಚಿಕಿತ್ಸಾ ಕ್ಷೇತ್ರದಲ್ಲಿ ನಿಮ್ಮ ವಿಶಿಷ್ಟ ಕೊಡುಗೆಗಾಗಿ ಒಂದು ವಿಶೇಷ ಪ್ರಶಸ್ತಿಯನ್ನು ಕೊಡುತ್ತೇವೆ' ಎಂದು ವೈದ್ಯರನ್ನು ಪುಸಲಾಯಿಸಿದರು.

ವೈದ್ಯರಿಗೆ ತಮ್ಮ ಕಿವಿಗಳನ್ನೇ ನಂಬಲಾಗಲಿಲ್ಲ. 'ಸಂಜೆಯ ವೇಳೆಗೆ ನಾವು ಬೇರೆ ಶಾಲು, ಫಲಪುಷ್ಪ ತರುತ್ತೇವೆ. ಇವರನ್ನು ಪ್ರಜ್ಞಾವಸ್ಥೆಗೆ ತರಲು ಪ್ರಯತ್ನಿಸಿ' ಎಂದರು ಅಧ್ಯಕ್ಷರು.

ಪ್ರಶಸ್ತಿಯಲ್ಲಿ ವಾಸ್ತವವಾಗಿ ಅದೇನೋ ದೊಡ್ಡ ಶಕ್ತಿ ಇರುತ್ತದೆ. ಈ ಶಕ್ತಿಯಿಂದಲೇ ಸರ್ಕಾರಿ ಆಸ್ಪತ್ರೆಯ ವೈದ್ಯರು ಆ ವೃದ್ಧರನ್ನು 10 ನಿಮಿಷ ದಿಂಬಿಗೊರಗಿಸಿ ಕೂರಿಸಿದರು. ಅವರ ಕಣ್ಣುಗ್ಗಳನ್ನು ಆದಷ್ಟು ದೊಡ್ಡದಾಗಿ ಅಗಲಿಸಿದರು. ಆಗಲೂ ಅವರು ಮಾತನಾಡುವ ಕೇಳುವ ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಸದಸ್ಯರೊಬ್ಬರು ಅವರ ಕೈಗೆ ಫಲಪುಷ್ಪವನ್ನು ಕೊಟ್ಟು ತಾವೂ ಅವರ ಕೈ ಹಿಡಿದುಕೊಂಡರು. ಅಧ್ಯಕ್ಷರು ಪುಳಕಿತರಾಗಿ ಗದ್ಗತೆಯಿಂದ ಅವರಿಗೆ ಶಾಲನ್ನು ಹೊದೆಸಲಾರಂಭಿಸಿದರು.

ರಿಪೋರ್ಟರ್ ಕೈ ರೇಸಿನ ಕುದುರೆಯಂತೆ ವರದಿಯನ್ನು ಗೀಚುತ್ತಿತ್ತು. ಕೆಮೆರಾಗಳು ಕ್ಲಿಕ್ಕಿಸಲ್ಪಡುತ್ತಿದ್ದವು. ಉಳಿದೆಲ್ಲ ಸದಸ್ಯರು ಅವರ ಸುತ್ತಮುತ್ತ ನಿಂತು ಹಸನ್ಮುಖರಾಗಿ ಫೋಟೋ ಹೊಡೆಸಿಕೊಳ್ಳುತ್ತಿದ್ದರು.

'ಆಹಾ! ಆಹಾ! ಎಂಥ ಮಹಾನ್ ಲೇಖಕರು. ವಿನಮ್ರತೆ ಹಾಗೂ ಸಂಕೋಚದಿಂದಾಗಿ ತಮ್ಮ ನಯನಗಳನ್ನು ತೆರೆಯುತ್ತಿಲ್ಲ. ಯಾವುದೇ ಭಾವನೆ ವ್ಯಕ್ತಪಡಿಸದೆ ಸ್ಥಿತಪ್ರಜ್ಞರಂತಿರುವ ಇಂಥ ಮಹಾನ್ ಲೇಖಕರು ನಮ್ಮ ಪ್ರಶಸ್ತಿಗೇ ಗೌರವವನ್ನು ತಂದು ಕೊಡುತ್ತಿದ್ದಾರೆ' ಎಂದು ಸದಸ್ಯರು ಅಧ್ಯಕ್ಷರು ಮೆಚ್ಚುಗೆ ಸೂಚಿಸುತ್ತಿದ್ದರು.

ಒಂದು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿಯೇ ಎರಡೆರಡು ಪ್ರಶಸ್ತಿಗಳನ್ನು ಪ್ರದಾನ ಮಾಡಿದ ಧನ್ಯತಾ ಭಾವ ಎಲ್ಲರ ಮುಖದಲ್ಲಿತ್ತು.

✤



**- ದಂನಆ**

- ಮೌನವೆಂಬುದು ಕೇವಲ ಮಾತಿನ ಇಲ್ಲದಿರುವಿಕೆ ಅಷ್ಟೇ ಅಲ್ಲ. ಮೌನ ತನ್ನಷ್ಟಕ್ಕೆ ತಾನೇ ಒಂದು ಹೇಳಿಕೆ. ಒಂದು ಅಭಿವ್ಯಕ್ತಿ.
- ಎಲ್ಲರೂ ಉಪಕಾರ ಸ್ಮರಣೆಗೇ ನಿಂತು ಉಪಕಾರಿಯನ್ನು ಹೊಗಳುತ್ತಾ ಹೋದರೆ ಉಪಕಾರದ ಸತ್ವ ಕಡಿಮೆಯಾಗುತ್ತದೆ.
- ಬದುಕಿನಲ್ಲಿ ಒಮ್ಮೆಲೆ ಯಶಸ್ಸು ಕಂಡವರ ದೊಡ್ಡ ಸಮಸ್ಯೆ ಎಂದರೆ ಜಗತ್ತಿಗೆಲ್ಲ ತಿಳುವಳಿಕೆ ಹೇಳುವ ಚಾಳಿಯನ್ನು ಮೈಗೂಡಿಸಿಕೊಂಡು ತಮ್ಮ ಅವಿವೇಕತನವನ್ನು ಪ್ರದರ್ಶನಕ್ಕಿಡುವುದು.
- ವಿ ನೊ ವಾಟ್ ವಿ ಆರ್ ಬಟ್ ವಿ ಡು ನಾಟ್ ನೊ ವಾಟ್ ವಿ ಮೆ ಬಿ.
- ಒಂದು ಜೋಕಿನ ಯಶಸ್ಸು ಅಡಗಿರುವುದು ಅದು ಹೇಳಿದವನ ನಾಲಿಗೆಯಲ್ಲಲ್ಲ. ಕೇಳಿಸಿಕೊಂಡವನ ಕಿವಿಯಲ್ಲಿ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಒಳ್ಳೇ ರೇಟ್ ಕೊಡೋರಿಗೆ ಡಾಕ್ಟೊರೇಟ್?
- ಇಂದಿನ ಕಂಪ್ಯೂಟರ್ ಯುಗದಲ್ಲಿ ಅಕ್ಷರಾಭ್ಯಾಸ ಅಕ್ಕಿಕಾಳು ಬದಲು ಕೀಬೋರ್ಡ್ ಮೇಲೆ ಆದರೆ ಆಶ್ಚರ್ಯಪಡಬೇಕಿಲ್ಲ.
- ನವಜೋತ್ ಸಿಂಗ್ ಸಿದ್ದು - ಸರ್ದಾರ್ಜಿ ಹು ಟೆಲ್ಸ್ ಹಿಸ್ ಓನ್ ಜೋಕ್ಸ್.
- ನಿಮಗೆ ಯಾರಾದರು ಏನನ್ನಾದರೂ ತಿನ್ನಲು ಕೊಟ್ಟರೆ ಅದರ ರುಚಿ ಸವಿಯಬೇಡಿ, ಆ ತಿಂಡಿಯನ್ನು ನೀಡಿದವರ ಮನದಾಳದ ಪ್ರೀತಿ ಮತ್ತು ಕಾಳಜಿಯನ್ನು ಸವಿಯಿರಿ.
- ಬಯಾಲಜಿ ಗಿವ್ಸ್ ಯು ಎ ಬ್ರೇನ್, ಲೈಫ್ ಟರ್ನ್ಸ್ ಇಟ್ ಇಂಟು ಎ ಮೈಂಡ್.
- ನೀವು ನಿಮ್ಮ ಬಗ್ಗೆ ಜಂಭ ಕೊಚ್ಚಿಕೊಳ್ಳುವುದನ್ನು ಸಮರ್ಥಿಸಿಕೊಳ್ಳುವುದಾದರೆ ಆಗ ಅದು ಉಡಾಫೆ ಆಗುವುದಿಲ್ಲ.
- ಹತ್ತುವ ಏಣಿಯನ್ನು ಸರಿಯಾದ ಗೋಡೆಗೆ ಒರಗಿಸದೇ ಇದ್ದರೆ ಪ್ರತಿ ಹೆಜ್ಜೆಯೂ ನಮ್ಮನ್ನು ಎಲ್ಲೆಲ್ಲೋ ಬೇಗ ಬೇಗ ಕರೆದೊಯ್ಯುತ್ತದೆ.
- ಗುಡ್ ಓಲ್ಡ್ ಡೇಸ ಆರ್ ಎ ಮಿಥ್ - ನೊ ಒನ್ ಎವರ್ ಕನ್ಸಿಡರ್ಡ್ ಗುಡ್ ಅಟ್ ದಟ್ ಟೈಂ.
- ಪ್ರತಿ ಯಶಸ್ವಿ ವಿದ್ಯಾರ್ಥಿ ಹಿಂದೆ ಒಬ್ಬ ಉತ್ತಮ ಕ್ಲಾಸ್ ಟೀಚರ್ ಇರಬಹುದೆ?
- ಕಡಿಮೆ ಅಂಕ ಗಳಿಸುವವನ ಸಾಮರ್ಥ್ಯ ಅಷ್ಟೇ ಎಂದು ಭಾವಿಸಬೇಡ. ಅವನು ಇನ್ನೂ ಕಡಿಮೆ ಅಂಕ ಗಳಿಸುವ ಸಾಮರ್ಥ್ಯ ಹೊಂದಿರಲೂಬಹುದು!
- ಇಟ್ ಈಸ್ ಯುವರ್ ಲೈಫ್ ಮೇಕ್ ಇಟ್ ಲಾರ್ಜ್.

✤

# ಜೇಬುಗಳ್ಳನೊಡನೆ ಒಂದು ಸಂದರ್ಶನ

**ಮೂಲ : ವಿನೋದ್ ಭಟ್ಟ**

**ಕನ್ನಡಕ್ಕೆ : ಡಿ.ಎನ್. ಶ್ರೀನಾಥ್**

**ಪೊ**ಲೀಸರು ಢಾಕಾದ ಜೇಬುಗಳ್ಳರ ಒಂದು ತರಬೇತಿ ಶಾಲೆಯ ಮೇಲೆ ಆಕ್ರಮಣ ಮಾಡಿದರು. ನಾಲ್ವರು 'ಗುರು'ಗಳನ್ನು ಬಂಧಿಸಲಾಯಿತು. ಸಿನಿಮಾ ಥಿಯೇಟರ್‌ಗಳಲ್ಲಿ, ರೈಲ್ವೆ ಸ್ಟೇಷನ್‌ಗಳಲ್ಲಿ ಹಾಗೂ ಬಸ್ ನಿಲ್ದಾಣಗಳಂತಹ ಗುಂಪು-ಪ್ರದೇಶಗಳಲ್ಲಿ ಇವರ ಶಿಷ್ಯರು ತಮ್ಮ ಕೈ ಚಳಕದಲ್ಲಿ ತಲ್ಲೀನರಾಗಿರುತ್ತಿದ್ದರು. ಒಂದು ಬಾರಿ ಈ ತರಬೇತಿ ಶಾಲೆಗೆ ದಾಖಲಾದವನು ತನ್ನ 'ಕೈ ಚಳಕ'ದಲ್ಲಿ ಪ್ರವೀಣನಾಗಿಬಿಡುತ್ತಿದ್ದ... ಅಪ್ಪಿ-ತಪ್ಪಿ ಸಿಕ್ಕಿ ಬಿದ್ದರೆ ತಪ್ಪಿಸಿಕೊಂಡು ಹೋಗುವುದೂ ಅವನಿಗೆ ಕರಗತವಾಗಿ ಬಿಡುತ್ತಿತ್ತು. ಈ ಧೂರ್ತರ ಪ್ರಾಕ್ಟಿಕಲ್ ಮತ್ತು ಥಿಯರಿಯ ಪ್ರಶ್ನೆ-ಪತ್ರಿಕೆಗಳೂ ಬೇರೆ ಬೇರೆ ತೆರನಾಗಿರುತ್ತಿದ್ದವು. ನಾಲ್ಕು ವರ್ಷಗಳ ಹಿಂದೆ ಈ ತರಬೇತಿ ಶಾಲೆಯಿಂದ ಸುಮಾರು ಐದುನೂರು ಶಿಷ್ಯರು ಉತ್ತೀರ್ಣರಾಗಿ ಸುತ್ತ-ಮುತ್ತ ಪಸರಿಕೊಂಡಿದ್ದರು. ಅವರ ಕೈ ಚಳಕ ನೋಡಿದ ಯಾರೇ ಆದರೂ 'ಇವರು ತಮ್ಮ ಶಾಲಾ - ಶಿಕ್ಷಣದಲ್ಲಿ ಅದೆಷ್ಟು ನಿಪುಣತೆ ಪಡೆದಿದ್ದಾರೆ' ಎಂದು ಸುಲಭವಾಗಿ ತಿಳಿದುಕೊಳ್ಳಬಹುದಿತ್ತು.

> **ಫಲದ ಭರವಸೆಯಿಂದಲೇ ಕಿಸೆಗಳ್ಳರಾದವರು 'ಮಾಫಲೇಷು ಕದಾಚನ' ಎಂಬ ಗೀತೆಯ ವಾಕ್ಯವನ್ನು ಹೇಗೆ ತಾನೆ ಒಪ್ಪಿಯಾರು?**

ಪತ್ರಿಕೆಯಲ್ಲಿ ಈ ಸುದ್ದಿ ಓದಿದಾಗ ಓರ್ವ ಜೇಬುಗಳ್ಳನ ಬಳಿ ಅವನ ಸಂದರ್ಶನ ತೆಗೆದುಕೊಳ್ಳಲು ನಾನು ಹೋದೆ.

''ನೋಡಿ, ಢಾಕಾದ ಪೊಲೀಸರು ನಿಮ್ಮ ಸಂಗಾತಿಗಳ ಗುರುಗಳನ್ನು ಬಂಧಿಸಿದರು.... ಮತ್ತೆ ನಿಮ್ಮ 'ಜೇಬುಗಳ್ಳರ ಸಂಘ' ಇದುವರೆಗೂ ಈ ಬಗ್ಗೆ ಯಾವುದೇ ವಿರೋಧವನ್ನು ಯಾಕೆ ವ್ಯಕ್ತಪಡಿಸಲಿಲ್ಲ?'' ಸಂದರ್ಶನವನ್ನು ಪ್ರಾರಂಭಿಸಿದೆ.

''ಬ್ರದರ್! ಈಗ ನಮ್ಮ ಸಂಘವೂ ಎರಡು ಭಾಗಗಳಾಗಿ ಒಡೆದು ಹೋಗಿದೆ. ಮೊದಲನೆಯದು 'ಜೇಬುಗಳ್ಳರ ಸಂಘ'ವಾದರೆ ಎರಡನೆಯದು 'ವಂಚಕರ ಸಂಘ' ಢಾಕಾ ಸುದ್ದಿ ಪತ್ರಿಕೆಯಲ್ಲಿ ಪ್ರಕಟಗೊಂಡ ದಿನವೇ ನಾವೊಂದು ತುರ್ತು ಸಭೆಯನ್ನು ಕರೆದಿದ್ದೆವು. ಆದ್ರೆ, ಜೇಬುಗಳ್ಳರ ಸಂಘದ ಅಧ್ಯಕ್ಷರು 'ವಿರೋಧ ಪಕ್ಷದ ಮುಖಂಡರಂತೆ ಯಾವುದೇ ಹೇಳಿಕೆ ನೀಡಿ ನಾವು ನಮ್ಮ ಕಾಲುಗಳಿಗೆ ಕೊಡಲಿ ಪೆಟ್ಟು ಹೊಡೆದುಕೊಳ್ಳುವುದಿಲ್ಲ. ನಮ್ಮ ಸಮಾಜದ ಹಿತಗಳ ರಕ್ಷಣೆಗಾಗಿ ನಾವು ಸಂಯಮ, ತಾಳ್ಮೆಯಿಂದಿರಬೇಕಾಗುವುದು' ಎಂಬ ಸಲಹೆಯಿತ್ತರು. ಒಂದು ವೇಳೆ ನೀವು ನನ್ನನ್ನು ಕೇಳಿದರೆ ನಾನು ಇಂತಹ ಬಂಧನಗಳಿಗೆ

ಕಟುವಾಗಿ ವಿರೋಧಿಸ್ತೀನಿ. ಸರ್ಕಾರವೂ ಇದಕ್ಕೆ ವಿರುದ್ಧವಾಗಿರಬೇಕು. ನಾವು, ವಾಸ್ತವವಾಗಿ ಸಮಾಜವಾದವನ್ನು ಪೂರ್ಣವಾಗಿ ನಂಬ್ತೀವಿ. ಬರೇ ಬಾಯಿಮಾತಿನಿಂದಷ್ಟೇ ಅಲ್ಲ, ನಮ್ಮ ಕಾರ್ಯಗಳಿಂದಲೂ ನಾವು ಸಮಾಜವಾದದ ಪ್ರಚಾರ ಮಾಡಿರುತ್ತೇವೆ. ಬಂಡವಾಳಶಾಹಿಗಳೊಂದಿಗೆ ನಮ್ಮ ತೀವ್ರ ವಿರೋಧ, ಹಗೆತನವಿದೆ'' ಜೇಬುಗಳ್ಳ ನನ್ನನ್ನೇ ನೋಡುತ್ತಾ ಸಮಜಾಯಿಸಿದ.

''ನಿಮ್ಮ ಈ 'ಹಸ್ತ ಕಲೆ'ಯನ್ನು ನೀವು ಮಕ್ಕಳಿಗೆ ಉತ್ತರಾಧಿಕಾರದಲ್ಲಿ ಕೊಟ್ಟು ಹೋಗಬೇಕೆಂದಿದ್ದೀರಾ?''

''ಈ ಪ್ರಶ್ನೆಯನ್ನು ನೀವು ತಮಾಷೆಗಾಗಿ ಕೇಳ್ತಿದ್ದೀರೋ ಅಥವಾ ಗಂಭೀರವಾಗಿ ಕೇಳ್ತಿದ್ದೀರೋ?'' ಜೇಬುಗಳ್ಳ ನನ್ನನ್ನು ದುರುಗುಟ್ಟಿ ನೋಡಿದ.

''ಗಂಭೀರವಾಗೇ ಕೇಳ್ತಿದ್ದೀನಿ.''

''ಹಾಗಾದ್ರೆ ಸರಿ! ನೋಡಿ, ನಮ್ಮ ದೇಶದಲ್ಲಿ ರಾಜಕೀಯದಲ್ಲಾಗಲೀ ಅಥವಾ ವಂಚನೆಯಲ್ಲಾಗಲೀ... ಪ್ರತಿಯೊಂದು ಮಗುವೂ ತನ್ನ ತಂದೆಯ ಉತ್ತರಾಧಿಕಾರದಿಂದಲೇ ಮುಂದುವರಿಯುತ್ತದೆ. ರಾಮನ ನೀತಿಯಂತೆಯೇ ನಾನೂ, 'ನನ್ನ ಮಕ್ಕಳೂ ನಮ್ಮ ಕುಲಕಸುಬನ್ನೇ ಮುಂದುವರಿಸಿಕೊಂಡು ಹೋಗಲಿ' ಎಂದು ಬಯಸುವೆ.''

''ನಿಮ್ಮ ನಂತರ ನಿಮ್ಮ ಕ್ಷೇತ್ರದ ಪ್ರತಿಭೆ-ನೇತೃತ್ವವನ್ನು ಯಾರು ನೋಡಿಕೊಳ್ಳುತ್ತಾರೆ?''

''ನಮ್ಮ ದಂಧೆಯಲ್ಲಿ 'ನನ್ನ ನಂತರ ಯಾರು?' ಎಂಬ ಪ್ರಶ್ನೆಯೇ ಇಲ್ಲ. ನಾವು ಒಟ್ಟಿಗೆ ದುಡಿಯುತ್ತೇವೆ ಮತ್ತು ಸೆಕೆಂಡ್ ಕೇಡರ್ ಕೂಡ ತಯಾರು ಮಾಡ್ತೀವಿ.''

''ನೀವು ಹೇಗೆ ಕೆಲ್ಸ ಮಾಡ್ತೀರ?''

''ಈ ವಿಚಾರದಲ್ಲಿ ನಾವು ತುಂಬಾ ಬುದ್ಧಿವಂತರು. ಮೊದಲೇ ನಾವು ರಸ್ತೆಗಳು, ಗುಂಪಿರುವ ಜಾಗಗಳನ್ನು ಹಂಚಿಕೊಂಡು ಬಿಡ್ತೀವಿ. ನಾವೆಂದೂ ಪರಸ್ಪರರ ಪ್ರದೇಶಗಳಲ್ಲಿ ಹಸ್ತಕ್ಷೇಪ ಮಾಡಲ್ಲ.''

''ನೀವಿಷ್ಟೊಂದು ಒಳ್ಳೆ ಭಾಷೆ ಹೇಗೆ ಕಲಿತಿರಿ?''

''ತಪ್ಪಿನಿಂದಾಗಿ ನಾನೊಂದು ಸಲ ಒಬ್ಬ ಪ್ರೂಫ್ ರೀಡರರ ಜೇಬು ಕತ್ತರಿಸಿದೆ. ಒಂದು ಇಂಗ್ಲಿಷ್-ಕನ್ನಡ ಶಬ್ದಕೋಶ ಸಿಕ್ತು. ಓದಲು ಕೂತಾಗ ನನ್ನ ಭಾಷೆಯೇ ಹಾಳಾಯ್ತು. ಈಗ ನನ್ನವರೂ ನನಗೆ 'ಪಂಡಿತ-ವಿದ್ವಾಂಸ' ಅಂತ ಹೇಳಲು ಪ್ರಾರಂಭಿಸಿದ್ದಾರೆ.''

''ನಿಮ್ಮ ಜೀವನದ ರೋಮಾಂಚಕಾರಿ ಪ್ರಸಂಗ ಯಾವುದು?''

''ಒಂದು ಸಲ ಒಬ್ಬ ಕವಿಯ ಜೇಬು ಕತ್ತರಿಸಿದಾಗ 301 ರೂಪಾಯಿ ಸಿಕ್ತು. ಈ ಘಟನೆಯಿಂದಾಗಿ ನನಗೆಷ್ಟು ಆಶ್ಚರ್ಯವಾಯಿತೆಂದರೆ ನಾನು ಮೂರುದಿನಗಳವರೆಗೆ ನನ್ನ ಕಸುಬಿಗೇ ಹೋಗದಾದೆ.''

''ಮಂತ್ರಿಯೋರ್ವರ ಜೇಬನ್ನು ಹಗುರಮಾಡುವ ಇಚ್ಛೆ ನಿಮಗೆಂದೂ ಆಗಲಿಲ್ಲವೇ?''

''ಇಲ್ಲ ಸಾರ್, ನಾವು ನಮ್ಮ ಜಾತಿ ಜನರ ಜೇಬನ್ನು ಕತ್ತರಿಸುವುದಿಲ್ಲ. ಇದನ್ನು 'ಫೇವರ್ ಪಾಲಿಸಿ' ಅಂತೀವಿ.''

‘ಜೇಬುಗಳ್ಳರ ತರಬೇತಿ ಶಾಲೆ’ಯನ್ನು ಬೇರೆಡೆಯೂ ತೆರೆಯುವ ಯೋಜನೆ ಇದೆಯಾ?

‘‘ಇಲ್ಲ; ಸ್ಕೋಪ್ ತುಂಬಾ ಕಡಿಮೆ!’’

‘‘ಯಾಕೆ’’

‘‘ನಾವು ಮಾಡ್ತಿರೋ ಕೆಲಸವನ್ನು ಟ್ಯೂಶನ್ ಮತ್ತು ಕೋಚಿಂಗ್ ಕ್ಲಾಸ್‌ನವರು ಆಗ್ಲೆ ಮಾಡ್ತಿದ್ದಾರೆ. ಇಂಥದ್ದರಲ್ಲಿ ಕಾಂಪಿಟೇಶನ್ ಮಾಡೋದು ಮೂರ್ಖತನವೇ! ಆದರೆ ಒಂದಂತೂ ನಿಜ; ನಮ್ಮ ‘ಯುಕ್ತಿ’ ಒಂದು ಸಲ ಕಲಿತವರು ಹಸಿವಿನಿಂದ ಎಂದೂ ಸಾಯಲಾರರು. ಇದುವರೆಗೆ ನೀವು ಒಬ್ಬ ಕಿಸೆಗಳ್ಳನ ಆತ್ಮಹತ್ಯೆಯ ಸುದ್ದಿಯನ್ನೂ ಪತ್ರಿಕೆಯಲ್ಲಿ ಓದಿರದೇ ಇರಬಹುದು.’’

‘‘ಕಿಸೆಗಳ್ಳತನ ಮಾಡುವಾಗ ಸಿಕ್ಕಿಬಿದ್ದರೇ...?’’

‘‘ಎಲ್ಲಾ ದಂಧೆಯಲ್ಲೂ ಅಪಾಯವಿದ್ದೇ ಇದೆ. ನೋಡಿ ಸಾರ್, ಒಬ್ಬ ಬ್ಯಾಂಕಿನ ಕ್ಯಾಶಿಯರ್‌ಗೆ ಡಕಾಯಿತ ಗುಂಡು ಹೊಡೆಯುವುದಿಲ್ವೆ? ಒಂದು ವೇಳೆ ನಮ್ಮವರು ಸಿಕ್ಕಿ ಬಿದ್ದರೂ, ಜನ ಬಂದು ನಾಲ್ಕು ಹೊಡೆತ ಹೊಡೆಯಬಹುದು! ಪೊಲೀಸ್ ಸ್ಟೇಷನ್ನಿಗಂತೂ ಯಾರೂ ರಿಪೋರ್ಟ್ ಮಾಡಲ್ಲ. ಈಚೆಗೆ ನಮಗಿಂತಲೂ ಹೆಚ್ಚಾಗಿ ಜನ ಪೊಲೀಸರಿಗೆ ಹೆದರ್‍ತಾರೆ! ಜೀವಕ್ಕೆ ಅಪಾಯವಂತೂ ನಮ್ಮ ದಂಧೆಯಲ್ಲಿ ಇಲ್ಲಾಂತಲೇ ಹೇಳಬಹುದು. ಜೈಲಿಗೆ ಹೋದರಂತೂ ಇನ್ನೂ ಒಳ್ಳೆಯದೇ. ಕಡೇ ಪಕ್ಷ ಜೈಲಿನ ಒಂದೆರಡು ರೊಟ್ಟಿಯಾದರೂ ಸಿಗುತ್ತೆ.’’

‘‘ನಿಮ್ಮ ಇಷ್ಟ-ಅನಿಷ್ಟಗಳ ಬಗ್ಗೆ ನೀವೇನು ಹೇಳ್ತಿರಾ?’’

‘‘ಫೆಬ್ರವರಿ ತಿಂಗ್ಳು ನನಗೆ ಸ್ವಲ್ಪವೂ ಹಿಡಿಸಲ್ಲ. ಆ ತಿಂಗಳಿನಲ್ಲಿ ಎಷ್ಟು ಕಡಿಮೆ ದಿನಗಳು! ಆ ಮೇಲೆ ಬಜೆಟ್ ಬೇರೆ... ಅರ್ಥಮಂತ್ರಿಗಳು ನಮಗಾಗಿ ಏನೂ ಒಳ್ಳೆಯದನ್ನ ಮಾಡಲ್ಲ. ಚುನಾವಣೆಯ ಕಾಲ ಅಂದ್ರೆ ನಮಗೆ ದೀಪಾವಳಿ ಹಬ್ಬವಿದ್ದಂತೆ. ಚುನಾವಣಾ ಸಭೆಗಳಲ್ಲಿ ನಾವು ಚೆನ್ನಾಗಿ ಸಂಪಾದನೆ ಮಾಡಿಕೊಳ್ತೀವಿ. ಅದಕ್ಕೇ ನಮಗೆ ಡೆಮಾಕ್ರಸಿ ಬಗ್ಗೆ ಮೊರಾರ್ಜಿ ದೇಸಾಯಿಯವರಿಗಿಂತಲೂ ಹೆಚ್ಚು ಶ್ರದ್ಧೆಯಿದೆ.’’

‘‘ನೀವು ಭಗವದ್‌ಗೀತೆಯನ್ನು ಓದಿದ್ದೀರಾ?’’

‘‘ಓದಿದ್ದೀನಿ-ಆದ್ರೆ ಸಾರ್ ಅದರಲ್ಲಿರೋ ‘ಮಾಫಲೇಷು ಕದಾಚನ’ ವಾಕ್ಯ ನನಗೆ ಸರಿಕಾಣಿಸಲ್ಲ. ಫಲದ ಭರವಸೆಯಿಂದಾಗಿಯೇ ಕಿಸೆಗಳ್ಳರಾದ ನಾವುಗಳು ಜನರ ಸುತ್ತ ಮುತ್ತ ಇರ್‍ತೀವಿ. ಆದ್ರೆ ಜೈಲು ಮತ್ತು ಬಿಡುಗಡೆಯ ಫಿಲಾಸಫಿಯಂತೂ ನನಗೆ ತುಂಬಾ ಇಷ್ಟ. ನೀವೂ ನನ್ನನ್ನೀಗ ಹೊರಡಲು ಬಿಡಿ, ಸಾರ್. ದಂಧೆಗೆ ಸಮಯವಾಗ್ತಿದೆ... ಮತ್ತೆ ನಿಮ್ಮ ಜೇಬನ್ನೂ ಚೆಕ್ ಮಾಡಿಕೊಳ್ಳಿ. ನನ್ನ ಯಾರಾದ್ರು ಶಿಷ್ಯರು ನಿಮ್ಮ ಜೇಬನ್ನು ಖಾಲಿ ಮಾಡಿದ್ರೂ, ನಿಮಗೆ ನನ್ನ ಮೇಲೆ ಸಂದೇಹ ಬರುತ್ತೆ. ವಾಸ್ತವವಾಗಿ ಹಾಸ್ಯ ಲೇಖಕರ ಜೇಬನ್ನೆಂದೂ ಕತ್ತರಿಸಬೇಡಿ ಎಂಬುದೂ ನನ್ನ ಸಿದ್ಧಾಂತವೇ... ಅವರಿಗೆಷ್ಟು ಗೌರವ ಹಣ ಸಿಗುತ್ತೆ ಅನ್ನೋದು ನನಗೊತ್ತಿದೆ!’’

✤

# ಮಕ್ಕಳಿಂದ ಪಾಠ

**- ಬೇಲೂರು ರಾಮಮೂರ್ತಿ**

**ಮ**ಕ್ಕಳು ಕೇಳುವ ಪ್ರಶ್ನೆಗಳಿಗೆ ನಮ್ಮನ್ನೇ ನಾವು ತಿದ್ದಿಕೊಳ್ಳುವಂಥಾ ಸಂದರ್ಭಗಳು ಬರುತ್ತವೆ. ಮನೆಗೆ ಅತಿಥಿಯೊಬ್ಬರು ಬಂದು ಹೋದ ನಂತರ ಅಪ್ಪ ಮಗಳ ಸಂಭಾಷಣೆ ಹೀಗಿತ್ತು....

ಮಗಳು : ಅಪ್ಪಾ ಈಗ ನಮ್ಮ ಮನೆಗೆ ಬಂದು ಹೋದ್ರಲ್ಲ ಅವರು ಯಾರು?

ಅಪ್ಪ : ಯಾಕೆ ಪುಟ್ಟ ಹೀಗೆ ಕೇಳ್ತೀಯ, ಅವರು ನಿನ್ನತ್ತೆ ಅಲ್ವಾ. ರಾಮು ಮಾವ ಇದಾರಲ್ಲ ಅವರ ಹೆಂಡತಿ. ಅವರು ನಮ್ಮನೆಗೆ ತುಂಬಾ ಸಾರಿ ಬಂದಿದಾರಲ್ಲ.

ಮಗಳು : ಅವರು ತುಂಬಾ ಬಡವರಾ ಅಪ್ಪ?

ಅಪ್ಪ : ಬಡವರು ಅಂತಲ್ಲ ಆದರೆ ನಮ್ಮಷ್ಟು ಶ್ರೀಮಂತರಲ್ಲ. ಅವರಿಗೆ ಸ್ವಂತ ಮನೆಯಿಲ್ಲ, ಅವರ ಬಳಿ ಕಾರಿಲ್ಲ.

ಮಗಳು : ದೇವರು ಯಾಕಪ್ಪಾ ಕೆಲವರನ್ನು ಬಡವರನ್ನಾಗಿ ಕೆಲವರನ್ನು ಶ್ರೀಮಂತರನ್ನಾಗಿ ಹುಟ್ಟಿಸಿರ್ತಾನೆ?

ಅಪ್ಪ : ನಿನ್ನ ಈ ಪ್ರಶ್ನೆಗೆ ಉತ್ತರ ಕೊಡೋದು ಕಷ್ಟ ಪುಟ್ಟಿ, ಹೋಗು ಓದ್ಕೊ.

ಮಗಳು : ಅಪ್ಪಾ ನಾವು ಸುಳ್ಳು ಹೇಳಬಾರದು ಅಂತ ನೀನು ನನಗೆ ಯಾವಾಗ್ಲೂ ಹೇಳ್ತಿರ್ತೀಯ. ಆದರೆ ನೀನೇ ಇವತ್ತು ಸುಳ್ಳು ಹೇಳಿದ್ಯಲ್ಲ.

ಅಪ್ಪ : ನಾನಾ. ಇವತ್ತಾ ಯಾವಾಗ ಮಗಳೇ, ನೋಡು ಸುಳ್ಳು ಹೇಳಬಾರದು ಅಂದ್ರೆ ಹೇಳಲೇಬಾರದು ಅಂತಲ್ಲ. ನಾವು ಹೇಳೋ ಸುಳ್ಳಿನಿಂದ ಯಾರಿಗೂ ತೊಂದರೆ ಇಲ್ಲ ಅಂದರೆ ಪರವಾಗಿಲ್ಲ.

ಮಗಳು : ಆದರೆ ನೀನು ಇವತ್ತು ಹೇಳಿದ ಸುಳ್ಳಿಂದ ಅತ್ತೆಗೆ ತೊಂದರೆ ಆಯಿತಲ್ಲ.

ಅಪ್ಪ : ಪುಟ್ಟಿ ನಿನ್ನ ಮಾತು ಜಾಸ್ತಿಯಾಯಿತು. ಹೋಗು ಓದ್ಕೊ.

ಮಗಳು : ಅಪ್ಪಾ ಪ್ಲೀಸ್ ಇದೊಂದು ಪ್ರಶ್ನೆಗೆ ಉತ್ತರ ಕೊಟ್ಟುಬಿಡು. ಆಮೇಲೆ ನಾನು ಓದ್ಕೊತೀನಿ.

ಅಪ್ಪ : ಸರಿ ಬೇಗ ಹೇಳು.

ಮಗಳು : ಅತ್ತೆ ಬಂದು ಪಾಪ ಅವರ ಮನೇಲಿ ಕಷ್ಟ ಅಂತ ಅತ್ತಾಗ ನೀನು ನನ್ನತ್ರ ದುಡ್ಡಿಲ್ಲ ಅಂದುಬಿಟ್ಟೆ. ಮೊದಲು ಅತ್ತೆ ಜಾಸ್ತಿ ದುಡ್ಡು ಕೇಳಿದೋರು ಆಮೇಲೆ ಕಡಿಮೆ ಕೇಳಿದರು. ಆಗಲೂ ನೀನು ಇಲ್ಲ ಅಂದೆ. ಆದರೆ ನಮ್ಮ ಮನೇಲಿ ಬೀರೂಲಿ ನೀನು ದುಡ್ಡು ಇಟ್ಟಿದೀಯ. ಮನೇಲಿ ದುಡ್ಡು ಇಟ್ಕೊಂಡೂ ನನ್ನತ್ರ ದುಡ್ಡಿಲ್ಲ ಅಂತ ಸುಳ್ಳು ಹೇಳಬಹುದಾ?

ಅಪ್ಪ : ಪುಟ್ಟೀ ಇದು ದೊಡ್ಡವರ ವಿಚಾರ ನಿನಗೆ ಇದೆಲ್ಲಾ ಅರ್ಥ ಆಗಲ್ಲ ಹೋಗು.

ಮಗಳು : ನನಗೆ ದೊಡ್ಡವರ ವಿಚಾರ ಬೇಡ ಅಪ್ಪ. ನೀನು ಯಾಕೆ ಸುಳ್ಳು ಹೇಳಿದೆ ಅದನ್ನು ಹೇಳು. ಕಷ್ಟದಲ್ಲಿರೋರಿಗೆ ನಾವು ಆಗಾಗ ಸಹಾಯ ಮಾಡ್ತಿರಬೇಕು ಅಂತ ನೀನೇ ಹೇಳ್ತಿರ್ತಿದ್ದೆ. ಆದರೆ ಇವತ್ತು ನೀನೇ ಅತ್ತೆಗೆ ಸಹಾಯ ಮಾಡೋಲ್ಲ ಅಂತ ಹೇಳಿ ಕಳಿಸಿದೆ. ನೀನು ಯಾಕೆ ಸುಳ್ಳು ಹೇಳಿದೆ ಅಂತ ಹೇಳು. ಇಲ್ಲದಿದ್ರೆ ನಾನೂ ಸಹ ದೊಡ್ಡೋಳಾದ ಮೇಲೆ ನಿನ್ನ ತರಹಾನೇ ಅಥವಾ ನಿನಗಿಂತ ಹೆಚ್ಚಿಗೇ ಸುಳ್ಳು ಹೇಳ್ತೀನಿ.

ಅಪ್ಪ : ಪುಟ್ಟೀ ನಿನಗೆ ಇವೆಲ್ಲಾ ಅರ್ಥ ಆಗಲ್ಲ ಅಂತ ಹೇಳಿದ್ನಲ್ಲ.

ಮಗಳು : ಆದರೂ ನೀನು ಸುಳ್ಳು ಹೇಳಿದೀಯ ಅನ್ನೋದು ಅರ್ಥ ಆಗಿದೆ. ಪಾಪ ಅತ್ತೆ. ಅವರಿಗೆ ದುಡ್ಡು ಕೊಡಬೇಕಾಗಿತ್ತಲ್ಲವಾ. ಅವತ್ತು ಯಾರತ್ರನೋ ನೀನು ಫೋನಲ್ಲಿ ಮಾತಾಡ್ತಾ ಸಮಯ ಸಂದರ್ಭ ಅಂದ್ರೆ ನಾವು ಇನ್ನೊಬ್ಬರಿಗೆ ಸಹಾಯ ಮಾಡಬೇಕು ಅಲ್ವೇನ್ರೀ ಇಲ್ಲದಿದ್ದರೆ ಅವನನ್ನು ಮನುಷ್ಯ ಅಂತಾರಾ ಅಂತೆಲ್ಲ ಮಾತಾಡ್ತಿದ್ರಿ. ಆದರೆ ಇವತ್ತು ಮನೇಲಿ ದುಡ್ಡಿದ್ರೂ ಅತ್ತೆಗೆ ಇಲ್ಲ ಅಂತ ಹೇಳಿ ಕಳಿಸಿದೀರ. ನನ್ನೆದುರಿಗೆ ಒಂದು ಸುಳ್ಳು ಹೇಳಿರೋ ನೀವು ನಿಜವಾಗಲೂ ದಿನಾ ಎಷ್ಟೆಷ್ಟು ಸುಳ್ಳು ಹೇಳ್ತಿರ್ತೀಯೋ ಅಲ್ವಾಪ್ಪಾ.

ಅಪ್ಪ : (ಸಿಟ್ಟಿನಿಂದ) ಎಷ್ಟು ತರ್ಲೆ ಮಾಡ್ತೀಯ. ಹೋಗಿ ಓದ್ಕೊ ಅಂದ್ರೆ ಕೇಳ್ತಿಲ್ಲಾ. (ಕೆನ್ನೆಗೆ ಜೋರಾಗಿ ಹೊಡೆಯುತ್ತಾನೆ. ಪುಟ್ಟಿ ಜೋರಾಗಿ ಅತ್ತಾಗ ಅಮ್ಮ ಬರುತ್ತಾಳೆ)

ಅಮ್ಮ : ಯಾಕೆ ಪುಟ್ಟಿ ಅಳ್ತಿದೀಯ. ಏನಾಯ್ತು.

ಮಗಳು : ಅಪ್ಪ ಹೊಡೆದ್ರು.

ಅಪ್ಪ : ಇನ್ನೇನೇ ಮತ್ತೆ ಬೆಳಗಾಗೆದ್ದು ಏನೇನೋ ಪ್ರಶ್ನೆ ಕೇಳ್ತಿರ್ತಾಳೆ.

ಮಗಳು : ಅಮ್ಮಾ ನೀನು ಹೇಳ್ತಿದ್ಯಲ್ಲ. ಸುಳ್ಳು ಹೇಳಿದ್ರೆ ದೇವರು ಪೆಟ್ಟು ಕೊಡ್ತಾನೆ ಅಂತ. ಆದರೆ ಈಗ ನೋಡು ಸುಳ್ಳಾಡಿದ್ದು ಅಪ್ಪ ಪೆಟ್ಟು ತಿಂದಿದ್ದು ನಾನು.

ಅಮ್ಮ : ರೀ ಏನ್ರೀ ಇದು. ಪುಟ್ಟಿ ಏನು ಹೇಳ್ತಿದಾಳೆ.

ಅಪ್ಪ : ಅದೇ ಕಣೆ, ಸುನಂದ ಬಂದು ಹೋದ್ಲಲ್ಲ ಅವಾಗಿಂದ ಇವಳು ಹೀಗೆ ಪ್ರಶ್ನೆ ಕೇಳ್ತಿದಾಳೆ.

ಮಗಳು : ನೀನೇ ಹೇಳು ಅಮ್ಮ. ಮನೇಲಿ ದುಡ್ಡು ಇಟ್ಕೊಂಡು ಅತ್ತೆಗೆ ನಮ್ಮನೇಲಿ ಬಿಡಿಗಾಸೂ ಇಲ್ಲ ಅಂತ ಹೇಳಬಹುದಾ. ನಾಳೆ ದೊಡ್ಡೋಳಾದ ಮೇಲೆ ನಾನೂ ಅಪ್ಪನ ತರಹಾನೇ ಸುಳ್ಳು ಹೇಳ್ಲಾ.

ಅಮ್ಮ : ರೀ ನಾನು ಅವಾಗ್ಲೇ ಹೇಳ್ದೆ. ನೀವು ನನ್ನ ಮಾತು ಕೇಳ್ಲಿಲ್ಲ. ನೋಡಿ ಈಗ ನಮ್ಮ ಮಗಳ ಮುಂದೆ ನಾವೇ ತಲೆ ತಗ್ಗಿಸೋ ಹಾಗೆ ಆಯ್ತು.

ಅಪ್ಪ : (ಸ್ವಲ್ಪ ಯೋಚಿಸಿ) ಏನು ಮಾಡೋದು. ಬೇಡಾಂದ್ರೂ ಒಂದೊಂದು ಸಾರಿ ಹೀಗಾಗುತ್ತೆ. ಸರಿ ಸುನಂದನಿಗೆ ಫೋನ್ ಮಾಡಿ ಕರಿ. ಒಂದಿಷ್ಟು ದುಡ್ಡು

ಕೊಟ್ಟು ಕಳಿಸೋಣ. ಪುಟ್ಟಿ ಇನ್ಮೇಲೆ ನಾನು ಯಾವತ್ತೂ ಸುಳ್ಳು ಹೇಳಲ್ಲ ಆಯ್ತಾ. ನೀನೂ ಅಷ್ಟೆ ಸುಳ್ಳು ಹೇಳಲೇ ಬಾರದು. ಇವತ್ತು ನೀನೇ ನನಗೆ ಟೀಚರ್ರು ಆಯ್ತಾ.

ಪುಟ್ಟಿ : (ಕಣ್ಣೊರಿಸಿಕೊಂಡು ನಗುತ್ತಾ) ಅಮ್ಮಾ ನೀನು ಅತ್ತೆಗೆ ಫೋನ್ ಮಾಡೋದೇನು ಬೇಡ.

ಅಮ್ಮ : ಯಾಕೆ?

ಪುಟ್ಟಿ : ಪಾಪ ಅತ್ತೆ ಅಳ್ತಾ ಮನೆಯಿಂದ ಆಚೆ ಹೋಗ್ತಾ ಇದ್ದಾಗ ನಂಗೂ ಅಳು ಬಂತು. ಅದಕ್ಕೆ ಅತ್ತೇನ ನಾನು ಕರೆದು ನನ್ನ ಪಾಕೆಟ್ ಮನೆ ಇತ್ತಲ್ಲ ಅದನ್ನೇ ಕೊಟ್ಟು ಕಳಿಸ್ದೆ. ಅಪ್ಪಾ ಅದರಲ್ಲಿ ಎಷ್ಟೊಂದು ದುಡ್ಡಿತ್ತು ಗೊತ್ತಾ. ಅದನ್ನು ನೋಡಿ ಅತ್ತೆ ಇದರಿಂದ ಇವತ್ತು ನಮ್ಮ ಮನೆ ಮರ್ಯಾದೆ ಉಳಿಯುತ್ತೆ ಪುಟ್ಟಿ. ದೇವರು ನಿನ್ನನ್ನು ಚೆನ್ನಾಗಿ ಇಟ್ಟಿರ್ಲಿ ಅಂತ ತಲೆ ಮೇಲೆ ಕೈ ಇಟ್ಟು ಹೋದರು.

ಅಮ್ಮ : ಒಳ್ಳೆ ಕೆಲಸ ಮಾಡಿದೆ ಪುಟ್ಟಿ. ಹೋಗು ಸ್ನಾನ ಮಾಡಿ ರೆಡಿ ಆಗು ಸ್ಕೂಲಿಗೆ ಹೊತ್ತಾಗುತ್ತೆ.

ಅಪ್ಪ : (ಹೋಗ್ತಾ ಇದ್ದ ಪುಟ್ಟಿನ ನೋಡಿ) ಒಂದೊಂದು ಸಾರಿ ನಾವು ಮಕ್ಕಳ ಎದುರಿಗೆ ಎಂಥಾ ತಪ್ಪು ಮಾಡ್ತೀವಿ ಅಂತಾನೇ ಗೊತ್ತಾಗೋಲ್ಲ. ಮಕ್ಕಳ ಎದುರಿಗೆ ತಪ್ಪು ಮಾಡೋದೂ ಒಂದೇ ದೇವರ ಎದುರಿಗೆ ತಪ್ಪು ಮಾಡೋದೂ ಒಂದೇ ಅಂತ ಇವತ್ತು ಅರ್ಥ ಆಯ್ತು.

ಅಮ್ಮ : ಸರಿ ಇವತ್ತು ನಿಮ್ಮ ಮಗಳಿಂದ ನೀವೇ ಪಾಠ ಕಲಿತುಕೊಂಡ್ರಿ. ಆಚೆ ಮನೆ ಕಾಮಾಕ್ಷಮ್ಮ ಮೊನ್ನೆ ಹೇಳ್ತಿದ್ರು. ನಾವು ತಪ್ಪು ಮಾಡಬಾರದು, ಸುಳ್ಳು ಹೇಳಬಾರದು ಅನ್ನೋ ಮನೋಭಾವ ಬೆಳೆಸಿಕೊಂಡ್ರೆ, ನಾವು ಯಾರ ಎದುರಿಗೂ ತಪ್ಪೂ ಮಾಡೋಲ್ಲ ಸುಳ್ಳೂ ಹೇಳೋಲ್ಲ. ಆಗ ತಾಪತ್ರಯಾನೇ ಇರೋಲ್ಲ ಅಲ್ವಾ. ಅಷ್ಟಕ್ಕೂ ಇವತ್ತು ನೀವು ಯಾಕೆ ಹಾಗೆ ನಡ್ಕೊಂಡ್ರಿ ಅಂತ ನನಗೇ ಗೊತ್ತಾಗ್ಲಿಲ್ಲ. ಹೋಗ್ಲಿ ಬಿಡಿ. ತಿಂಡಿಗೆ ರೆಡಿ ಮಾಡ್ತೀನಿ. ಸ್ನಾನ ಮಾಡ್ಕೊಂಡು ಬನ್ನಿ ನಿಮಗೂ ಆಫೀಸಿಗೆ ಹೊತ್ತಾಗುತ್ತೆ (ಒಳಗೆ ಹೋಗುತ್ತಾಳೆ).

ಅಪ್ಪ : ಇದನ್ನೇ ಒಮ್ಮೊಮ್ಮೆ ಹೀಗೂ ಆಗುವುದು ಅನ್ನೋದು (ಒಳಗೆ ಹೋಗುತ್ತಾನೆ).

✤

---

**ಪರೀಕ್ಷೆ**

ಡಾಕ್ಟರೊಬ್ಬರು ಮನೆಗಂದಾಯ ಕಟ್ಟೋಕೆ ಹೋದರು. ಅವರನ್ನು ಸುಮಾರು ಅರ್ಧ ಗಂಟೆ ಟೇಬಲ್ಲಿನಿಂದ ಟೇಬಲ್ಲಿಗೆ ಅಲೆದಾಡಿಸಿ ಕಡೆಗೂ ಟ್ಯಾಕ್ಸ್ ತುಂಬಿಸಿಕೊಂಡರು. ಆಗ ಡಾಕ್ಟರು ಯಾಕ್ರೀ ಹೀಗೆ ಮಾಡಿದ್ರಿ ಅಂತ ಕೇಳಿದರೆ ಮತ್ತೇನು ಡಾಕ್ಟರೇ, ಬರೀ ತಲೆನೋವು ಅಂತ ನಿಮ್ಮಾಸ್ಪತ್ರೆಗೆ ಬಂದ್ರೆ ಎಕ್ಸ್‌ರೇ, ಇಸಿಜಿ, ರಕ್ತ ಪರೀಕ್ಷೆ, ಕೊಬ್ಬು, ಹೃದಯ ಪರೀಕ್ಷೆ ಅಂತೆಲ್ಲ ಹೇಳಿ ನಮ್ಮನ್ನು ಅಲೆಸೋದರ ಜೊತೆಗೆ ದುಡ್ಡೂ ಪೀಕಿಸ್ತೀರಿ ಅಂದಾಗ ಡಾಕ್ಟರು ಅಲ್ಲಿಂದ ಬೇಗ ಕಾಲ್ತೆಗೆದರು.

# ಮರೋ ಹಿರೋಶಿಮಾ

## ಮೂಲ : ಯಂಡಮೂರಿ ವೀರೇಂದ್ರನಾಥ್

## ಕನ್ನಡಕ್ಕೆ : ಯತಿರಾಜ್ ವೀರಾಂಬುಧಿ

ಎಲ್ಲ ಟಿವಿ ಚಾನೆಲ್‌ಗಳೂ ಬೃಹಸ್ಪತಿಯತ್ತ ತಮ್ಮ ಕ್ಯಾಮೆರಾಗಳನ್ನು ತಿರುಗಿಸಿವೆ. ಅವನಿಗೆ ಇದೇನೆಂದು ಅರ್ಥವಾಗುತ್ತಿಲ್ಲ. ವೇದಿಕೆ ಹತ್ತಿದ. ಅಲ್ಲಿದ್ದ ಮಂತ್ರಿ ಇವನನ್ನುಕಂಡು ಮುಗುಳ್ನಗುತ್ತಾನೆ.

ಮಂತ್ರಿ : (ಮೈಕನ್ನು ಬೃಹಸ್ಪತಿಗೆ ನೀಡಿ) ನನ್ನ ಬಗ್ಗೆ ನಿಮ್ಮ ಅಭಿಪ್ರಾಯ ಏನೆಂದು ಜನರಿಗೆ ಹೇಳಿ.

ಬೃಹಸ್ಪತಿ : ಬೇಡ ಸರ್. ಚೆನ್ನಾಗಿರೋದಿಲ್ಲ.

ಮಂ : ಪರವಾಗಿಲ್ಲ ಹೇಳಿ.

ಬೃ : ನನಗೆ ಮುಜುಗರ ಆಗ್ತಿದೆ.

ಮಂ : ಪ್ರಜಾಸ್ವಾಮ್ಯದಲ್ಲಿ ಮತದಾರರಿಗೆ ಮುಜುಗರ ಅನ್ನುವ ಪ್ರಶ್ನೆಯೇ ಇಲ್ಲ. ನೀವು ಸ್ವೇಚ್ಛೆಯಿಂದ ನಿಮ್ಮ ಅಭಿಪ್ರಾಯ ತಿಳಿಸಬಹುದು.

ಬೃ : ಇಷ್ಟು ನಿರ್ಭಯವಾಗಿ ನಿಮ್ಮ ಬಗ್ಗೆ ಹೇಳೂಂತ ನೀವು ಹೇಳ್ತಿದ್ದೀರಿ. ನಿಮಗೆ ಅಭಿನಂದನೆ ಹೇಳಬೇಕು ಸರ್.

ಮಂ : (ಸ್ವಗತ) ನಾನಂದುಕೊಂಡಿದ್ದಕ್ಕಿಂತ ಚೆನ್ನಾಗಿಯೇ ನಟಿಸುತ್ತಿದ್ದಾನೆ ಈ ಹುಡುಗ. ಆ ಇನ್ಸ್‌ಪೆಕ್ಟರ್ ಸಖತ್ ಟ್ರೈನಿಂಗ್ ಕೊಟ್ಟಿದ್ದಾನೆ.

ಅಲ್ಲಿ ಸೂಜಿ ಬಿದ್ದರೆ ಕೇಳಿಸುವಂತಹ ನಿಶ್ಶಬ್ದ ಏರ್ಪಟ್ಟಿತು.

ಬೃ : ನೀವು ನನಗೆ ಬಹಳ ಸಂಕೋಚಕ್ಕೆ ಒಳಪಡಿಸ್ತಿದ್ದೀರಿ. ಇದ್ದದ್ದನ್ನ ಇದ್ದ ಹಾಗೆ ಹೇಳಿದರೆ ನೀವು ಇಕ್ಕಟ್ಟಿಗೆ ಸಿಕ್ಕಿಕೊಳ್ತೀರಿ. ಕೊನೆಯ ಸಲ ಹೇಳ್ತಿದ್ದೇನೆ.

ಮಂ : (ನಿಯತ್ತಿನಿಂದ ಎನ್ನುವಂತೆ) ಬಾಬೂ! ಏನೋ ಎದುರಿಗೆ ಕಾಣಿಸಿದೆ ಅಂತ ಕರೆದೆ. ನೀನು ನನ್ನ ಕಡೆಯವನೋ, ಪ್ರತಿಪಕ್ಷದವನೋ ಗೊತ್ತಿಲ್ಲ. ಆದರು ನಿನ್ನನ್ನು ನಾನು ಕರೆದಿದ್ದೀನಿ ಅಂದರೆ ನನಗೇ ನನ್ನ ಮೇಲೆ ಎಷ್ಟು ನಂಬಿಕೆ ಇದೆ ಅಂತ ತಿಳ್ಕೋ. ನಾನು ಅನೇಕ ಒಳ್ಳೆಯ ಕೆಲಸಗಳನ್ನು ನನ್ನ ಶತ್ರುಗಳೂ ಮೆಚ್ಚಿಕೊಳ್ಳುವಂತೆ ಮಾಡಿದ್ದೇನೆ. ಅದಕ್ಕೇ ನಿನಗೇನನ್ನಿಸುತ್ತೋ ನಿರ್ಭಯವಾಗಿ ಹೇಳು ಅಂತಿರೋದು.

ಬೃ : (ಗಂಟಲು ಸರಿಪಡಿಸಿಕೊಂಡು) ಮಹಾಜನರೇ! ನಮ್ಮ ಮಾನ್ಯ ಮಂತ್ರಿಗಳು ಮತ್ತೆ ಚುನಾವಣೆಯ ಕಣದಲ್ಲಿದ್ದಾರೆ. ಜನರ

ಪ್ರತಿನಿಧಿಯಾಗಿ ಅವರ ಬಗ್ಗೆ ಹೇಳೆನ್ನುತ್ತಿದ್ದಾರೆ. ಏನು ಹೇಳಲಿ? ಎಲ್ಲಿಂದ ಶುರು ಮಾಡಲಿ? ಇವರು ಒಂದುಕಾಲದಲ್ಲಿ ಲಂಚ ವಿರೋಧಿ ಸಂಸ್ಥೆಯ ಬಳಿ, ಪೊಲೀಸ್ ಸ್ಟೇಷನ್‌ಗಳ ಬಳಿ ಬ್ರೋಕರ್ ಆಗಿ ಕೆಲಸ ಮಾಡ್ತಿದ್ದರು... ನಿಯತ್ತನ್ನು ನುಂಗುವ ಅನೇಕ ಕೆಲಸಗಳನ್ನು ಮಾಡಿದ್ದಾರೆ. ಇಂತಹವರನ್ನು ಏನು ಮಾಡಬೇಕು?

ಜನರು : ಒದೆಯಬೇಕು... ಕೊಲ್ಲಬೇಕು.....

ಮಂ : ಈ ಹುಡುಗ ಹೇಳಿದ್ದು ನಿಜ... ಇಂತಹದನ್ನು ತಡೆಯಬೇಕು. ಅದಕ್ಕೇ....

(ಚಪ್ಪಲಿಗಳ ಸುರಿಮಳೆ ಆಗುತ್ತದೆ. ಕೊಳೆತ ಟೊಮ್ಯಾಟೋಗಳು ಎಸೆಯಲ್ಪಡುತ್ತವೆ)

✤



# ಅಮ್ಮಾ, ನಾಳೆ ನಾನು ಶಾಲೆಗೆ ಹೋಗೋದಿಲ್ಲ

**- ಹ.ಶಿ. ಭೈರನಟ್ಟಿ**

**ಸಂ**ಜೆ ಆಟ ಆಡಿ ಮನೆಗೆ ಬಂದ ಗೋಪು ಅಮ್ಮನಿಗೆ ಹೇಳಿದ 'ಅಮ್ಮಾ, ನಾಳೆ ನಾನು ಶಾಲೆಗೆ ಹೋಗೋದಿಲ್ಲ.'

ಆಶ್ಚರ್ಯವಾಯಿತು ಅವಳಿಗೆ. ಮರುದಿವಸ ಅವನ ಹುಟ್ಟುಹಬ್ಬ. ಶಾಲೆಗೆ ಹೋಗಿ ತರಗತಿಯವರಿಗೆಲ್ಲ ಚಾಕಲೇಟು ಹಂಚುವುದಿದೆ. ಅವನ ಅಪ್ಪ ನನ್ನು ಚಾಕಲೇಟು ತರಲಿಕ್ಕೆಂದೇ ಪೇಟೆಗೆ ಕಳಿಸಿಯಾಗಿದೆ. ಈಗ ಇದೇನು ಹೀಗೆ ಹೇಳುತ್ತಿದ್ದಾನಿವ? ಯಾಕಿರಬಹುದು?

'ಯಾಕೋ ಏನಾಯ್ತು? ಆಡಲಿಕ್ಕೆ ಹೋದಾಗ ಯಾರಾದರೂ ಏನಾದರೂ ಅಂದರೇ?' ಎಂದು ಕೇಳಿದಳು.

'ಹೌದಮ್ಮಾ, ಸುಬ್ಬು ಹೇಳ್ತಾನೆ - ನಮ್ಮ ಪಮ್ಮಿಯೇ ನನಗಿಂತ ದೊಡ್ಡೋಳಂತೆ. ನಾನೇ ಚಿಕ್ಕವನಂತೆ' ಅಂದ.

'ಅದ್ಹೇಗಾಗ್ತದೆ? ನೋಡಲಿಕ್ಕೆ ದೊಡ್ಡೋಳ ಹಾಗೆ ಕಾಣಸ್ತಾಳೆ ಅಷ್ಟೆ, ನೀನೇ ದೊಡ್ಡವ. ನೀನು ಅವಳ ಅಣ್ಣ' ಎಂದಳು.

'ನಾನೂ ಹೀಗೇ ಹೇಳಿದೆ' ಆದರೆ ಸುಬ್ಬೂ ಒಪ್ತಿಲ್ಲ.

'ಸುಬ್ಬೂ ಒಪ್ತಿಲ್ಲ ಅಂದರೆ? ಒಪ್ಪ ಲಿಕ್ಕೆ ಬಿಡಲಿಕ್ಕೆ ಅವನಾರು? ನಾನು ಹೇಳ್ತಿದೀನಲ್ಲಾ?'

'ನೀನು ಏನೇನೋ ಹೇಳ್ತಿ. ಸುಬ್ಬೂ ಹೇಳ್ತಿರೋದೇ ಸರಿ' ಎಂದ.

ಮತ್ತಷ್ಟು ಆಶ್ಚರ್ಯವಾಯಿತು ಅವಳಿಗೆ. ಗೋಪು ಈ ಪರಿ ಹೇಳ್ತಿರಬೇಕಾದರೆ ಆ ಸುಬ್ಬು ಏನೇನು ತಲೆ ತುಂಬಿ ಕಳಿಸಿದ್ದಾನೋ ಏನೋ!

ಸ್ವಲ್ಪ ಚೌಕಾಶಿ ಮಾಡಿ ಕೇಳಿದರೆ ನಿಜ ಗೊತ್ತಾಗುತ್ತದೆಂದು 'ನೀನು ದೊಡ್ಡೋನಲ್ಲ ಅಂತ ಆ ಸುಬ್ಬೂ ಹೇಗೆ ಹೇಳ್ತಾನೆ?' ಎಂದು ಕೇಳಿದಳು.

'ನಾನೇ ದೊಡ್ಡೋನಾಗಿದ್ರೆ, ನನ್ನ ಹುಟ್ಟುಹಬ್ಬಾನೇ ಮೊದಲಿಗೆ ಬರಬೇಕು. ಪಮ್ಮಿಯದೇ ಮೊದಲಿಗೆ ಬರ್ತಿದೆ, ನವೆಂಬರಿನಲ್ಲಿ. ನನ್ನದು ಈಗ ಡಿಸೆಂಬರಿನಲ್ಲಿ. ಅಂದರೆ ಅವಳೇ ದೊಡ್ಡೋಳು ಆಯ್ತಲ್ಲ?' ಅಂದ.

ದೀರ್ಘ ಉಸಿರುಬಿಟ್ಟಳು ತಾಯಿ. ಅರ್ಥವಾಯಿತು ಅವಳಿಗೆ. ಇನ್ನಿವನಿಗೆ ಹೇಗೆ ತಿಳಿಹೇಳೋದು? ಅವನ ಹತ್ತಿರ ಹೋಗಿ ಎದುರಿಗೆ ಕುಳಿತು, 'ನೋಡು ಪುಟ್ಟಾ, ನೀನು ಪಮ್ಮಿಗಿಂತ ಮೊದಲೇ ಹುಟ್ಟಿದವನು. ನೀನು ಅವಳ ಅಣ್ಣ, ಅಂದ್ರೆ ನೀನೇ ದೊಡ್ಡವನು' ಅಂದಳು.

'ದೊಡ್ಡವನಾದ್ರೆ ನನ್ನದೇ ಮೊದಲು ಬರಬೇಕಲ್ಲ?'

ಮತ್ತದೇ ಪ್ರಶ್ನೆ ! ಮಾರ್ಕೆಟ್ಟಿನಿಂದ ಬಂದ ಮೇಲೆ ಅವರೇ ತಿಳಿಸಿ ಹೇಳಲಿ, ಹೇಗಾದರೂ ಮಾಡಿ ಒಪ್ಪಿಸುತ್ತಾರೆಂದುಕೊಂಡು ಅಲ್ಲಿಂದ ಎದ್ದಳು. ಗೋಪು ಟೀವಿ ಹಚ್ಚಿಕೊಂಡು ನೋಡುತ್ತ ಕುಳಿತುಬಿಟ್ಟ.

ಆಗಲೇ ಬಂದೇಬಿಟ್ಟರು ಗೋಪೂನ ಅಪ್ಪ.

'ನಾಳೆ ಎಲ್ಲರಿಗೂ ಚಾಕಲೇಟು ಕೊಡು, ನಿಮ್ಮ ಎಲ್ಲಾ ಗುರುಗಳಿಗೂ ಕೊಡು, ನೋಡು ಎಷ್ಟು ತಂದಿದ್ದೇನೆ' ಎನ್ನುತ್ತ ಎರಡೂ ಪಾಕೀಟುಗಳನ್ನು ಅವನ ಮುಂದಿಟ್ಟರು. ಗೋಪೂ ಮಾತಾಡಲೇ ಇಲ್ಲ. ಏನೋ ಆಗಿದೆ ಇವನಿಗೆ ಎಂದು ಖಾತ್ರಿಯಾಯಿತವರಿಗೆ. ಅಡಿಗೆಮನೆಯಿಂದ ಹೊರಗೆ ಬಂದ ಮಡದಿ ನಡೆದುದೆಲ್ಲವನ್ನೂ ಹೇಳಿದಳು.

'ನಮ್ಮ ಪುಟ್ಟೂ ಜಾಣ ಹುಡುಗ, ಹಾಗೆಲ್ಲಾ ಹಟ ಮಾಡೋದಿಲ್ಲ. ನಾಳೆ ಶಾಲೆಗೆ ಹೋಗ್ತಾನೆ' ಎಂದರು.

'ಇಲ್ಲಪ್ಪಾ  ನಾನು ಹೋಗೋದಿಲ್ಲ' ಎಂದು ಸ್ಪ ಷ್ಟವಾಗಿ ಹೇಳಿದ.

'ಯಾಕೆ?'

'ಹೋದರೆ ಅವರೆಲ್ಲಾ ನಗ್ತಾರೆ, ನಾನೇ ಚಿಕ್ಕವನು' ಅಂತ ಅಂದ.

'ಹೋಗದಿದ್ರೂ ನಗ್ತಾರೆ. ಗೋಪೂ ಈವತ್ತು ಶಾಲೆಗೆ ಯಾಕೆ ಬಂದಿಲ್ಲಾ ಅಂದ್ರೆ ಈವತ್ತು ಅವನ ಹುಟ್ಟುಹಬ್ಬ ಅಂತ ಸುಬ್ಬೂ ಹೇಳ್ತಾನೆ. ಹುಟ್ಟುಹಬ್ಬದ ದಿನ ಶಾಲೆಗೆ ಬರೋದಿಲ್ಲ ಅಂದರೆ ಗೋಪಿ ಹುಚ್ಚುಹುಡುಗ ಅಂತ ನಗ್ತಾರೆ' ಎಂದು ಹೆದರಿಸಿ ನೋಡಲು ಪ್ರಯತ್ನಿಸಿದರು.

'ನಾನು ಹೋಗೋದಿಲ್ಲ.' ಈಗಲೂ ಅದೇ ಉತ್ತರ.

ಇವನನ್ನು ಒಪ್ಪಿಸುವುದು ಅವರಿಗೂ ಕಠಿಣವೇ ಅನ್ನಿಸಿ ಅಲ್ಲಿಂದ ಎದ್ದರು.

ಇನ್ನು ಆ ಮಹಾರಾಣಿಯದು ಏನ್ಕತೆಯೋ ಏನೋ ಎಂದುಕೊಂಡು ಅಡಿಗೆ ಮನೆಗೆ ಬಂದು 'ಅವಳೆಲ್ಲಿ ಪಮ್ಮಿ?' ಎಂದು ಕೇಳಿದರು.

'ಮತ್ತೆಲ್ಲಿ ಹೋಗ್ತಾಳೆ, ಪಕ್ಕದ ಮನೆಗೆ ಹೋಗಿದ್ದಾಳೆ ಪಾಪೂನ ಜೊತೆ ಆಟ ಆಡಲು, ತೊಟ್ಟಿಲಲ್ಲಿ ಅವನು ಮಲಗಿಕೊಂಡ ಮೇಲೇ ಈಕೆ ಮನೆಗೆ ಬರೋದು' ಅಂದಳು. ಅಷ್ಟರಲ್ಲೇ ಹೆಜ್ಜೆ ಸಪ್ಪ ಳ ಕೇಳಿಸಿತು, 'ಬಂದಳೂಂತ ಕಾಣ್ತದೆ' ಅಂದಳು.

ಪಮ್ಮಿ ಬಂದಳು. ಅಣ್ಣನ ಮುಖ ಕಳೆಗುಂದಿದನ್ನು ಗಮನಿಸಿದಳು. ಅವನ ಎದುರಿಗೆ ಟೇಬಲ್ ಮೇಲೆ ಚಾಕಲೇಟ್ ಪಾಕೀಟುಗಳನ್ನು ನೋಡಿ ಹುಬ್ಬೇರಿಸಿ 'ನನ್ನ ಹುಟ್ಟುಹಬ್ಬಕ್ಕೂ ಇವನ್ನೇ ತಂದಿದ್ದಿ. ಚನ್ನಾಗಿರ್ತವೆ' ಎಂದು ತಂದೆಗೆ ಮೆಚ್ಚುಗೆ ಸೂಚಿಸಿ, ಅಣ್ಣನ ಕಡೆ ನೋಡಿದಳು. ಅವನು ಮಾತ್ರ ಗಂಟಿಕ್ಕಿದ ಮುಖವನ್ನು ಸಡಿಲಿಸಲಿಲ್ಲ, ಮಾತಾಡುವುದಂತೂ ದೂರ ಉಳಿಯಿತು. ಟೀವಿ ನೋಡುತ್ತ ಕುಳಿತುಬಿಟ್ಟಿದ್ದ.

ಏನೋ ಆಗಿದೆ ಅಂದುಕೊಂಡು ಅಮ್ಮನ ಬಳಿಗೆ ಹೋಗಿ ಕೇಳಿದಳು. ಅವರನ್ನು ಕೇಳುಹೋಗು ಎಂದು ಹೇಳಿ ಕಳಿಸಬೇಕೆಂದಿದ್ದಳು. ಆದರೆ ವಿಷಯವನ್ನು ಗಂಭೀರಗೊಳಿಸಬಾರದೆಂದು ಇದ್ದುದನ್ನು ಇದ್ದಂತೆ ಮೆಲ್ಲಗೆ ಹೇಳಿ ಮುಗಿಸಿದಳು.

ಪಮ್ಮಿ ವಿಷಯ ತಿಳಿದುಕೊಂಡು 'ಓ, ಇಷ್ಟೇನಾ...' ಎನ್ನುತ್ತ ಹೊರಗೆ ಅಣ್ಣನ ಹತ್ತಿರ ಬಂದು, 'ಪಕ್ಕದ್ಮನೆ ಪಾಪೂ ಹುಟ್ಟಿದ್ದು ಮೇ ತಿಂಗಳಲ್ಲಿ. ನಾನು ಹುಟ್ಟಿದ್ದು ನವಂಬರಿನಲ್ಲಿ ಅಂದ್ರೆ ಪಾಪೂ ನನಗಿಂತ ದೊಡ್ಡವನಾ? ' ಎಂದು ಕೇಳಿದಳು.

ಆಡಿದ್ದು ಇದೊಂದೇ ಮಾತು. ಗೋಪು ಅರ್ಥ ಮಾಡಿಕೊಂಡ. ಸಮಸ್ಯೆಯೇ ಬಗೆಹರಿಯಿತು.

ಗೋಪು ಕುರ್ಚಿಬಿಟ್ಟು ಎದ್ದವನೇ ಚಾಕಲೇಟ್ ಪಾಕೀಟುಗಳನ್ನು ತನ್ನ ಶಾಲಾಚೀಲದಲ್ಲಿ ಹಾಕಿಕೊಂಡ!

ಇಂಥದೊಂದು ಚಿಕ್ಕ ಉದಾಹರಣೆ ಕೊಟ್ಟು ತಿಳಿಹೇಳಬಹುದೆಂಬುದು ತಮಗೇಕೆ ತೋಚಲಿಲ್ಲ ಎಂದು ಅಪ್ಪ  ಅಮ್ಮ ಇಬ್ಬರೂ ಹಣೆ ಹಣೆ ಬಡಿದುಕೊಂಡು ಪಮ್ಮಿಯ ತರ್ಕಶಕ್ತಿಯನ್ನು ಕೊಂಡಾಡಿದರು.

ದೊಡ್ಡವರಿಗೆ ತಿಳಿಯಲಾರದ್ದು ಸಣ್ಣವರಿಗೆ ತಿಳಿಯಬಾರದೆಂದೇನಿಲ್ಲವಲ್ಲ!

✤

# ನನ್ನ ಬ್ಯಾಂಕ್ ಖಾತೆ

**- ಎಚ್.ಆರ್. ಹನುಮಂತ ರಾವ್**

(**ಸು**ಪ್ರಸಿದ್ಧ ಆಂಗ್ಲ ಹಾಸ್ಯ ಬರಹಗಾರ ದಿ. ಸ್ಟೀಫನ್ ಲೀಕಾಕ್ 20ನೇ ಶತಮಾನದ ಮೊದಲರ್ಧ ಭಾಗದಲ್ಲಿ ಜೀವಿಸಿದ್ದು ತಮ್ಮದೇ ವಿಶಿಷ್ಟ ಶೈಲಿಯ ಹಾಸ್ಯ ಬರಹಗಳನ್ನು ಬರೆದು ಆಗಿನ ಜನ ಸಮೂಹಕ್ಕೆ ನಗೆಯುಣಿಸಿ, ಪಿಜಿ ವುಡ್‌ಹೌಸ್‌ರಷ್ಟೇ, ಅವರಿಗೂ ಮುಂಚೆಯೇ, ಪ್ರಸಿದ್ದಿಗೆ ಬಂದವರು. ವುಡ್ ಹೌಸ್ ಲಂಡನ್ನಿನ ಸುತ್ತಮುತ್ತಲ ಸಾಮಾನ್ಯರ ಜನಜೀವನದ ಹಾಗೂ ಅಂದಿನ ಬ್ರಿಟಿಷ್ ಪೀರ್‌ಗಳ ಅಧಿಕಾರೂಢ ಐಶ್ವರ್ಯವಂತ ಸಮುದಾಯದ ಹುಚ್ಚಾಟಿಕೆಯನ್ನು ಲೇವಡಿ ಮಾಡಿ ನಗಿಸಿದರೆ, ಇವರು ಇಂಗ್ಲೆಂಡ್‌ನಿಂದ ವಲಸೆ ಬಂದು ಕೆನಡಾದಲ್ಲಿ ನೆಲಸಿದ್ದರೂ, ಅಮೇರಿಕನ್ನರ ನಿಕಟ ಪರಿಚಯದಿಂದಾಗಿ, ಅಲ್ಲಿಯ ಜನಜೀವನದ, ಅಂದಿನ ಪರಿಸ್ಥಿತಿಯ ಬಗ್ಗೆ ವಿಡಂಬಿಸಿ ಹಾಸ್ಯಗಾರನ ದೃಷ್ಟಿಯಲ್ಲಿ ಕಂಡು ವುಡ್‌ಹೌಸ್‌ರಂತೆಯೇ ವಿಶ್ವದಾದ್ಯಂತ ಆಂಗ್ಲ ಹಾಸ್ಯ ಸಾಹಿತ್ಯಾಸಕ್ತರನ್ನು ನಗಿಸಿದ್ದಾರೆ. ಇವರದೇ ಶೈಲಿಯ ಛಾಯೆಯಲ್ಲಿ ಬರೆದ ಈ ಪ್ರಬಂಧ ವಿಡಂಬನೆ ಅವರಿಗೆ ಅರ್ಪಿಸಿದ್ದೇನೆ).

ಇತ್ತೀಚಿಗೆ, ನನ್ನ ಜೀವನದಲ್ಲೇ ಮೊಟ್ಟ ಮೊದಲ ಬಾರಿಗೆ ಬ್ಯಾಂಕಿನಲ್ಲಿ ಖಾತೆ ತೆರೆಯಲು ಹೋದೆ. ಸಾಮಾನ್ಯರೊಳಗೆ ಸಾಮಾನ್ಯ ನಾನು. ನನ್ನ ಸಂಪಾದನೆ ಆಯಾ ತಿಂಗಳ ಖರ್ಚುವೆಚ್ಚಕ್ಕೆ ಸರಿತೂಗಿಸಿ ಮಿಗಿಸುವ ಮಾತೇ ಇಲ್ಲ. ನನ್ನ ಮಾಲೀಕ ಅಪರೂಪಕ್ಕೆ ಒಂದೊಂದು ಸಲ ದೀಪಾವಳಿಗೆ 'ಬೋನಸ್' ಕೊಡುವುದಿದೆ. ಆ ಸಮಯಕ್ಕೆ ಹೆಚ್ಚುವರಿ ಖರ್ಚು ಎಲ್ಲಿಂದಲೋ ಹುಟ್ಟಿ ಆ ಹಣವೂ ಕೈಯಲ್ಲಿರದೇ ಸೋರಿಹೋಗುತ್ತದೆ. ಹಾಗಾಗಿ 'ಮಿತವ್ಯಯ, ಕೂಡಿಡು' ಎಂಬ ದೊಡ್ಡ ದೊಡ್ಡ ಮಾತುಗಳು ನನಗೆ ಅನ್ವಯಿಸುವುದೇ ಇಲ್ಲ. ಹೀಗಾಗಿ ಈ ಬಾರಿ ನಮ್ಮ ಮಾಲೀಕ ಖುಷಿಯಾಗಿ ಹೆಚ್ಚುವರಿಯಾಗಿ ಕೊಟ್ಟ ಗರಿಗರಿ ನೋಟುಗಳ ಕಂತೆ ನೋಡಿ ನನಗೆ ಲಾಟರಿಯಲ್ಲಿ ಗೆದ್ದಷ್ಟೇ ಸಂತೋಷವಾಗಿತ್ತು. ಈ ವಾರ್ತೆ ಸ್ನೇಹಿತರುಗಳಿಗೆಲ್ಲಾ ತಿಳಿದು ಎಲ್ಲರೂ ಬುದ್ಧಿವಾದ ಮಾಡಿ ಅನವಶ್ಯಕವಾಗಿ ಇಷ್ಟೊಂದು ಹಣ ಪೋಲು ಮಾಡಬೇಡ, ಈಗಲೇ ಹತ್ತಿರದ ಬ್ಯಾಂಕಿನಲ್ಲಿಟ್ಟು ಕಷ್ಟಕಾಲಕ್ಕೆ ಇಟ್ಟುಕೊ, ಯಾರೂ ನಿನಗೆ ಅಯ್ಯೋ ಅನ್ನುವುದಿಲ್ಲ, ಅಲ್ಲದೆ, ಈ ಸರಕಾರ ರೇಷನ್ ಇಂದ ಹಿಡಿದು ಆಧಾರ್ ಕಾರ್ಡ್‌ವರೆಗೂ, ಸತ್ತರೆ ಹೂಳುವುದಕ್ಕೂ ಎಲ್ಲಕ್ಕೂ ಬ್ಯಾಂಕ್ ಅಕೌಂಟ್ ಬೇಕೆಂದು ರೂಲ್ಸ್ ಮಾಡಿದ್ದಾರೆ, ಅದಿಲ್ಲದೆ ನೀನು ಇದ್ದರೂ ಒಂದೇ ಸತ್ತರೂ ಒಂದೇ, ಅಲ್ಲದೆ ಹಣ ಎತ್ತುವುದಕ್ಕೂ ಕಾಸಿರಬೇಕು, ಅದರ ಮೇಲೆ ಲಂಚ ಬೇರೆ. ನಿಮ್ಮ ಮಾಲೀಕ ಕೂಡ ವೇತನ ಬ್ಯಾಂಕ್ ಅಕೌಂಟ್ಗೆ ಹಾಕಬೇಕೆಂದು ನಿಯಮ ಮಾಡಲಿದ್ದಾರೆ' ಎಂದೆಲ್ಲ ಉಪದೇಶಿಸಿದರು. ಹೀಗಾಗಿ ಹಲವು ಮಾಸಗಳೇ ಕಳೆದು ಹೋದವು. ಕೊನೆಗೆ ಅವರೆಲ್ಲರ ಒತ್ತಾಯಕ್ಕೆ ಮಣಿದು ನನ್ನಲ್ಲಿದ್ದ ಹಣ ಬ್ಯಾಂಕಿನಲ್ಲಿಡಲು ಜ್ಯೋತಿಷಿಯೊಬ್ಬನಿಂದ ಒಳ್ಳೆಯ ಮುಹೂರ್ತ ಹುಡುಕಿ ನೋಡಿ ಬ್ಯಾಂಕ್ ಒಂದಕ್ಕೆ ಹೋದೆ.

ನನಗೆ ಬ್ಯಾಂಕೆಂದರೆ ಇದ್ದ ಅಭಿಪ್ರಾಯ 'ಅಲ್ಲಿ ಸಿರಿವಂತರಷ್ಟೇ ಹೋಗುವುದು. ನನ್ನಂತಹವರು ಅಲ್ಲಿ ತೃಣಕ್ಕೆ ಸಮ. ಅಲ್ಲಿ ನನಗೆ ಕಾಲಿಡಲು ಭಯವಾಗುತ್ತದೆ.

‘ನಿನಗೇನಯ್ಯ ಇಲ್ಲಿ ಕೆಲಸ ಎಂದು ಯಾರಾದರೂ ಕೇಳಿ ಬಿಟ್ಟರೇ ಎನ್ನುವ ದಿಗಿಲು ನನಗೆ’ ನಾನೇನು ಹೇಳಲಿ? ಬ್ಯಾಂಕಿನ ಬಾಗಿಲಲ್ಲಿಯೇ ತುಪಾಕಿ ಹಿಡಿದ ವ್ಯಕ್ತಿ, ಅವನ ಟೂತ್‌ಬ್ರಶ್ ಮೀಸೆ ನೋಡಿದರೇನೇ ನನ್ನ ಕಾಲುಗಳು ಅದರುತ್ತವೆ. ಕಾರಣ, ನಾನು ವಾಸಿಸುವುದು ನನ್ನಂತೆಯೇ ಹಣವಂತರಲ್ಲದ ಜೀವ ಸವೆಸುವ ಮಂದಿ ಮಧ್ಯೆಯೇ, ಆದರೆ ಅಲ್ಲಿ ರೌಡಿಗಳು ಜಾಸ್ತಿ. ಹಾಗಾಗಿ ಪೊಲೀಸರು ಬಂದು ಹೋಗುತ್ತಿರುತ್ತಾರೆ, ಅವರುಗಳನ್ನು ಕಂಡರೆ ನನಗೆ ಎಲ್ಲಿಲ್ಲದ ಭಯ. ರಾತ್ರಿಯಲ್ಲೂ ಗಸ್ತು ತಿರುಗುತ್ತಾರೆ. ಅನೇಕ ಬಾರಿ ನನ್ನ ಮನೆ ಬಾಗಿಲು ತಟ್ಟಿದ್ದುಂಟು.

ತುಪಾಕಿ ವ್ಯಕ್ತಿಯನ್ನು ದಾಟಿ, ಬ್ಯಾಂಕ್ ಬಾಗಿಲು ತೆರೆದ ವೇಳೆ ನಾನು ಹೋಗಿದ್ದರೂ, ಅಲ್ಲಿ ಸಾಕಷ್ಟು ಜನರಿದ್ದರು. ನನಗೆ ಒಳಗೆ ಕಾಲಿಡುತ್ತಿದ್ದಂತೆ ಎಲ್ಲಿಲ್ಲದ ಭೀತಿ ಆವರಿಸಿತು. ಅದೇನು ಕೌಂಟರುಗಳು, ಅದೇನು ವೈಭವ? ಅವುಗಳ ಹಿಂದೆ ಗ್ಲಾಸ್ ಮುಖೇನ ಕಾಣುವ ವಿವಿಧ, ಗಂಭೀರ ಮುಖಭಾವದ ಗುಮಾಸ್ತರು ಒಬ್ಬರಲ್ಲೂ ನಗೆ ಮುಖಮುದ್ರೆ ಇಲ್ಲ, ಸತ್ತವನ ಸುತ್ತಲೂ ಇರುವವರ ದೃಷ್ಟಿ ಇದ್ದಂತೆ ಕಂಡರು. ಇನ್ನು ನನ್ನ ಸ್ವಾಗತಿಸುವವರ್ಯಾರು? ಸುಂದರವಾಗಿ ಕೇಶಾಲಂಕಾರ ಮಾಡಿದ ನಾಲ್ಕೈದು ಹೆಣ್ಣುಗಳಂತೂ ತಪ್ಪು ಮಾಡಿದ ಹುಡುಗರನ್ನು ನೋಡುವ ಮುಖಭಾವದಂತೆ ಕಂಡರು. ಇದೀಗ ಮತ್ತೊಂದು ಸಮಸ್ಯೆ ಕಾಡಿತು. ನಾ ಎಲ್ಲಿ ಹೋಗಲಿ, ಯಾರನ್ನು ಕಾಣಲಿ? ಉದ್ದನೆಯ ನಾಲ್ಕೈದು ಸಾಲುಗಳು ಇದ್ದವೇನೋ ನಿಜ. ಒಬ್ಬರನ್ನು ಕೇಳಿದೆ, ‘‘ಬ್ಯಾಂಕಿಗೆ ನಾನು ಹಣ ಇಡಬೇಕು, ಎಲ್ಲಿ ನಿಲ್ಲಲಿ?’’ ನನ್ನನ್ನು ಆತ ದುರುಗುಟ್ಟಿ ನೋಡಿದ, ‘‘ವ್ಹಾಟ್? ಯು ಟೆಲ್ಲಿಂಗ್, ನೋ ಕನ್ನಡ ಏನಕು, ಬೋರ್ಡ್ ಪಾರಯ್ಯ’’ ಎಂದ. ಅವ ತಮಿಳಿನವ, ಈಗ ನನ್ನ ನೆನಪಿಗೆ ಬಂತು, ಇದು ‘ಬೆಂಗಳೂರು ಮೆಟ್ರೋ’ ಅಂತ ಪಕ್ಕದಲ್ಲಿದ್ದವ ಹೇಳಿದ. ‘‘ಅಲ್ಲಿ ಕಾಣಿಸಲ್ವಾ ಬೋರ್ಡ್ ಬರೆದಿರೋದು? ಸಂದಾಯ, ಪಾವತಿ?’’ ಇದೀಗ ಏನೋ ತಪ್ಪು ಮಾಡಿದವನಂತೆ ಮೈಯೆಲ್ಲಾ ಮುದುರಿಕೊಂಡು ‘ಪಾವತಿ’ಗೆ ಹೋದೆ, ಅಲ್ಲಿ ಹತ್ತೆರಡು ಜನ ಕ್ಯೂನಲ್ಲಿ ಆಗಲೇ ಇದ್ದರು. ಇದೀಗ ಮತ್ತೊಂದು ಸಮಸ್ಯೆ ಎದುರಾಯಿತು. ಕೌಂಟರ್‌ನಲ್ಲಿ ಏನು ಹೇಳಬೇಕು? ಏನು ವಿವರ ಕೇಳುವರು? ಏನಾದರಾಗಲಿ ಎಂದು ಕೈಯಲ್ಲಿ ಹಣ ಹಿಡಿದಿದ್ದೆ. ಇದೀಗ ಹಣ ಸಂದಾಯ ಮಾಡಿದ ರಶೀತಿ ನನಗೆ ಕೊಡುವರೋ? ನನ್ನ ಮುಂದಿದ್ದವನನ್ನು ಕೇಳಿದೆ. ಅವ ನನ್ನ ಕೆಕ್ಕರಿಸಿ ನೋಡಿ ‘ಚಲನ್ ತುಂಬಿ ಕೊಡಿ’ ಎಂದು ಹೇಳಿ ವ್ಯಂಗ್ಯವಾಗಿ ನಕ್ಕ. ನನಗೆ ಏನೂ ತೋಚಲಿಲ್ಲ. ಬಹುಶಃ ಅವನಿಗೆ ಅರ್ಥವಾಗಿರಬೇಕು. ‘ಅಲ್ಲಿ ಕೇಳಿ’ ಎಂದು ಬಾಗಿಲ ಬಳಿ ಇದ್ದವನ್ನೊಬ್ಬನನ್ನ ತೋರಿಸಿದ. ಅಲ್ಲಿಗೆ ಹೋದೆ. ‘‘ಇದಕ್ಕೆ ಚಲಂ ಕೊಡು’’ ಅಂದೆ, ‘‘ಚಲಂ?’’ ಅಂತ ಅಚ್ಚರಿಯಿಂದ ಕೇಳಿದ, ‘‘ಹೌದು, ಈ ಹಣ ಕಟ್ಟಬೇಕು’’ ಅಂದೆ. ಹಾಗೆ ಹೇಳ್ರಿ, ಚಲನ್ನ? ಅಂದ ನನಗೂ ರೇಗಿತು ‘‘ಏನಯ್ಯ, ನಾ ಹೇಳಿದ್ದು ಅದೇ ಅಲ್ವಾ?’’ ಅಂದೆ. ಅವ ನನ್ನ ಮೃಗಾಲಯದ ಪ್ರಾಣಿಯಂತೆ ನೋಡಿ ಮತ್ತೊಬ್ಬನತ್ತ ತಿರುಗಿದ. ನಾನು ಮನಸ್ಸಿನಲ್ಲೇ ಹಿರಿಹಿರಿ ಹಿಗ್ಗಿದೆ. ಹೀಗೆ ಇದ್ದರೇನೇ ನನ್ನ ಕೆಲಸ ಆಗುವುದು ಎಂದು ನಿರ್ಧರಿಸಿ ಅವನು ಕೊಟ್ಟ ಚೀಟಿ ಕೈಯಲ್ಲಿ ಹಿಡಿದು, ಧಿಕ್ಕರಿಸುವವನಂತೆ ಮತ್ತೆ ಕ್ಯೂನಲ್ಲಿ ನಿಂತೆ. ನನಗೆ ಅರ್ಜಿ ತುಂಬುವುದೆಂದರೆ ಏನೋ ಅಲರ್ಜಿ. ಅಲ್ಲಿ ಕೇಳುವ ವಿವರಗಳ ಬಗ್ಗೆ ಉತ್ತರಿಸುವುದು

ಬ್ರಹ್ಮನಿಗೂ ಅಸಾಧ್ಯವೆಂಬ ಅನುಮಾನವಿದೆ. ಇದು ನನಗೆ ಅನುಭವವಾಗಿದೆ, ಸ್ವರ್ಗದಲ್ಲಿರುವ ನನ್ನ ತಂದೆ, ತಾಯಿ, ಇವರ ಕುಲ, ಗೋತ್ರ, ಜಾತಿ, ಅದರೊಳಗಿನ ಜಾತಿ, ಉಪಪಂಗಡ, ಅವರ ಪಗಾರ, ಹುಟ್ಟಿದ್ದು ಎಲ್ಲಿ ಬೆಳದಿದ್ದು, ಓದು ಇವೆಲ್ಲ ಕೊಡಬೇಕು. ಹೀಗೆ ಕೊನೆಗೂ ನನ್ನ ಸರದಿ ಬಂತು. ಕೌಂಟರಿನಲ್ಲಿದ್ದವ ಕೈ ಒಡ್ಡಿದ, ನನ್ನ ಕೈಯಲ್ಲಿದ್ದ ಚಲಂ ಹಾಗೂ ನೋಟುಗಳ ಕಂತೆ ಅವನೆಡೆ ತಳ್ಳಿದೆ. ''ಈ ಚಲನ್ ಭರ್ತಿಮಾಡದೆ ಕೊಟ್ಟಿರಲ್ಲಾ, ಯಾಕೆ ಬರೆಯಲು ಬರುವುದಿಲ್ಲವೇ?'' ಅಂತ ಕೇಳಿದ. ಗೊತ್ತಿದ್ದೂ ಇಲ್ಲವೆಂದು ತಲೆಯಾಡಿಸಿದೆ. ''ಇದೆಲ್ಲಾ ಬೋನಸ್ ಹಣ, ಬ್ಯಾಂಕಲ್ಲಿಡಲು ತಂದೆ, ಇಡುವಿರಾ?'' ಅಂತ ಕೇಳಿದೆ. ಅವ ತಲೆಯಾಡಿಸಿದ, ನೋಟುಗಳನ್ನು ಹಿಂದೆ ಮುಂದೆ ನೋಡುತ್ತಾ. ''ರಶೀತಿ ಕೊಡಿ'' ಅಂದೆ. ಅವನಿಗೆ ನನ್ನ ಕಂಡು ಅಯ್ಯೋ ಅನಿಸಿರಬೇಕು, ಆರ್ದ್ರ ಮುಖ ಮಾಡಿ ''ನಿಮಗೆ ಇಷ್ಟೊಂದು ಹಣ ಯಾರು ಕೊಟ್ಟರು?'' ಎಂದು ಕೇಳಿ ದೂರದ ದೊಡ್ಡ ಟೇಬಲ್ಲಿನಲ್ಲಿದ್ದವನನ್ನ ಸಂಜ್ಞೆ ಮಾಡಿ ಕರೆದ. ಇವನ ಮೇಲಾಧಿಕಾರಿ ಇರಬೇಕು, ಕೆಂಪು ಮುಖದವ ಕೋಪಿಷ್ಟನಂತೆ ಕಂಡ ನನ್ನ ಕಣ್ಣಿಗೆ. ಕ್ಯಾಶಿಯರ್ ಅವನಿಗೆ ಏನೋ ಆಂಗ್ಲ ಭಾಷೆಯಲ್ಲಿ 'ಥುಸ್ ಪುಸ್' ಎಂದು ಹೇಳುತ್ತಾ ಬಂದ, ಆತ ನನ್ನ ದುರ ದುರ ನೋಡಿ, ''ನೀವು ಸ್ವಲ್ಪ ಈ ಕಡೆ ಬನ್ನಿ'' ಎಂದ. ನನಗೆ ಕಸಿವಿಸಿ ಆಯಿತು, ದುಡ್ಡು ಕಟ್ಟಲು ಬಂದವನಿಗೆ ಏನಿದು ಇವರ ಕಿರಿಕಿರಿ? ನನಗೋ ಇಲ್ಲಿಗೆ ಹೆಜ್ಜೆ ಇಟ್ಟಾಗಲಿಂದಲೂ ಅವಮಾನವೇ, ಕೋಪ ಉಕ್ಕುತ್ತಿತ್ತು, ಆದರೆ ಇದು ಸಮಯವಲ್ಲ. ಹಣ ಅವರ ಬಳಿ ಇದೆ, ''ಯಾಕೆ? ಏನು ನನ್ನ ತಪ್ಪು? ಇಷ್ಟವಿಲ್ಲದಿದ್ದರೆ ಹಾಗೆ ಹೇಳಿ'' ಅಂದೆ. ''ನಿಮ್ಮ ಹಣ ಎಲ್ಲೂ ಹೋಗುವುದಿಲ್ಲ, ಸತಾಯಿಸದೆ ಬೇಗ ಬನ್ನಿ ಆ ಗೇಟಿಂದ'' ಅಂದ. ''ನನ್ನ ಹಣ ಅವರಿಗೆ ಕೊಟ್ಟಿದ್ದೇನೆ, ಇಲ್ಲೇ ಹೇಳಿ'' ಅಂದೆ. ''ನಿಮ್ಮ ಹಣ ಎಲ್ಲೂ ಹೋಗುವುದಿಲ್ಲ, ಸತಾಯಿಸದೆ ಬೇಗ ಬನ್ನಿ'' ಅಂದ. ನನ್ನ ಬೆನ್ನಿಗಿದ್ದವ ''ಪೋವಯ್ಯಾ, ಮಾಕಂತ ಯಾಲ ತೊಂದರ ಪೆಟ್ಟೇದಿ? ನಿನ್ನ ಹಣದ ಬಗ್ಗೆ ಅವರು ಮಾತಾಡುವುದಿದೆ? ಅಂದ'' ದಿನಸಿ ಅಂಗಡಿ ಶೆಟ್ಟರಿರಬೇಕು ಕನ್ನಡ ಇಂಗ್ಲಿಷ್ ಬೆರಸಿದ್ದು, ಬೇಸರದಿಂದ ನನ್ನ ಮೆಲ್ಲನೆ ಪಕ್ಕಕ್ಕೆ ತಳ್ಳಿದ. ಇದೀಗ ನನಗೂ ಕೋಪ ಉಕ್ಕುತ್ತಿತ್ತು. ಅವರು ಹೇಳಿದಂತೆ ಕೆಂಪು ಮುಖದವನ ಮೇಜಿನ ಬಳಿ ಹೋಗಿ ನಿಂತೆ ಮುಖ ಊದಿಸಿಕೊಂಡು ಏನೋ ತಪ್ಪು ಮಾಡಿದವನಂತೆ. ಆತ ನನ್ನ ಸಮಾಧಾನ ಪಡಿಸುವವನಂತೆ ''ಕುಳಿತುಕೊಳ್ಳಿ'' ಎಂದು ಕುರ್ಚಿ ತೋರಿಸಿದ ತಾನೂ ಕೂಡುತ್ತಾ, ನಾನು ನಿಂತೇ ಇದ್ದೆ, ಅವ ಮತ್ತೆ ''ದಯವಿಟ್ಟು ಕೂಡಿ'' ಎನ್ನುತ್ತಾ ''ಈ ನೋಟುಗಳು ನಿಮಗೆ ಹೇಗೆ ಬಂತು, ಯಾರು ಕೊಟ್ಟರು? ಪ್ರಾಮಾಣಿಕವಾಗಿ ಹೇಳಿ'' ಅಂದ. ''ಯಾಕೆ, ನನ್ನ ಹೀಗೆ ಕೇಳುವಿರಿ? ನಾನೇನು ಕಳ್ಳನೇ, ಯಾರ ತಲೆ ಹೊಡೆದು ತಂದಿದ್ದಲ್ಲಾ, ಇವು ಖೋಟಾನ?'' ಗಡಸಿನಿಂದಲೇ ಉತ್ತರಿಸಿದೆ. ''ಹಾಗೇನಿಲ್ಲ, ಅಪಾರ್ಥ ಮಾಡಬೇಡಿ, ಆದರೆ ನಿಮ್ಮನ್ನು ಕೇಳುವ ಹಕ್ಕು ನನಗಿದೆ. ಮೊದಲು ನಿಮ್ಮ ಬ್ಯಾಂಕ್ ಅಕೌಂಟ್ ವಿವರ ಕೊಡಿ, ಹಣ ಹೇಗೆ ನಿಮ್ಮ ಕೈಯ್ಗೆ ಬಂತು, ಆಮೇಲೆ ಬೇರೆ ಮಾತು'' ಅಂದ. ''ಇದೀಗ ಚೆನ್ನಾಗಿ ಹೇಳಿದಿರಿ, ನಾನು ಕದ್ದು ತಂದಿಲ್ಲ, ನನಗೆ ಮಾಲೀಕ ಬೋನಸ್ ಎಂದು ಕೊಟ್ಟದ್ದು. ನನ್ನ ಸ್ನೇಹಿತರ ಮಾತು ಕೇಳಿ ಇಲ್ಲಿ ಅಕೌಂಟ್ ತೆರೆದು ಹಣ ಇಡಲು ಬಂದೆ, ನಿಮಗೆ ಇಷ್ಟವಿಲ್ಲದಿದ್ದರೆ ಹಾಗೆ ಹೇಳಿ, ವಾಪಸ್ ಹೋಗುವೆ'' ಅಂದೆ. ನಿಮ್ಮ ಕೈ

ಸೇರಿದ್ದು ಈ ದುಡ್ಡು ಯಾವಾಗ? ನಿಮ್ಮ ಮಾಲೀಕ ಯಾರು, ವಿವರ ಕೊಡಿ ಅಂದ.'' ಇದೀಗ ನನಗೆ ಚೆನ್ನಾಗಿ ಅರ್ಥವಾಗಿ ಹೋಗಿತ್ತು, ಇದು ಕದ್ದ ಮಾಲೆನ್ನುವುದು ಅವರ ಅಭಿಪ್ರಾಯ. ''ನೀವೇ ಹೋಗಿ ಅವರನ್ನ ಕೇಳಿ'' ಎಂದು ವಿವರ ಕೊಟ್ಟೆ. ಆತ ಬರೆದುಕೊಂಡು ಯಾರಿಗೋ ಫೋನ್ ಮಾಡಿದ. ಫೋನಲ್ಲಿ ಸಂಭಾಷಣೆ 'ಹಾಗೆ, ಹೀಗೆ' ಎಂದೆಲ್ಲ ಸುಮಾರು ವೇಳೆ ಕಾಲ ವ್ಯವವಾಯಿತು. ಫೋನಿಟ್ಟು ಆತ ನನಗೆ ಹೇಳಿದ. ''ಕ್ಷಮಿಸಿ, ನಿಮ್ಮನ್ನು ತಪ್ಪಾಗಿ ತಿಳಿದಿದ್ದೆವು. ನೀವು ಅಮಾಯಕರೆಂದು ಗೊತ್ತಾಯಿತು. ನಿಮ್ಮ ಮಾಲೀಕ ಒಳ್ಳೆಯ ಹೆಸರು ಪಡೆದವರು. ನಿಮ್ಮ ಬಗ್ಗೆ ಹಾಗೂ ನಿಮ್ಮ ಈ ಹಣದ ವಿವರ ತಿಳಿಸಿದ್ದಾರೆ. ಹೊರಗೆ ಕೂಡಿ, ನಿಮ್ಮ ಆಧಾರ್ ಕಾರ್ಡ್ನ ಝೆರಾಕ್ಸ್ ಪ್ರತಿ ಕೊಡಿ, ನಿಮ್ಮ ಎರಡು ಫೋಟೋಗಳನ್ನೂ ಕೊಡಿ ಎಲ್ಲಾ ಮಾಡಿಕೊಡುತ್ತೇವೆ ಕಾರಣ ಈ ಮುಖ ಮುದ್ರೆಯ ನೋಟುಗಳನ್ನು ಸರ್ಕಾರ ಹಿಂದಕ್ಕೆ ತೊಗೊಂಡಿರುವ ಕಾರಣ ಚಲಾವಣೆಯಲ್ಲಿಲ್ಲ, ನೀವು ಆರು ತಿಂಗಳು ಸುಮ್ಮನಿದ್ದು ಗಡುವು ಮೀರಿದ ಮೇಲೆ ಈಗ ತಂದಿರುವಿರಿ ಆ ಕಾರಣ ಈ ಅನುಮಾನಗಳು ಬಂದು ಸರ್ಕಾರದ ನಿಯಮದಂತೆ ನಿಮ್ಮನ್ನು ನಾವು ಪ್ರಶ್ನಿಸುವಂತಾಯಿತು'' ಅಂದ. ''ಅಂದರೆ ಈ ಹಣಕ್ಕೆ ಬೆಲೆ ಇಲ್ಲವೇ?'' ನನ್ನ ಹಣ ನನಗೆ ಪುನಃ ಕೊಡುವಿರಲ್ಲವೇ? ಅಂತ ಕೇಳಿದಾಗ ನನಗೆ ಪ್ರಾಣವೇ ಹೋದಂತಾಯಿತು. ಅವರು ನಕ್ಕು ಹೇಳಿದರು, ''ಹೋಗಿ ಅಲ್ಲಿ ಕೂತು ಎಲ್ಲ ವಿವರ ಕೊಡಿ, ಅವರು ಅರ್ಜಿ ತುಂಬಿಸುತ್ತಾರೆ. ನಿಮ್ಮ ಹಣ ಅಕೌಂಟಿಗೆ ಹಾಕುತ್ತೇವೆ, ನಾಲ್ಕು ದಿನ ಬಿಟ್ಟು ಬನ್ನಿ'' ಅಂದ. ಇದೀಗ ನನಗೆ ರೇಗಿತ್ತು, ಇಲ್ಲೇನೋ ಗೋಲ್ಮಾಲ್ ಆಗುವುದುಂಟು. ''ನನಗೆ ಇಲ್ಲಿ ಅಕೌಂಟ್ ಬೇಡ, ಹಣ ಹಿಂತಿರುಗಿಸಿ'' ಅಂದೆ. ಅವನು ''ನನ್ನ ಮಾತು ಕೇಳಿ ನಿಮ್ಮ ಅಕೌಂಟ್‌ನಲ್ಲಿ ಕ್ಷೇಮವಾಗಿರುವುದು, ಯೋಚನೆ ಬೇಡ'' ಅಂದ. ನಾನು ಒಂದೇ ಪಟ್ಟು ಹಿಡಿದೆ. ''ಹಣ ಇಲ್ಲಿ ಪಾವತಿಸುವುದಕ್ಕಲ್ಲವೇ ನೀವು ಬಂದಿದ್ದು?'' ಅಂದ. ನಾನು ಸೋಟೆ ಮುಖ ಮಾಡಿದೆ. ''ಇರಬಹುದು, ಈಗ ನನಗೆ ನನ್ನ ಹಣ ಸರಿ ಮಾಡಿ ಕೊಡಿ'' ಅಂದೆ. ಅಧಿಕಾರಿ ನನ್ನನ್ನು ತೀವ್ರವಾಗಿ ನೋಡುತ್ತಾ ''ನಮ್ಮ ಸಮಯ ನೀವು ವ್ಯಯ ಮಾಡಿದಿರಿ, ಇನ್ನೊಮ್ಮೆ ಯೋಚಿಸಿ'' ಅಂದ. ನಾನು ಅವರಷ್ಟೇ ಹಠವಾದಿ. ''ಬೇಡ, ಹಣ ವಾಪಸ್ಸು ಕೊಡಿ'' ಅಂದೆ. ಒಂದೇ ಪಟ್ಟು ಹಿಡಿದು.

ಅವನು ನನ್ನ ಕಡೆ ವಿಚಿತ್ರವಾಗಿ ನೋಡುತ್ತಾ ಅಲ್ಲಿ ಯಾರನ್ನೋ ಕರೆದು, ''ಇವರಿಂದ ಎಲ್ಲ ವಿವರ ತುಂಬಿ, ರುಜು ಪಡೆದು ಅವರ ಹಣ ವಿನಿಮಯ ಮಾಡಿ ಕೊಡಿ'' ಎಂದು ಹೇಳಿ ನನ್ನ ಅವನ ಬಳಿ ಸಾಗಹಾಕಿದರು. ತನ್ನ ಮುಖದ ಮೇಲಿನ ಬೆವರು ಒರೆಸಿಕೊಳ್ಳುತ್ತಾ. ನನ್ನ ಬೆನ್ನ ಹಿಂದೆ ಅಲ್ಲಿರುವವರೆಲ್ಲ ನನ್ನ ವಿಚಿತ್ರವಾಗಿ ನೋಡಿದಂತೆ ಭಾಸವಾಯಿತು. ಮತ್ತೆ ಏನೇನೋ ಹಾಳೆಗಳಿಗೆ ನನ್ನ ಹಸ್ತಾಕ್ಷರ ಪಡೆದು ಅವನು ಒಂದು ತರಹ ನಗುತ್ತಾ ಹಣ ಕೊಟ್ಟು ಕಳುಹಿಸಿದ. ನಾನು ಏನೋ ಕಳೆದುಕೊಂಡವನ ಹಾಗೆ ಅಲ್ಲಿಂದ ಎದ್ದು ಜೋಬಲ್ಲಿ ಹಣ ತುಂಬಿಕೊಂಡು ಊದಿಸಿಕೊಂಡ ಮುಖ ಹೊತ್ತು, ಸರಸರ ಹೊರಟೆ. ಬಾಗಿಲಲ್ಲಿ ತುಪಾಕಿ ಹಿಡಿದವ ಮೀಸೆ ತಿರುವುತ್ತಾ ನನ್ನನ್ನ ಕೆಕ್ಕರಿಸಿ ನೋಡಿದ್ದು ನನ್ನ ಗಮನಕ್ಕೆ ಬಂತು. ನನಗೆ ಈ ಬ್ಯಾಂಕ್ ವ್ಯವಹಾರ ಸರಿಬರದು, ಈ ವ್ಯವಹಾರ ನಡೆದಿದ್ದನ್ನು ಯಾರಿಗೂ ಹೇಳುವುದಿಲ್ಲ. ನೀವು ಹೇಳಬೇಡಿ. ಇದುವರೆಗೆ ಮತ್ತೆ ಯಾವ ಬ್ಯಾಂಕ್ ಬಳಿಯೂ ಸುಳಿದಿಲ್ಲ. ಏನಾದರಾಗಲಿ. ಯಾರಿಗೆ ಬೇಕು ಈ ಬ್ಯಾಂಕ್ ವ್ಯವಹಾರ?

# ಏನಮ್ಮಾ ಕಾವೇರಮ್ಮಾ.......

**- ನುಗ್ಗೆಹಳ್ಳಿ ಪಂಕಜ**

''ನೀರು! ನೀರು!'' ಎಂದು ಬಿಲ್ಡಿಂಗ್‌ನಲ್ಲಿ ಒಂದೇ ಹಾಹಾಕಾರ! ಕಾವೇರಿ ಚಳುವಳಿಯೇ ನಮ್ಮ ಬಿಲ್ಡಿಂಗ್ ಒಳಗೆ ನುಗ್ಗಿಬಿಡ್ತೋ ಎಂಬಂತೆ........

''ನಮಗೆ ಕುಡಿಯೋಕ್ಕೆ ನೀರು ಬೇಕು'' - ಮೇಲಿನ ಫ್ಲೋರ್‌ನವರೆಲ್ಲಾ ಧಡ ಧಡ ಕೆಳಗಿಳಿದ್ರು ಬಾಟಲ್‌ಗಳನ್ನ ಹಿಡಿದುಕೊಂಡು - ''ನೀರು ಕೊಟ್ಟು, ಯಾರು ಪುಣ್ಯ ಕಟ್ಕೊತೀರಿ?''

ಎಲ್ರೂ ಕೈಕೈ ಹಿಸುಕಿ ಕೊಂಡ್ರು - ಕಾರಣ, ಎಲ್ರಿಗೂ ಪುಣ್ಯ ಬೇಕಾಗಿತ್ತು....... ಆದ್ರೆ, ನೀರಿದ್ದರಲ್ವೇ, ಕೊಡೋಕ್ಕೆ? ಏನ್ಮಾಡೋದು?

ಈಗ ಸೆಕೆಂಡ್ ಫ್ಲೋರಿನಿಂದ ಇಳೀತು ಕಲರ್ಫುಲ್ ಪಾರ್ಟಿ! ಹಬ್ಬ ಅಂತ ಸಂಭ್ರಮದಿಂದ ತಲೆಗೆ ಎಣ್ಣೆ ಹಚ್ಚಿದ್ರು ಕೆಲವು ದೊರೆಸಾನಿಯರು, ಘಮ ಘಮ ಎಂದು ತಲೆಗೆ ಶ್ಯಾಂಪು ಬಳ್ಕೊಂಡಿದ್ದ ಆಫೀಸ್ ಹುಡುಗಿಯರು, ಹೇರ್ ಡೈ ಬಳ್ಕೊಂಡಿದ್ದ ಒಂದಷ್ಟು ಮೆನೊಪಾಸ್ ಬ್ಯೂಟಿಯರು........

''ನಾವೀಗ್ಲೇ ಪಾರ್ಟಿಗೆ ಹೊಗ್ಬೇಕು - ಏನಾರ ಮಾಡಿ ಮೇಡಮ್?''

''ನಾವು ಬೀಗರ ಮನೆ ಊಟಕ್ಕೆ ಹೋಗ್ಲೇಬೇಕು..... ನೀರು ತರಿಸಿ, ಮೇಡಮ್.....''

''ಅದೇ, ಅಷ್ಟೊಂದು ಟ್ಯಾಂಕರ್‌ಗಳಿವೆ! ಬೀದಿಬೀದೀಲೂ ಹೋಗೋದು, ಕಾಣಿಸುತ್ತವೆ? ಬೇಗ ತರಿಸಿ, ಮೇಡಮ್? ನಾನೇ ಫೋನ್ ಮಾಡ್ಲಾ? ಕಾವೇರಿ, ಗೋದಾವರಿ, ನರ್ಮದಾ, ಯಮುನೆ? ಗಂಗಾ.....'' ಒಳ್ಳೆ ಸ್ತೋತ್ರಪಾಠದ ಹಾಗೆ ತಡಬಡಿಸದೆ ಒಪ್ಪಿಸಿದಳು.

''ಗ..ಂ..ಗಾ! ಗಂಗಾ ತರಿಸಿ ಮೇಡಮ್ - ಗಂಗೆಯಲ್ಲಿ ಸ್ನಾನ ಮಾಡಿದ ಪುಣ್ಯ ಬರತ್ತೆ, ಕೂತಲ್ಲೇ!'' - ಎಲ್ರೂ ವೋಟ್ ಕೊಟ್ರು - ಗಂಗಾ ಸ್ನಾನಕ್ಕೆ ರೆಡಿಯಾದ್ರು.

ಅಷ್ಟರಲ್ಲೇ ಮತ್ತೂ ಗಲಾಟೆ, ಇನ್ನೊಂದು ಫ್ಲೋರಿಂದ - ''ನಮ್ಮ ಸಂಪ್‌ನಲ್ಲೇ - ಊ ಮೇಡಮ್, ನಮ್ಮ ಸಂಪ್‌ನಲ್ಲೇ ನೀರಿಲ್ವಂತೆ ಮೇಡಮ್!

''ಮೋಟರ್ ಕೆಟ್‌ಹೋಗಿದ್ಯಂತೆ ಮೇಡಮ್! ಈಗೇನ್ಮಾಡೋದು?''

''ಓ ಗಾಡ್! ಎಲ್ಲಿಗ್ ಹೋದ, ನಮ್ಮ ಬಿಲ್ಡಿಂಗ್ ಮಾಪುಳ್ಳೇ? ಅದೇ ಮೂರ್ ಹೊತ್ತೂ ಕುರ್ಚಿ ಮೇಲೆ ಕೂತು, ತೂಕಡಿಸ್ತಾ ಇರೋ ಆಸಾಮಿ?''

ಹೌದು, ಒಳ್ಳೇ ಪೈಲ್ವಾನ್ ತರಹಾ ಇದ್ದ ಅವರ ವಾಚ್ಮನ್ ಸದಾ ತೂಕಡಿಸ್ತಿದ್ದ; ಅದಕ್ಕಾಗಿ ದಿಂಬು - ಹೊದಿಕೆ, ಎಲ್ಲಾನೂ ತಂದಿಟ್ಟುಕೊಂಡಿದ್ದ ಬೇರೆ! ಅದಕ್ಕೆ ಅವನಿಗೆ ಎಲ್ರೂ ಸೇರಿ ನಾಮಕರಣ ಮಾಡಿದ್ರು - 'ಮಾಪುಳ್ಳೆ' ಅಂತ!

''ಅವನು ಕುರ್ಚಿ ಮೇಲೂ ಇಲ್ಲ ಮೇಡಮ್!'' ಬಿಲ್ಡಿಂಗ್ನವರೆಲ್ಲಾ ಕೆಳಗೆ ಧಾವಿಸಿ, ತಲೆ ಮೇಲೆ ಆಕಾಶ ಬಿದ್ದವರಂತೆ ಕಿರುಚಿಕೊಂಡ್ರು- ''ಕಾವೇರಿ ಚಳುವಳೀಲಿ ಭಾಗವಹಿಸೊಕ್ಕೆ

ಹೋಗಿರ್ಬೇಕು! ನಾವೂ ಹೋಗೋದಾ ಮೇಡಮ್?''

''ಯಾಕೆ, ನಿಮ್ಮ ಈ ಕಲರ್‌ಫುಲ್ ತಲೆಗಳನ್ನ ಪ್ರದರ್ಶನ ಮಾಡೋಕ್ಕಾ? ಟಿವಿನವರು ಕುಣಿದಾಡಿಬಿಡ್ತಾರೆ, ನಿಮ್ಮನ್ನ ಕಂಡು!'' ಹಾಸ್ಯಮಾಡಿದ್ರು, ಸೆಕೆಂಡ್ ಫ್ಲೋರ್‌ನವರನ್ನ, ಮಿಕ್ಕವರು. ಅವರು ಸಿಟ್ಟಾಗಿ ಜಗಳಕ್ಕೆ ನಿಂತ್ರು.

ತಲೆ ಚಿಟ್ಟುಹಿಡಿದುಹೋಯ್ತು. ಎಂದೂ ಆಗಿರ್ಲಿಲ್ಲ ಹೀಗೆ! ಈಗೇನ್ಮಾಡೋದು? ''ಕಾವೇರಿ ಆಂಟಿ, ಎಲ್ಲಿದ್ದೀಯಮ್ಮಾ ನೀನು? ಸ್ವಲ್ಪ ಬಾಮ್ಮ, ಬಾಮ್ಮ'' ಪ್ರಾರ್ಥಿಸಿದೆ.

ಈ ರಂಪಾನೇ ಸಾಲ್ದು ಎಂಬಂತೆ ದೊಡ್ಡ ಕೂಗು ಕೇಳ್ಬಂತು, ಮೇಲಿನಿಂದ! ''ಎನ್ ಮಾಮ್ಯಾರೇ ಶುಮ್ಮ ಇದಾರೆ, ನಿಂಗೆ ಯಾರ್‌ಡೀ, ಹಿಂಗೆಲ್ಲಾ ನನ್ನ ಬೈಯೋದಿಕ್ಕೇ?'' – ಚೆನ್ನೈ ಸೊಸೆ ಆರ್ಭಟ ಮಾಡ್ತಿದ್ದಳು, ಅಕ್ಕಪಕ್ಕದ ಫ್ಲ್ಯಾಟ್‌ನವರು ಕೂಡ. ಅವರುಗಳು ಏನಂದ್ರೋ, ಚೆನ್ನೈ ಸೊಸೆಯ ಗಂಟಲು ಅವಳ ಊರಾದ ಚೆನ್ನೈವರೆಗೂ ಏರಿತು. ''ಕನ್ನಡ ಪಿಳ್ಳೈ ರೊಂಬ ಶಮತ್ತು ಎಂದು, ನನ್ನನ್ನ ಎಂಗಮ್ಮ ಕೊಟ್ರು – ಇಂದ ಮೈಸೂರಿಗೆ; ಆನಾಲ್ ನೀಂಗೆ? ಅಬ್ಬಾಬ್ಬಬ್ಬಬ್ಬ! ವಾಪಸ್ ಪೊರೆ, ಎನ್ ಚೆನ್ನೈಕೆ!'' – ಹೆದರಿಸಿದಳು.

''ಭೇಷ್, ಒಳ್ಳೆ ಐಡಿಯಾ! ಹಾಗೆ ಮಾಡಿ, ಮತ್ತು ಹೋದ ತಕ್ಷಣ, ನಮ್ಮ ಕಾವೇರಮ್ಮನ್ನ ಕಳಿಸ್ಬಿಡಿ, ದಮ್ಮಯ್ಯಾ! ಅದ್ಸರಿ, ನಿಮ್ಮ ಕನ್ನಡ ಪಿಳ್ಳೈನ ಏನ್ ಮಾಡ್ತೀರಿ? ಅಲ್ಲಿ ನಿಮ್ಮ ಶೆನ್ನೈನವರು ಆರತಿ ಮಾಡಿ ಸೋಫಾ ಮೇಲೆ ಕೂರಿಸ್ತಾರ ಏನು?''

ಚೈನ್ನೈ ಸೊಸೆಗೇ ನಗು ಬಂದುಬಿಟ್ತು; ಅದನ್ನು ಕಂಡು ಎಲ್ರೂ ಗಟ್ಟಿಯಾಗಿ ನಗಲಾರಂಭಿಸಿದ್ರು.

ವಾತಾವರಣ ತಿಳಿಯಾಯ್ತು. ಇದ್ದಕ್ಕಿಂತೆಯೇ ದೊಡ್ಡ ಕೂಗು!

''ಓ ಮೋಟಾರ್ ಬಂತು! ಬಂತು! ಮೋಟಾರ್ ಬಂತು!'' – ಎಲ್ರೂ ಸಾಮೂಹಿಕ ಗಾನ ಆರಂಭಿಸ್ತಾ, ಸಂಭ್ರಮದಿಂದ ಕೆಳಗಿಳಿದ್ರು, ಮೋಟಾರ್ ರಾಣಿಯನ್ನ ಸ್ವಾಗತಿಸಲು – 'ತಲೆಗೆ ಎಣ್ಣೆ ಹಚ್ಚಿಕೊಂಡವರು, ಶ್ಯಾಂಪೂ ಹಾಕಿಕೊಂಡವರು, ಹೇರ್‌ಡೈ ಹಚ್ಚಿಕೊಂಡವರು,' ಇತ್ಯಾದಿಯಾಗಿ........

ಆಗ ಕಾಣಿಸ್ಕೊಂಡ, ಬಿಲ್ಡಿಂಗ್ ಮಾಪುಳ್ಳೆ – ಅದೇ, ಅವರ ವಾಚ್ಮನ್! ಈ ಅವಾಂತರದಿಂದ ತಪ್ಪಿಸಿಕೊಳ್ಳೊಕ್ಕೋ ಏನೋ, ಎಲ್ಲೋ ಒಂದು ಮೂಲೇಲಿ ಯಾರ ಕಣ್ಣಿಗೂ ಬೀಳದಂತೆ ಗಡದ್ದಾಗಿ ನಿದ್ರೆಹೊಡೆದಿದ್ದನೇನೋ, ಕಣ್ಣಗಳನ್ನ ಉಜ್ತಾ, ಕಾಲೆಳೆದುಕೊಂಡು ಬಂದ, ಆರಾಮವಾಗಿ.

''ನೀರಿಲ್ಲಾ ಅಂತ ವರಿಮಾಡ್ಕೊಂಡು ವರಿಮಾಡ್ಕೊಂಡು, ಸ್ಟ್ರೋಕ್ ಬಂದ ಹಾಗಾಯ್ತು, ಮೇಡಮ್ಸ್.... ಇಲ್ಲೇ ಇದ್ರೆ, ನಿಮಗೂ ನನ್ನಿಂದ ವರಿ ಆಗತ್ತೆ ಅಂತ, ಆಸ್ಪತ್ರೆಗೆ ಹೋಗಿ, ಎಲ್ಲಾ ಟೆಸ್ಟ್ ಮಾಡಿಸ್ಕೊಂಡು, ಎರಡು ಸೂಜಿ ಹಾಕಿಸ್ಕೊಂಡು ಬಂದೆ... ಉಸ್ಸಪ್ಪಾ, ಸುಸ್ತಾಗಿದೆ! ಚೂರು ಕಾಫಿ ಕೊಡಿ ಯಾರಾದ್ರೂ.... ಬೇಗ......'' – ಅಚ್ಚುಕಟ್ಟಾಗಿ, ಹಾಸಿಗೆ ಹಾಸ್ಕೊಂಡು ಮಲಗೇಬಿಟ್ಟ!

✤

# ''ವಿಗ್''ನೇಶ್ವರನೂ ಎಣ್ಣೆ ಬಾಂಡ್ಲಿಯೂ

**- ಎಂ.ಕೆ. ಭಾಸ್ಕರ ರಾವ್**

ವಿಧಾನ ಸಭೆಗೆ ಚುನಾವಣೆ ನಡೆದಿದ್ದ ಸಮಯ. ಹಿರಿಯ ನಟರಲ್ಲಿ ಅನೇಕರು ತಮ್ಮಿಷ್ಟದ ರಾಜಕೀಯ ಪಕ್ಷಗಳನ್ನು ಸೇರಿ ಅದೃಷ್ಟ ಪರೀಕ್ಷೆಗೆ ತಮ್ಮನ್ನು ಒಡ್ಡಿಕೊಂಡಿದ್ದರು. ಅಂಥವರಿಗೆ ರಾಜಕೀಯದಲ್ಲಿ ಪ್ರೇಮ ಮೂಡಿದ್ದು ಅದಕ್ಕೆ ಕಾರಣವಾಗಿರಲಿಲ್ಲ. ಅಸಲಿ ಕಾರಣ ಸಿನಿಮಾದಲ್ಲಿ ಅವರನ್ನು ಕೇಳುವವರೇ ಇಲ್ಲವಾಗಿದ್ದು. ಅಂಥವರ ಪೈಕಿ ಒಬ್ಬಿಬ್ಬರಿಗೆ ಟಿಕೆಟ್ ಸಿಕ್ಕಿತ್ತು. ಎಲ್ಲ ಪಕ್ಷಗಳೂ ಮಾಜಿ ನಾಯಕ, ನಾಯಕಿಯರನೇಕರಿಗೆ ಟಿಕೆಟ್ ನೀಡಿದ್ದನ್ನು ಕಂಡಾಗ ವಿಧಾನ ಸಭೆ ಅಕ್ಷರಶಃ ವರ್ಣರಂಜಿತವಾಗಲಿದೆ ಎನಿಸಿತ್ತು. ಹಾಗೆ ಆಗಲಿಲ್ಲ ಎನ್ನುವುದು ಬೇರೆ ಮಾತು, ಇರಲಿ.

ಮಾಜಿ ನಾಯಕರಲ್ಲಿ ಅನೇಕರಿಗೆ ಟಿಕೆಟ್ ಸಿಗದಿದ್ದರೂ ಪಕ್ಷದ ನಾಯಕರ ಆಶೀರ್ವಾದ ಲಭಿಸಿತ್ತು. ನಾಯಕರು ಮುಖ್ಯಮಂತ್ರಿಯಾದರೆ ಇಂದಲ್ಲ ನಾಳೆ ಒಂದಲ್ಲಾ ಒಂದು ರಾಜಕೀಯ ಹುದ್ದೆ ಸಿಕ್ಕೀತೆಂಬ ಆಸೆ ನಿರೀಕ್ಷೆಯಲ್ಲಿ ಅವರು ಪಕ್ಷದ ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡಬೇಕಾಗಿತ್ತು. ಅದಕ್ಕಿಂತಲೂ ಹೆಚ್ಚಾಗಿ ನಾಯಕರೊಂದಿಗೇ ಪ್ರವಾಸ ಮಾಡುವುದು ಅವರ ಆದ್ಯತೆಯಾಗಿತ್ತು. ತಮ್ಮ ಮುಖವನ್ನು ನಾಯಕರ ಮನಸ್ಸಿನಲ್ಲಿ ಅಚ್ಚೊತ್ತುವಂತೆ ಮಾಡುವುದಕ್ಕೆ ಸಲೀಸಾದ ದಾರಿ ಎಂದರೆ ದಿನವೂ ಮುಸುಡಿ ತೋರಿಸಿ ಮುಜುರೆ ಸಲ್ಲಿಸುವುದೇ ಆಗಿತ್ತು.

ಜನ ತಮ್ಮನ್ನು ಗುರುತಿಸುತ್ತಾರೋ ಉಫೇ ಉಫೇ ಎನ್ನುತ್ತಾರೋ ಎನ್ನುವುದು ಅವರಿಗಂತೂ ಮುಖ್ಯವಾಗಿರಲಿಲ್ಲ. ಅವರ ನಟನೆಯ ಸಿನಿಮಾಗಳನ್ನು ಸಾರ್ವಜನಿಕ ಸಭೆಗೆ ಬರುವ ಪಡ್ಡೆ ಹುಡುಗರಲ್ಲಿ ಎಷ್ಟು ಜನ ನೋಡಿದ್ದಾರೋ ಎನ್ನುವ ಅನುಮಾನ ಮಾಜಿ ಹೀರೋಗಳಲ್ಲೂ ಇದ್ದೇ ಇತ್ತು. ಹಾಗಾಗಿ ಅವರ ಪ್ರಸ್ತುತಿ ಪಕ್ಷದ ನಾಯಕನ/ನಾಯಕರ ಗಮನ ಸೆಳೆಯುವುದರಲ್ಲಿ ಇತ್ತೇ ಶಿವಾಯಿ ಸಭಿಕರ ಮೇಲಿರಲಿಲ್ಲ.

ಬೆಂಗಳೂರಿನಿಂದ ಬಹಳ ದೂರವೇನೂ ಅಲ್ಲದ ಜಿಲ್ಲಾ ಕೇಂದ್ರವೊಂದರಲ್ಲಿ ಆ ರಾಜಕೀಯ ಪಕ್ಷದ ಪ್ರಕಟಣೆ ಹೇಳಿಕೊಂಡಂತೆ ''ಭಾರೀ ಸಾರ್ವಜನಿಕ ಸಭೆ'' ಸೇರಿತ್ತು. ಮುಖ್ಯ ಮಂತ್ರಿ ಅಭ್ಯರ್ಥಿಯ ಭಾಷಣವೂ ಮಟಮಟ ಮಧ್ಯಾಹ್ನಕ್ಕೆ ನಿಗದಿಯಾಗಿತ್ತು. ಆ ಊರಿಗೆ ಬರುವ ಪೂರ್ವದಲ್ಲಿ ನಾಯಕರ ಸವಾರಿ ಆರೇಳು ಸಾರ್ವಜನಿಕ ಸಭೆಗಳಲ್ಲಿ ಪಾಲ್ಗೊಂಡು ಮತ ಭಿಕ್ಷಾ ಯಾಚನೆ ಮಾಡಿತ್ತು. ಅವರು ಹೋದಲ್ಲಿ ಬಂದಲ್ಲಿ ಭಾರೀ ಜನಸ್ತೋಮ ಸೇರುವುದಕ್ಕೆ ಏನೆಲ್ಲ ಬೇಕಿತ್ತೋ ಅದೆಲ್ಲವನ್ನೂ ಪಕ್ಷ ಮಾಡಿತ್ತು.

''ಭಾರೀ'' ಸಭೆಗಳಲ್ಲೆಲ್ಲ ನಮ್ಮ ಕನಾ ಪ್ರಚಾರದ ಭಾಷಣ ಬಿಗಿದಿದ್ದರು. ಪಕ್ಕದಲ್ಲಿ ಕುಳಿತಿದ್ದ ಮು.ಮಂ. ಅಭ್ಯರ್ಥಿಯನ್ನು ಇಂದ್ರ, ಚಂದ್ರ, ಸೂರ್ಯರಿಗೆ ಹೋಲಿಸಿ ಅವರ ಗಮನವನ್ನು ತಮ್ಮತ್ತ ಸೆಳೆಯುವ ಸರ್ಕಸ್ ಮಾಡಿದ್ದರು. ತಮ್ಮ ಭಾಷಣ ಕಾಲದಲ್ಲಿ

ಮು.ಮಂ. ಅಭ್ಯರ್ಥಿ ಕನಾ ಹೆಸರನ್ನು ಪ್ರಸ್ತಾಪಿಸಿದಾಗೆಲ್ಲ ಎದ್ದೆದ್ದು ಸಭೆಗೆ ಕೈ ಮುಗಿಯುವ ಕೆಲಸವನ್ನು ಮಾಡಿದ್ದರು.

ಬಿಸಲಲ್ಲೇ ಸಭೆ ಮುಗಿಯಿತು. ಬಿಸಿಲ ಹಣ್ಣನ್ನು ತಿನ್ನುತ್ತಲೇ ಭಾಷಣ ಕೇಳಿದ ಸಾರ್ವಜನಿಕರು, ಮತ್ತೊಂದು ರಾಜಕೀಯ ಪಕ್ಷದ ಸಭೆಯತ್ತ ಪೂರ್ವಭಾವೀ ಕರಾರಿನಂತೆ ಹೆಜ್ಜೆ ಹಾಕಿದರು. ಅವರಲ್ಲೇ ಒಬ್ಬಿಬ್ಬರು ಮಾಜಿ ಯುವಕರು ಬಂದು ಕನಾನನ್ನು ಮಾತಾಡಿಸಿ ಕೈಕುಲುಕಿ ಸೆಲ್ಫೀ ತೆಗೆದುಕೊಂಡರು. ಹಳೆಯ ಆ ದಿನಗಳನ್ನು ನೆನಪು ಮಾಡಿಕೊಂಡ ಕನಾ, ಕೆಲವರಾದರೂ ತನ್ನನ್ನು ಮರೆತಿಲ್ಲವಲ್ಲ ಎಂಬ ಖುಷಿಯಲ್ಲಿ ಮುಲುಕಿದ.

ಊರಿನ ಭಾರೀ ಶ್ರೀಮಂತ, ಪಕ್ಷದ ಮುಖಂಡರೊಬ್ಬರ ಮನೆಯಲ್ಲಿ ವಿವಿಐಪಿಗಳಿಗೆ ಜಬರ್ದಸ್ತ್ ಆತಿಥ್ಯದ ಏರ್ಪಾಡಾಗಿತ್ತು. ಹೋಳಿಗೆ, ಮಾವಿನ ಕಾಯಿ ಸೀಕರಣೆ... ಮಾಯಾ ಬಜಾರ್ ಸಿನಿಮಾದಲ್ಲಿ ತೋರಿಸುತ್ತಾರಲ್ಲ ಅಂಥ ಭರ್ಜರಿ ಭೋಜನದ ವ್ಯವಸ್ಥೆ. ತಮಗೆ ಬೇಕಾದವರನ್ನೆಲ್ಲ ಶ್ರೀಮಂತ ಊಟಕ್ಕೆ ಕರೆದಿದ್ದ. ಜನವೋ ಜನ. ಪುಕ್ಕಟ್ಟೆ ಊಟ ಬೇರೆ. ಅದರ ಮುಂದಿನ ಅಧ್ಯಾಯ ನೂಕು ನುಗ್ಗಲು. ಚುನಾವಣೆ ನಂತರ ಮು.ಮಂ. ಆಗಲಿರುವಾತನ ಹತ್ತಿರ ಹೋಗುವ, ಸೆಲ್ಫೀ ಕ್ಲಿಕ್ಕಿಸಿಕೊಳ್ಳುವ ಧಾವಂತ ಎಲ್ಲರಲ್ಲೂ.

ಊಟ ಮುಗಿದರೂ ತಳ್ಳಾಟ ನೂಕಾಟ ನಿಂತಿರಲಿಲ್ಲ. ನಾಯಕರಿಗೆ ಮುಂದಿನ ಸಭೆಗೆ ಹೋಗುವ ಆತುರ, ಚಡಪಡಿಕೆ. ಕಾರಿನ ಬಳಿಗೆ ತೆರಳಿದರು. ಆ ಕಾರಿನಲ್ಲೇ ಕನಾಗೆ ಒಂದು ಸೀಟು. ಕಾರನ್ನು ಇನ್ನೇನು ಏರಬೇಕೆಂಬಷ್ಟರಲ್ಲಿ ಕನಾ ಅಲ್ಲಿ ಇಲ್ಲ. ಮು.ಮಂ. ಅತ್ತ ಇತ್ತ ನೋಡಿದರು. ಕನಾ ನಾಪತ್ತೆ. ಮು.ಮಂ. ಅಭ್ಯರ್ಥಿ ಗಮನಕ್ಕೆ ಬಂದುದೇ ತಡ ಎಲ್ರೀ ಅವರು ಎಂದು ಕೇಳಿದರು. ಪಕ್ಕದಲ್ಲೇ ಇದ್ದ ಗನ್ ಮ್ಯಾನ್‌ಗೆ ಅವರ್ನ ಕರೀರಿ, ಲೇಟಾಯ್ತು ಮುಂದಿನ ಸಭೆಗೆ ಎಂದು ಗುಟುರಿದರು.

ಮು.ಮಂ. ಅಭ್ಯರ್ಥಿ ತನ್ನನ್ನೇ ಕೇಳುತ್ತಿದ್ದಾರೆಂಬುದನ್ನು ಖಚಿತಪಡಿಸಿಕೊಂಡ ಕನಾ ''ಇಲ್ಲೇ ಇದ್ದೀನಲ್ಲ ಸಾರ್'' ಎಂದು ರಾಗ ಎಳೆದರು. ಮು.ಮಂ. ಅಭ್ಯರ್ಥಿ ಮೈಯನ್ನೆಲ್ಲ ಕ್ವೆಶ್ಚನ್ ಮಾರ್ಕ್‌ನಂತೆ ಮಾಡಿಕೊಂಡು ಕನಾನನ್ನು ಆಪಾದಮಸ್ತಕ ನೋಡಿ ಮುಗುಳ್ನಕ್ಕರು. ''ಇದೇನ್ರೀ ಎಣ್ಣೆ ಬಾಂಡ್ಲಿ'' ಎಂದರು. ಕನಾ, ಥಟ್ಟೆಂದು ತಲೆಯ ಮೇಲೆ ಕೈ ಎಳೆದುಕೊಂಡರು. ಆ ಜನ ಜಂಗುಳಿಯ ತಳ್ಳಾಟ ನೂಕಾಟದಲ್ಲಿ ಅವರ ವಿಗ್ ಎಲ್ಲೋ ಬಿದ್ದು ಹೋಗಿತ್ತು. ಅಥವಾ ವಿಗ್ ವಿಷಯ ಗೊತ್ತಿದ್ದ ಯಾರೋ ಕಿಡಿಗೇಡಿಗಳು ಅದನ್ನು ಎಳೆದು ಯಾಮಾರಿಸಿದ್ದರು.

ಅದನ್ನು ಹುಡುಕುತ್ತ ಕೂರಲು ಸಮಯ ಇರಲಿಲ್ಲ. ಮುಂದಿನ ಸಭೆಗೆ ಹೋಗಬೇಕಾಗಿತ್ತು. ಆದರೆ ಆ ಸಭೆಗಳಿಗೆ ಕನಾ ಹಾಜರಾಗಲಿಲ್ಲ. ಸಭೆ ನಡೆಯುತ್ತಿದ್ದಾಗ ಕಾರಲ್ಲೇ ಕೂತ, ಕನಾ ಮರಮರ ಮರುಗಿದ. ಸ್ಪೇರ್ ಟಯರ್ ಇಟ್ಟುಕೊಳ್ಳುವಂತೆ ಸ್ಪೇರ್ ವಿಗ್ ಇಟ್ಟುಕೊಳ್ಳಬೇಕೆಂಬ ಸಂಕಲ್ಪ ಮಾಡಿದ. ಈಗ ಅವರ ಹ್ಯಾಂಡ್ ಬ್ಯಾಗಿನಲ್ಲಿ ಸ್ಪೇರ್ ವಿಗ್ ಕಡ್ಡಾಯವಾಗಿರುತ್ತದೆ.

✤